ಜನಶಕ್ತಿ



ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 43
ಅಕ್ಟೋಬರ್ 21, 2012

ಪುಟ 16 ರೂ. 5/-



ಪ್ರೊ. ಗೋವಿಂದ ಸಮಿತಿ ವರದಿ

ಸಹಸ್ರಾರು ಕನ್ನಡ ಶಾಲೆಗಳೆ ಗೋವಿಂದ... ಗೋವಿಂದಾ....!



ವೆನೆಜುವೆಲಾ :
ಚವೇಜ್
ಕ್ರಾಂತಿಕಾರಿ
ಪರ್ಯಾಯ ಧೋರಣೆಗಳಿಗೆ
ಮತ್ತೆ ಜನಾದೇಶ

ಹಣ ಮರಗಳಲ್ಲಿ ಬೆಳೆಯುವುದಿಲ್ಲ....! ಮತ್ತೆಲ್ಲಿ....? ಕಲ್ಲಿದ್ದಲು ಗಣಿಗಳಲ್ಲಿ.....?



ಕಾವೇರಿ : ಮೂಡದ ಒಮ್ಮತ



ಕಲ್ಲು ಕಟ್ಟಡದಿಂದ ಭಾಗ್ಯದ ಬಾಗಿಲು ತೆರೆದಿತೆ ?

ಮುಳಬಾಗಿಲು : ದಲಿತರನ್ನು ಬೀದಿಗೆ ತಳ್ಳುವುದರ ವಿರುದ್ಧ ಯಶಸ್ವಿ ಹೋರಾಟ



ದನ ಕಾಯಬೇಕೇ?

'ದನ ಕಾಯುವುದು' ಮುಖ್ಯವೋ ಅಥವಾ ಹೊಟ್ಟೆಗೆ ಕೂಳಿಲ್ಲದೆ ಪೌಷ್ಟಿಕತೆಯ ಲವಲೇಶವೂ ದೂರಕದೆ ರಕ್ತ ಬತ್ತಿ, ಮಾಂಸ ಕರಗಿ, ನರನಾಡಿಗಳು ಸೆಣೆತು ಇಂದು ನಾವು ಕಾಣುತ್ತಿರುವ ಕಾಲ್ಪನಿಕ ಚಿತ್ರ ಬೇತಾಳದ ಹಾಗೆ ಎಲುಬಿನ ಗೂಡಾಗಿರುವ ಬಹು ಸಂಖ್ಯಾತ ದುಡಿಯುವ ಬಡವರ ಮಾನ, ಪ್ರಾಣ ಕಾಪಾಡುವುದು ಮುಖ್ಯವೋ ಎಂಬ ಪ್ರಶ್ನೆ ಇಂದು ಎದುರಾಗಿದೆ. ಕೆಲವರು ದನ ಕಾಯುವುದೇ ಪ್ರಾಮುಖ್ಯವೆಂದು ಹೇಳುತ್ತಿದ್ದಾರೆ. ಅದಕ್ಕೇ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದಾರೆ. ಹಲವರಿಗೆ ಮಾಂಸವೇ ಪೌಷ್ಟಿಕಾಹಾರ. ಹಾಲು, ಮೊಸರು, ಬೆಣ್ಣೆ, ತುಪ್ಪ, ಇವರ ಕೈಗೆ ಎಟುಕಲಾರದಷ್ಟು ಎತ್ತರಕ್ಕೆ ಜಿಗಿದಿದೆ. ಇವೆಲ್ಲವೂ ಉಳ್ಳವರಿಗೆ ಮಾತ್ರ ಎಂಬಂತಾಗಿಬಿಟ್ಟಿದೆ.



ಇನ್ನು ಕೆಲವರಿಗೆ ಹಸು ಎಮ್ಮೆಗಳ ಮಾಂಸದಿಂದ ಉತ್ಪತ್ತಿಯಾದ ಹಾಲು, ಮೊಸರು, ಬೆಣ್ಣೆ, ತುಪ್ಪ, ತರಕಾರಿಗಳೇ ಪೌಷ್ಟಿಕಾಹಾರ, ಇವರು ಶುದ್ಧ ಶಾಖಾಹಾರಿಗಳು !

ಆಹಾರಕ್ಕಾಗಿ ಹಿಂಸೆ ಇಂದಿನದ್ದಲ್ಲ. ತಲೆ ತಲಾಂತರದ್ದು ಒಂದು ಕಾಲದಲ್ಲಿ ಎಲ್ಲರೂ ಮಾಂಸ ತಿನ್ನುತ್ತಿದ್ದರೆಂಬುದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಆಧಾರ ಸಹಿತವಾದ ಈ ಕೆಳಗಿನ ಕೆಲವು ಉದಾಹರಣೆಗಳನ್ನು ಓದಿ.

ಭಾರತದಲ್ಲಿ ಒಂದು ಕಾಲದಲ್ಲಿ ಗೋಮಾಂಸ ತಿನ್ನದೆ ಯಾವ ಬ್ರಾಹ್ಮಣನೂ ಇರಲಿಲ್ಲ. (ವಿವೇಕಾನಂದರ ಸಮಗ್ರ ಲೇಖನಗಳು ಸಂಪುಟ 3, ಪುಟ 174.) ತಿಳುವಳಿಕೆ ಇಲ್ಲದ ಜನ ಸ್ಥಳೀಯ ಸಂಪ್ರದಾಯಗಳನ್ನು ನಮ್ಮ ಧರ್ಮದ ಮೂಲ ತತ್ವವೆಂದು ತಿಳಿಯುತ್ತಿರುವುದು ನಾವು ಮಾಡುತ್ತಿರುವ ಬಹಳ ದೊಡ್ಡ ತಪ್ಪು. ರಾಮ ಕೃಷ್ಣಾಶ್ರಮದವರು ಪ್ರಕಟಿಸಿದ ಸಮಗ್ರ ಲೇಖನಗಳು ಸ್ವಾಮಿ ವಿವೇಕಾನಂದ. ಸಂಪುಟ 3, ಪುಟ 173. ವೇದದಲ್ಲಿ ನಾವು ಓದುವುದೇನೆಂದರೆ ಒಬ್ಬ ಸನ್ಯಾಸಿ, ರಾಜ ಅಥವಾ ಮಹಾಪುರುಷ ಮನೆಗೆ ಬಂದರೆ ಅತ್ಯುತ್ತಮವಾದ ಎತ್ತನ್ನು ಕೊಲ್ಲುತ್ತಿದ್ದರು. ಅದೇ ಪುಸ್ತಕ ಪುಟ 174. ಬ್ರಾಹ್ಮಣ ಶ್ರಾದ್ಧದ ಸಮಯದಲ್ಲಿ ಕೊಟ್ಟ ಮಾಂಸ ತಿನ್ನದಿದ್ದರೆ ಅವನು ನರಕಕ್ಕೆ ಹೋಗುತ್ತಾನೆ. ವಶಿಷ್ಠ ಧರ್ಮ ಶಾಸ್ತ್ರ 11/34. ಮಗಳ ಮದುವೆಯ ಸಮಯದಲ್ಲಿ ಎತ್ತುಗಳನ್ನು ಹಸುಗಳನ್ನು ಕೊಲ್ಲುತ್ತಿದ್ದರು, ಋಗ್ವೇದ (10/85/13) ಇಂದ್ರನು ಹಸು, ಕರು, ಕುದುರೆ, ಮತ್ತು ಎಮ್ಮೆ ಮಾಂಸ ತಿನ್ನುತ್ತಿದ್ದ. (ಋಗ್ವೇದ 6/17/1) ಅತಿಥಿಗಳು ಆಗಮಿಸಿದಾಗ, ಪೂರ್ವಿಕರ ಶ್ರಾದ್ಧದ ಸಮಯದಲ್ಲಿ ಮತ್ತು ಮದುವೆಯ ಸಂದರ್ಭದಲ್ಲಿ ಹಸುವನ್ನು ಕೊಲ್ಲಬೇಕು. ಆಪಸ್ತಂಭಗ್ರಹ ಸೂತ್ರ, (1/3/10) ಈ ಎಲ್ಲಾ ದಾಖಲೆಗಳ ಹೊರತಾಗಿಯೂ ಇನ್ನಷ್ಟು ತಿಳಿದುಕೊಳ್ಳಬೇಕೆಂದಿದ್ದರೆ ನವಕರ್ನಾಟಕ ಪಬ್ಲಿಕೇಷನ್ಸ್‌ದವರು 2004 ರಲ್ಲಿ ಪ್ರಕಟಿಸಿದ ಚರಿತ್ರೆಯ ವಿಕೃತೀಕರಣ ಭಾರತದ ಬಹುಮುಖೀ ಸಂಸ್ಕೃತಿಯ ಐಕ್ಯತೆಗೆ ಧಕ್ಕೆ ಎಂಬ ಪುಸ್ತಕವನ್ನು ಓದಿ.

ಯಾವುದು ಶ್ರೇಷ್ಠ ಯಾವುದು ಕನಿಷ್ಟ, ಯಾರದ್ದು ಉತ್ತಮ ಕುಲ ಯಾರದ್ದು ಕೀಳು ಕುಲ ಯಾವುದು ಧರ್ಮ ಯಾವುದು ಅಧರ್ಮ, ಯಾವುದು ಮಡಿ ಯಾವುದು ಮೈಲಿಗೆ ಈ ಪ್ರಶ್ನೆಗಳಿಗೆಲ್ಲ ಮಹಾನ್ ಮಾನವತಾವಾದಿ ವಿಚಾರವಾದಿಗಳು ಸಮಾಜ ಸುಧಾರಕರುಗಳು ಎಂದೋ ಉತ್ತರ ಹೇಳಿದ್ದಾರೆ. ಮನುಷ್ಯತ್ವಕ್ಕಿಂತ ಹಿರಿದಾದದ್ದು ಈ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲವೆಂದು ಮಹಾನುಭಾವರುಗಳೆಲ್ಲ ಸಾರಿದ್ದಾರೆ. ನೋಡಿ ಅತ್ಯಂತ ಶ್ರೇಷ್ಠ ಕುಲ ತಮ್ಮದೆಂದು ಹೇಳಿಕೊಳ್ಳುತ್ತಿರುವವರಲ್ಲಿಯೂ ಕೊಲೆ, ಸುಲಿಗೆ, ಅತ್ಯಾಚಾರಗಳು ನಡೆಯುತ್ತಿವೆ; ಇನ್ನು ಮಾಂಸ ತಿನ್ನುವ ಎಲ್ಲರೂ ತಾಮಸರು ಕ್ರೂರಿಗಳು ಎಂದು ಹೇಳಲಾಗುತ್ತಿದೆ. ಈ ಆಪಾದನೆಗೆ ಯಾವ ಆಧಾರವೂ ಇಲ್ಲ ಅಲ್ಲವಾ?

ಇನ್ನು ನಮ್ಮ ಜನಗಳಿಗೆ ಒಂದು ಕಿವಿಮಾತು ಅದೇನೆಂದರೆ ಈ ಜಾತಿ ಸೂಚಕ ಚಿನ್ಹೆಗಳನ್ನು ಮೊದಲು ಕಿತ್ತೆಸೆಯಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮದೆಲ್ಲವೂ ಒಂದೇ ಕುಲ. ಅದು ಈ ಜಗತ್ತಿನಲ್ಲಿಯೇ ಅತ್ಯಂತ ಉತ್ತಮವಾದ ಮಾನವಕುಲ. ಮಾನವರಾಗಿ ಬದುಕಿ ಬಾಳುವುದೇ ಶ್ರೇಷ್ಠತೆ.

ಡಾ. ವಿ.ಆರ್.ನಾರ್ಲಾ ಮತ್ತು ಎಂ.ಎಂ. ಕುಂಟೆ ಅವರು ಹೇಳಿದಂತೆ ಒಂದೊಂದು ಜಾತಿಗೂ ಒಂದೊಂದು ನೀತಿ ಇವೆಲ್ಲವೂ ಜನತೆಯ ಐಕ್ಯತೆ ಒಡೆಯುವುದಕ್ಕಾಗಿ ಕೆಲವರು ಸೃಷ್ಟಿಸಿದ್ದು.

ಪಾರ್ಸಿಗಳಿಗೆಲ್ಲ ಒಂದೇ ಧರ್ಮ ಗ್ರಂಥ, ಜೆಂಡ ಅವಸ್ತಾ, ಬೌದ್ಧರಿಗೆಲ್ಲ ಧರ್ಮ ಪದ, ಯಹೂದಿಯರಿಗೆ ತಾಲ್ ಮುದ್, ಕ್ರೈಸ್ತರಿಗೆಲ್ಲಾ ಬೈಬಲ್, ಮುಸ್ಲಿಮರಿಗೆ ಖುರಾನ್.

ವಿಶ್ವದ ವಿವಿಧ ಧರ್ಮಗಳಲ್ಲಿ ಹಿಂದೂ ಧರ್ಮ ಮಾತ್ರ ಎರಡು ವರ್ಗದ ಧರ್ಮ ಗ್ರಂಥಗಳನ್ನು ಇಟ್ಟುಕೊಂಡಿದೆ. ಮೇಲ್ಜಾತಿಗಳಿಗಾಗಿ ವೇದಗಳು ಶೂದ್ರರಿಗಾಗಿ ಪುರಾಣಗಳು, ಶೂದ್ರರನ್ನು ಬಗ್ಗು ಬಡಿದು ತಾವು ಹೇಳಿದ್ದಕ್ಕೆಲ್ಲ ತಲೆ ಬಾಗುವಂತೆ ಮಾಡಲು ಧರ್ಮ ಶಾಸ್ತ್ರಕಾರರು ಹೂಡಿದ ಸಂಚು ಇದು ಒಂದೇ ಬಗೆಯ ಅಪರಾಧಕ್ಕೆ ಜಾತಿಗಳ ಆಧಾರದ ಮೇಲೆ ಬೇರೆ ಬೇರೆ ಶಿಕ್ಷೆ ಅನುಮೋದಿಸಿದರು. ಉದಾಹರಣೆಗಾಗಿ ಬ್ರಾಹ್ಮಣನು ಶೂದ್ರನಿಗೆ ಬೈದರೆ ಶಿಕ್ಷೆ ಇಲ್ಲ, ಆದರೆ ಶೂದ್ರನೂ ಬ್ರಾಹ್ಮಣನಿಗೆ ಬೈದರೆ ನಾಲಿಗೆಯನ್ನು ಕತ್ತರಿಸುವ ಶಿಕ್ಷೆ. ಹಲವಾರು ವರ್ಷಗಳ ವರೆಗೆ ಆಚರಿಸಿಕೊಂಡು ಬಂದ ಹಾಗೂ ಇಂದಿಗೂ ಸಂಪೂರ್ಣವಾಗಿ ಬಿಟ್ಟು ಕೊಡದ ಇಬ್ಬಂದಿತನದಿಂದಾಗಿ ನಮ್ಮ ರಾಷ್ಟ್ರೀಯ ಜೀವನದಲ್ಲಿ, ಚಿಂತನೆಯಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಇಬ್ಬಂದಿತನ ಇರುವುದು ಸಹಜವೆಂದು ತೋರಿದರೆ ಆಶ್ಚರ್ಯ ಪಡಬೇಕಾದದ್ದಿಲ್ಲ.

ಈ ಎಲ್ಲ ಅನಾಗರಿಕತೆ ವಂಚನೆ ಕ್ರೌರ್ಯಗಳಿಗೆ ಕಾನೂನು ರೂಪ ಕೊಡಲು ಕೆಲವರಿಗೆ ದೆಹಲಿ ಗದ್ದುಗೆ ಹಿಡಿಯ ಬೇಕಾಗಿದೆ. ಈ ಕುಹತನವನ್ನು ನಮ್ಮ ಬಹುಸಂಖ್ಯಾತ ಹಿಂದುಳಿದ ಮಂದಿಗಳು ಮತ್ತು ನಮ್ಮ ದಲಿತರುಗಳು ಅರಿತುಕೊಂಡು ಮುನ್ನಡೆಯಬೇಕಾಗಿದೆ.

– ವಿಡಂಬಾರಿ

ಹುಣಸೂರು: ಬಗರ್ ಹುಕುಂ ಸಾಗುವಳಿ ರೈತರ ಪ್ರತಿಭಟನೆ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಬಗರ್ ಹುಕುಂ ರೈತರಿಗೆ ಸಾಗುವಳಿ ಪತ್ರ ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ತಾಲ್ಲೂಕು ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಹುಣಸೂರು ತಾಲ್ಲೂಕಿನಲ್ಲಿ ಕಳೆದ 20 ವರ್ಷಗಳಿಂದ ಬಗರ್ ಹುಕುಂ ರೈತರಿಗೆ ಸಾಗುವಳಿ ಪತ್ರ ನೀಡದೆ ಇರುವುದನ್ನು ಖಂಡಿಸಿ ಕೆಪಿಆರ್‌ಎಸ್ ನೇತೃತ್ವದಲ್ಲಿ ರೈತರನ್ನು ಸಂಘಟಿಸಿ ಮೊದಲ ಹಂತದ ಹೋರಾಟವಾಗಿ ಜುಲೈ ತಿಂಗಳಲ್ಲಿ ತಹಶೀಲ್ದಾರ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಎರಡನೇ ಹಂತದ ಹೋರಾಟವಾಗಿ ಅ. 5 ರಂದು ಹುಣಸೂರು ಪಟ್ಟಣದ ಪುರಸಭೆ ಮೈದಾನದಿಂದ ಮೆರವಣಿಗೆ ಹೊರಟ ರೈತರು ಘೋಷಣೆ ಕೂಗುತ್ತಾ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

ನಂತರ ಕೆಲಕಾಲ ತಹಶೀಲ್ದಾರ್ ಕಛೇರಿ ಮುಂದೆ ಧರಣಿ ನಡೆಸಿ ತಹಶಿಲ್ದಾರ್‌ಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯ ಸುಳಿವನ್ನು ಅರಿತ ಹುಣಸೂರಿನ ಶಾಸಕ ಪ್ರತಿಭಟನೆ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಹಂತ ಹಂತವಾಗಿ ಸಾಗುವಳಿ ಪತ್ರ ಕೊಡಲು ಕ್ರಮವಹಿಸುವುದಾಗಿ ಭರವಸೆ ನೀಡಿದರು.



ಕೆಪಿಆರ್‌ಎಸ್ ಹೋರಾಟದ ಫಲವಾಗಿ ಕಳೆದ ನಾಲ್ಕುವರೆ ವರ್ಷಗಳಿಂದ ನಿದ್ದೆ ಮಾಡುತ್ತಿದ್ದ ಅಕ್ರಮ ಸಕ್ರಮ ಸಮಿತಿ ಸಭೆ ಸೇರಿ ಈಗಾಗಲೇ 80 ಜನರಿಗೆ ಸಾಗುವಳಿ ಪತ್ರ ವಿತರಿಸಿದೆ. ಅಲ್ಲದೆ ಹಂತ ಹಂತವಾಗಿ ಎಲ್ಲಾ ರೈತರಿಗೂ ಸಾಗುವಳಿ ಪತ್ರ ನೀಡಲಾಗುವುದು ಎಂದು ತಹಶೀಲ್ದಾರ್ ಹೇಳಿದ್ದಾರೆ.

ಪ್ರತಿಭಟನೆ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಮೈಸೂರು ಜಿಲ್ಲಾ ಸಂಘಟನಾ ಸಮಿತಿ ಜಿಲ್ಲಾ ಕಾರ್ಯದರ್ಶಿ ಹಾಗೂ ಕೆಪಿಆರ್‌ಎಸ್ ಜಿಲ್ಲಾ ಸಂಚಾಲಕರಾದ ಕೆ. ಬಸವರಾಜು ಮಾತನಾಡಿ ಭೂಗಳ್ಳತನಕ್ಕೆ ಹೆಸರು ವಾಸಿಯಾಗಿರುವ ಬಿಜೆಪಿ ಸರ್ಕಾರ ರೈತರ ಹೆಸರೇಳಿ ಅಧಿಕಾರಕ್ಕೆ ಬಂದು ರೈತನ ಬದುಕು ಕಿತ್ತುಕೊಳ್ಳಲು ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐ(ಎಂ) ಪಕ್ಷದ ಹುಣಸೂರು ಶಾಖಾ ಕಾರ್ಯದರ್ಶಿ ಹಾಗೂ ಕೆಪಿಆರ್‌ಎಸ್ ತಾಲ್ಲೂಕ ಸಂಚಾಲಕ ವಿ. ಬಸವರಾಜು ಕಲ್ಕುಣಿಕೆ ತಾಲ್ಲೂಕು ಸಹ ಸಂಚಾಲಕ ಉಡವೇಪುರ ಲೋಕೇಶ್, ರಾಮಚಂದ್ರ, ಸಣ್ಣತಮ್ಮ ನಾಯಕ, ಸಿಂಗಮಾರನಹಳ್ಳಿ ಜವರೇಗೌಡ, ರಾಜನಾಯಕ ಮುಂತಾದವರು ನೇತೃತ್ವ ವಹಿಸಿದ್ದರು.

ವಿ. ಬಸವರಾಜು. ಕಲ್ಕುಣಿಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕಲ್ಲು ಕಟ್ಟಡದಿಂದ ಭಾಗ್ಯದ ಬಾಗಿಲು ತೆರೆದಿತೆ?

ಬ್ರಿಟಿಷ್ ವಸಾಹಾತು ಶಾಹಿಗಳ ವಿರುದ್ಧ ದಿಟ್ಟ ಹೋರಾಟ ನಡೆಸಿದ ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರ ರಣಭೂಮಿ ಬೆಳಗಾವಿ ನಗರದಲ್ಲಿ ನಿರ್ಮಿಸಲಾದ "ಸುವರ್ಣ ವಿಧಾನ ಸೌಧ" ವನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಉದ್ಘಾಟನೆ ಮಾಡಿದ್ದಾರೆ. ಇದೊಂದು ಸ್ವಾಗತಾರ್ಹವಾದ ಘಟನೆ ಎಂದೇ ಹೇಳಬಹುದು. ಈ ಕಟ್ಟಡವು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹಿಂದುಳಿದಿರುವ ಉತ್ತರ ಕರ್ನಾಟಕದ ಜನರಿಗೆ ಆಡಳಿತವನ್ನು ಹತ್ತಿರವಾಗಿಸಲಿದೆ ಎಂಬ ಆಶಯ ಇರುವುದರಿಂದ ಯಾರು ಇದನ್ನು ಸ್ವಾಗತಿಸದೆ ಇರಲಾರರು. ಕರ್ನಾಟಕ, ಮಹಾರಾಷ್ಟ್ರ, ತಮಿಳನಾಡು, ಪಶ್ಚಿಮ ಬಂಗಾಳ ಮೊದಲಾದ ರಾಜ್ಯಗಳ ಬೇರೆ ಬೇರೆ ಬಾಷೆಗಳನ್ನಾಡುವ ಕುಶಲಕರ್ಮಿಗಳು ಮತ್ತು ಕಾರ್ಮಿಕರು ಒಟ್ಟಿಗೆ ಸೇರಿ ಈ ಕಟ್ಟಡವನ್ನು ನಿರ್ಮಾಣ ಮಾಡಿದ್ದಾರೆ ಎಂಬ ವಿಷಯವೂ ಸಹ ಹೆಮ್ಮೆಯದ್ದಾಗಿದೆ.

ಆದರೆ ಇಂತಹ ಇನ್ನೂ ಹತ್ತಾರೂ ಕಲ್ಲು ಕಟ್ಟಡಗಳನ್ನು ಕಟ್ಟುವುದರಿಂದ ಆಯಾ ಪ್ರದೇಶದ ಜನತೆಯ ಆಶೋತ್ತರಗಳು ಈಡೇರುತ್ತವೆ ಎಂದುಕೊಳ್ಳುವುದು ಕೇವಲ ಇನ್ನೊಂದು ಭ್ರಮೆ ಅಷ್ಟೆ. ಈಗಾಗಲೇ ಮಿನಿ ವಿಧಾನ ಸೌಧಗಳು ಜಿಲ್ಲೆಗೊಂದರಂತೆ ತಲೆಎತ್ತಿವೆ. ತಾಲೂಕು ಕೇಂದ್ರ್ರಗಳಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳನ್ನು ಒಳಗೊಳ್ಳುವ ಕಟ್ಟಡಗಳು ನಿರ್ಮಾಣ ಆಗಿವೆ, ಆಗುತ್ತಿವೆ. ಆದರೆ ಇಂತಹ ಸೌಧಗಳ ನಿರ್ಮಾಣದಿಂದ ಆಡಳಿತ ಜನತೆಯ ಹತ್ತಿರಕ್ಕೆ ಬಂದ ಅನುಭವದ ಉದಾಹರಣೆ ಇದೆಯೇ?

ಓಟು ಬೇಕಾದಾಗ ಅಷ್ಟೊಂದು ಹತ್ತಿರವಾಗುವ ಈ ರಾಜಕೀಯ ಪುಡಾರಿಗಳು ಗೆದ್ದ ಮೇಲೆ ಯಾಕೆ ಅಷ್ಟು ದೂರ? ಜನರ ದುಡ್ಡನ್ನೇ ಸಂಬಳವಾಗಿ ಪಡೆಯುವ ಈ ಸರ್ಕಾರಿ ಅಧಿಕಾರಿಗಳು ಅದೇ ಜನರನ್ನು ಹತ್ತಿರ ಸೇರಿಸಿಕೊಳ್ಳಲು ಯಾಕೆ ಅಸಹ್ಯಪಟ್ಟುಕೊಳ್ಳುತ್ತಾರೆ ? ಕಟ್ಟಡ ಕಲ್ಲುಗಳಿಂದಲೇ ನಿರ್ಮಾಣವಾಗಬೇಕು. ಆದರೆ ಆ ಕಟ್ಟಡಗಳ ಒಳಗೆಡೆ ಕೂತುಕೊಳ್ಳುವವರು ಸಹ ಕಲ್ಲಿನಂತವರಾದರೆ ಏನು ಗತಿ ? ಆಳುವ ಸರ್ಕಾರಗಳು ಜನರ ಆಶಯಗಳಿಗೆ ಸ್ಪಂಧಿಸಲಾರವು.

ಬೆಳಗಾವಿಯ "ಸುವರ್ಣ ವಿಧಾನ ಸೌಧ" ಯಾರ (ಕನಸಿನ) ಕೂಸು ಎಂಬ ಬಗ್ಗೆ ಪುಡಾರಿ ರಾಜಕಾರಣಿಗಳಲ್ಲಿ ವಿವಾಧವನ್ನು ಹುಟ್ಟುಹಾಕಿದೆ. ಯಡಿಯೂರಪ್ಪ 'ಇದು ತನ್ನ ಕೂಸು' ಎನ್ನುತ್ತಿದ್ದಾರೆ. ಕುಮಾರಸ್ವಾಮಿಯೂ 'ಅದು ತನ್ನ ಕೂಸು' ಎನ್ನುತ್ತಿದ್ದಾರೆ. ಅಂದರೆ ಈ ಪುಡಾರಿ ರಾಜಕಾರಣಿಗಳು ಪ್ರತಿಯೊಂದರಲ್ಲೂ ತಮ್ಮ ಹಿತ, ತಮ್ಮ ಲಾಭ, ತಮ್ಮ ಕೀರ್ತಿಯನ್ನೇ ಬಯಸುತ್ತಿರುತ್ತಾರೆ ಎಂಬುದು ಸ್ಪಷ್ಟವಾಗುತ್ತಿದೆ. ಇಂತಹ ರಾಜಕಾರಣ ಕೊನೆಗೊಳ್ಳುವವರೆಗೂ ಜನತೆಗೆ ನ್ಯಾಯ ಸಿಗಲಾರದು.

ಬೆಳಗಾವಿಯಲ್ಲಿ ನಿರ್ಮಾಣಗೊಂಡಿರುವ ಈ ಕಟ್ಟಡ ನಮ್ಮವರೇ ಆಗಿರುವ ಮರಾಠಿ ಭಾಷಿಕರೊಂದಿಗೆ ಒಂದು ಸೇತುವೆಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾದರೆ ಅದರ ನಿರ್ಮಾಣ ಎರಡೂ ರಾಜ್ಯಗಳ ಪುಡಾರಿ ರಾಜಕಾರಣ ಅವಕಾಶ ನೀಡುವುದೆ ? ನಾವು ನೆರೆಯೊರೆಯವರು ಪರಸ್ಪರ ಸೇಹ– ಸಹಕಾರದಿಂದ ಬದುಕಬೇಕು ಎಂದು ಪ್ರತಿಪಾದಿಸುವುದು ಶರಣಾಗತಿ ಎಂದು ತಿಳಿಯಬಾರದು. ಮಹಾರಾಷ್ಟ್ರದಲ್ಲಿ ಜನತೆಯನ್ನು ಪ್ರಚೋಧಿಸಿ ರಾಜಕೀಯ ಲಾಭ ಪಡೆಯಲು ಹಾತೊರೆಯುವ ಶಕ್ತಿಗಳು ಇವೆ. ಅದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಅಂತಹ ಶಕ್ತಿಗಳು ನಮ್ಮಲ್ಲಿ ಇಲ್ಲವೆ ? ತಮಿಳು ಭಾಷಿಕರ ವಿರುದ್ಧ ಭಾಷೋದ್ರೇಕಗೊಳಿಸುವ ಶಕ್ತಿ –ಸಂಘಟನೆಗಳು ಇಲ್ಲವೆ?

ರಾಷ್ಟ್ರೀಯ ಪಕ್ಷ ಗಳೆಂದು ಕರೆದುಕೊಳ್ಳುವ ಕಾಂಗ್ರೆಸ್, ಬಿಜೆಪಿ ಮೊದಲಾದ ಪಕ್ಷಗಳಿಗೇ ರಾಷ್ಟ್ರೀಯ ಏಕತೆಯ ಸಿದ್ಧಾಂತದಲ್ಲೇ ವಿಶ್ವಾಸ ಇಲ್ಲದಿರುವಾಗ ಜನತೆ ನೆಮ್ಮದಿಯಿಂದ ಬದುಕಲು ಸಾಧ್ಯವೆ ? ಅಧಿಕಾರ ಗಿಟ್ಟಿಸಿಕೊಳ್ಳಲು ಮಹಾರಾಷ್ಟ್ರದ ಬಿಜೆಪಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಪ್ರತಿಪಾದಿಸಿದರೆ ಕರ್ನಾಟಕದ ಬಿಜೆಪಿ ವಿರುದ್ಧವಾದ ಘೋಷಣೆ ನೀಡುತ್ತದೆ. ರಾಜಕೀಯ ಅಧಿಕಾರಕ್ಕಾಗಿ ಜನತೆಯನ್ನು ಭಾಷೆ, ಧರ್ಮ, ಜಾತಿ ಹೆಸರಿನಲ್ಲಿ ಒಡಕು ಉಂಟುಮಾಡುವ ಇಂತಹ ರಾಜಕೀಯ ಪಕ್ಷಗಳನ್ನು"ವಿಧಾನ ಸೌಧ" ದಿಂದ ದೂರ ಇಡಲು ಸಾಧ್ಯವಾದರೆ ಮಾತ್ರ ಆಡಳಿತ ಜನರ ಹತ್ತಿರಕ್ಕೆ ಬರಲು ಸಾಧ್ಯ.

ಕಾವೇರಿ: ಮೂಡದ ಒಮ್ಮತ

ಉಸ್ತುವಾರಿ ಸಮಿತಿಯ ಸೂಚನೆಗಳು

ಪ್ರಸ್ತುತವಾಗಿ ಕಾವೇರಿ ಉಸ್ತುವಾರಿ ಸಮಿತಿಯು (ಸಿಎಂಸಿ) ಉಭಯ ರಾಜ್ಯಗಳಲ್ಲಿ ನಡೆಸಿದ ಅಧ್ಯಯನದಂತೆ ಅಕ್ಟೋ.11ರಂದು ಸಭೆ ನಡೆಸಿದೆ. 8.85 ಟಿ.ಎಂ.ಸಿ ನೀರು ಹರಿಯುವಂತೆ ಕ್ರಮವಹಿಸಲು ಸೂಚಿಸಿದೆ. ಇದು ಮಳೆ ನೀರಿನ ಕೊರತೆಯ ಪ್ರಮಾಣವನ್ನು ಆಧರಿಸಿ ನೀರು ಹಂಚಿಕೊಳ್ಳಬೇಕೆಂಬ ಹಿಂದಿನ ದುಸ್ಥಿತಿ ಸೂತ್ರವನ್ನು ಅನುಸರಿಸಿದ್ದಾಗಿದೆ. ಒಂದು ವೇಳೆ ಈಶಾನ್ಯ ಮಾರುತದಲ್ಲಿ ಉತ್ತಮ ಮಳೆಯಾದಲ್ಲಿ ಈಗಿನ ಸಂಗ್ರಹದ ನೀರನ್ನು ತಮಿಳುನಾಡಿಗೆ ಬಿಡುವ ಪ್ರಮೇಯ ಇಲ್ಲವಾಗುವ ನಿರೀಕ್ಷೆಯನ್ನು ಕರ್ನಾಟಕ ಸರಕಾರ ಹೊಂದಿದೆ. ಆದರೆ ನೀರು ಹಂಚಿಕೊಳ್ಳಬೇಕಾದ ಹೊಣೆಗಾರಿಕೆ ಮಾತ್ರ ಖಚಿತವಾಗಿದೆ. ಸುಪ್ರಿಂಕೋರ್ಟ್ ಸಿಆರ್ಎ ಮುಂದೆ ಅಹವಾಲು ಸಲ್ಲಿಸಿ ತೀರ್ಮಾನ ಕೈಗೊಳ್ಳಬಹುದೆಂದು ಸೂಚಿಸಿರುವುದರಿಂದ ಅದರತ್ತ ಕ್ರಮ ವಹಿಸುವುದು ಅಗತ್ಯ.



ಸರಕಾರದ ನಿರ್ಲಕ್ಷ್ಯತನ–ನಿರ್ಲಜ್ಯತೆ

ಇದೇ ಹೊತ್ತಿನಲ್ಲಿ ಪ್ರಧಾನಿಗಳು ಅಧ್ಯಕ್ಷರಾಗಿರುವ ಕಾವೇರಿ ನದಿ ಪ್ರಾಧಿಕಾರವು ಕರ್ನಾಟಕ ಸರಕಾರದ ಪುನರ್ ಪರಿಶೀಲನಾ ಮನವಿಯನ್ನು ತಿರಸ್ಕರಿಸಿದೆ ಎಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿರುವುದು ಸರಿಯಲ್ಲ. ಏನಾದರೂ ತೀರ್ಮಾನ ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದ ಪೂರ್ಣ ಸಭೆ ಸೇರಿಯೇ ತೆಗೆದುಕೊಳ್ಳಬೇಕು. ಅಂತಹ ಸಭೆ ಈಗ ಸೇರಿಲ್ಲ. ಹೀಗಿರುವಾಗ ಪ್ರಧಾನಿ ಒಬ್ಬರೇ ತೀರ್ಮಾನ ಹೇಳಲು ಬರುವುದೂ ಇಲ್ಲ. ಇದರಲ್ಲಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳೂ ಸದಸ್ಯರಾಗಿದ್ದಾರೆ. ವಿಶೇಷವೆಂದರೆ ಕರ್ನಾಟಕವನ್ನೂ ಒಳಗೊಂಡು ಯಾವ ರಾಜ್ಯದ ಮುಖ್ಯಮಂತ್ರಿಯೂ ಸಭೆ ಸೇರಿಸಲು ಕೋರಿಯೇ ಇಲ್ಲ. ಹಾಗೆ ಕೋರದೇ ಸಭೆ ಸೇರುವುದಾದರೂ ಹೇಗೆ ಎನ್ನುತ್ತವೆ ಮೂಲಗಳು. ಅಂದರೆ ನಮ್ಮ ಮುಖ್ಯಮಂತ್ರಿಗಾದರೂ ಇದರ ಅಗತ್ಯ ಯಾಕೆ ಕಾಣುತ್ತಿಲ್ಲ. ಬದಲಾಗಿ ಈಗಲೂ ಪ್ರತಿ ದಿನ ಪ್ರಧಾನಿಗಳಿಂದಲೇ ನಮಗೆ ಅನ್ಯಾಯವಾಗಿಯೆಂದು ಅಬ್ಬರಿಸುವುದಾದರೂ ಯಾಕೆ?.

ಮಾತ್ರವಲ್ಲ ಕಾವೇರಿ ನೀರು ಹಂಚಿಕೆ ವಿಷಯ, ವಿವಾದ ಸಮಸ್ಯೆಗಳು ಖಾತ್ರಿಯಾಗಿ ಗೊತ್ತಿರುವಂತಹವು. ಮತ್ತು ಸರಕಾರದಲ್ಲಿ ವಸ್ತು ಸ್ಥಿತಿಯ ಮಾಹಿತಿ ,ನಿರ್ದಿಷ್ಟ ಕಾರ್ಯ ನೀತಿ ಇರುವಂತಹುದು. ಆದಾಗ್ಯೂ ಪ್ರತಿ ಸಲವೂ ಗೊಂದಲ ಹುಟ್ಟಿಸುವುದಾದರೂ ಯಾಕೆ? ಮಳೆ ಅಭಾವ, ನೀರಿನ ಕೊರತೆ ಹೊಸದೇನಲ್ಲ. ಇದು ಆಗಾಗ ನಿಸರ್ಗ ಸಹಜವಾಗಿ ಉಂಟಾಗುವಂತಹುದು. ಇದನ್ನು ಮರೆ ಮಾಚುವುದೆಂದರೆ ಇಲ್ಲಿ ಒಣ ರಾಜಕೀಯ ಘಾಟಲ್ಲದೇ ಇನ್ನೇನಿದ್ದೀತು? ಹಿಂದಿನಿಂದಲೂ ಇಂತಹುದೇ ಒಣ ಖ್ಯಾತೆ, ಸಂಕುಚಿತ ರಾಜಕೀಯದ ಸ್ವಾರ್ಥ ಸಾಧನೆ ಪ್ರಯತ್ನಗಳಿಂದ ಕರ್ನಾಟಕ ಸತತವಾಗಿ ನಕಾರಾತ್ಮಕ ಫಲಿತಾಂಶಗಳನ್ನು ಅನುಭವಿಸಿಕೊಂಡೇ ಬಂದಿದೆ. ಇಲ್ಲಿಯವರೆಗೂ ಆಳುತ್ತಾ ಬಂದ ಎಲ್ಲಾ ಬಂಡವಾಳಶಾಹೀ ಪಕ್ಷಗಳ ವರ್ತನೆ, ಕ್ರಮಗಳು ನಿಜಕ್ಕೂ ಸಾಮಾನ್ಯ ಜನರ, ರೈತರ ನಿಜ ಹಿತ ರಕ್ಷಣೆಯ ಕಾಳಜಿಯೇ ಇಲ್ಲದಿರುವುದನ್ನು ತೋರಿಸಿವೆ.

ಈ ಒಟ್ಟು ಹಿನ್ನೆಲೆಯಲ್ಲಿ ಪ್ರಾಧಿಕಾರದ ಸಭೆ ಸೇರಿಸಲು ಅಗತ್ಯ ಮುತುವರ್ಜಿ ಕ್ರಮಗಳನ್ನು ಸರಕಾರ ವಹಿಸಬೇಕು. ಮತು ಸೌಹಾರ್ದತೆಯಿಂದ ಪರಿಹಾರ ಕಂಡುಕೊಳ್ಳಲು ಉಭಯ ರಾಜ್ಯಗಳೂ ಮುಂದಾಗಬೇಕು.

ಕಾರ್ಟೂನ್ ಕಾರ್ನರ್



ಕೃಪೆ : ದಿ ಹಿಂದು

ಮುಳಬಾಗಿಲು : ದಲಿತರನ್ನು ಬೀದಿಗೆ ದೂಡುವ ಧೋರಣೆ ಧಿಕ್ಕರಿಸಿ ತೀವ್ರಗೊಂಡ ಹೋರಾಟ

ಮುಳಬಾಗಿಲಿನಲ್ಲಿ ಸಿಪಿಐ(ಎಂ) ಪಕ್ಷದ ವತಿಯಿಂದ ಶಾಸಕರಾಗಿ ಆಯ್ಕೆಯಾಗಿದ್ದ ಕಾಂ. ಆರ್.ವೆಂಕಟರಾಮಯ್ಯನವರ ಅವಧಿಯಲ್ಲಿ ವಿತರಿಸಲಾಗಿದ್ದ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದ 70 ಬಡ ದಲಿತ ಕುಟುಂಬಗಳನ್ನು ರಾತ್ರೋರಾತ್ರಿ ಖಾಲಿ ಮಾಡಿಸಿ, ಅವರನ್ನು ಬೀದಿಗೆ ಅಟ್ಟಲಾಗಿದೆ. ಇವರಿಗೆ ಸೂಕ್ತ ಪುನರ್ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಮತ್ತು ದಲಿತ ಸಂಘಟನೆಗಳ ಮುಖಂಡರ ಮೂರು ದಿನಗಳ ಉಪವಾಸ ಸತ್ಯಾಗ್ರಹ ನಡೆದು ಉತ್ತಮ ಪರಿಣಾಮ ಬೀರಿದೆ.

ಸಿಪಿಐ(ಎಂ) ಪಕ್ಷದ ಶಾಸಕರಾಗಿದ್ದ ಕಾಮ್ರೇಡ್ ಆರ್. ವೆಂಕಟರಾಮಯ್ಯನವರ ಸತತ ಹೋರಾಟದ ಫಲವಾಗಿ ಮುಳಬಾಗಿಲಿನ ಸರ್ವೆ ನಂಬರ್ 443/1, 444/1 ಮತ್ತು 444 ರ ಜಮೀನುಗಳನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿತ್ತು. ತಾ:2-10-1987 ರಂದು ಮಹಾತ್ಮ ಗಾಂಧಿ ಜಯಂತಿಯಂದು ಬಡ ದಲಿತ ನಿರ್ವಸತಿಗರಿಗೆ ಹಕ್ಕು ಪತ್ರಗಳನ್ನು ನೀಡಿ ಈ ಪ್ರದೇಶಕ್ಕೆ ವಿವೇಕಾನಂದ ನಗರ ಎಂದು ಆರ್. ವೆಂಕಟರಾಮಯ್ಯನವರು ನಾಮಕರಣ ಮಾಡಿದ್ದರು. ನಿವೇಶನ ಹಂಚಿಕೆ ಮಾಡಿದ ಜಮೀನನ್ನು ಸರ್ಕಾರವು ಜಮೀನಿನ ಮಾಲೀಕನಿಂದ ಖರೀದಿ ಮಾಡಲು ಪ್ರಯತ್ನ ಮಾಡಲಿಲ್ಲ. ಪುರಸಭೆ, ಕಂದಾಯ ಇಲಾಖೆಯ ಭ್ರಷ್ಠ ಅಧಿಕಾರಿಗಳು ಭೂಮಾಲೀಕರೊಂದಿಗೆ ಶಾಮೀಲಾಗಿದ್ದರಿಂದ ಹಕ್ಕು ಪತ್ರ ವಿತರಿಸಿದ ಭೂಮಿಯನ್ನು ಕಾನೂನಿನ ಪ್ರಕಾರ ವಶಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಜಮೀನಿನ ಮಾಲೀಕನೊಂದಿಗೆ ಈ ಅಧಿಕಾರಿಗಳು ಶಾಮೀಲಾಗಿ ಭೂಮಿ ಖರೀದಿಗೆ ಎಲ್ಲ ರೀತಿಯ ಅಡ್ಡಿಯನ್ನು ಮಾಡಿದ್ದಾರೆ. ಈ ಪರಿಸ್ಥಿತಿಯನ್ನು ಬಳಸಿಕೊಂಡು ಸದರಿ ಜಮೀನಿನ ಮಾಲೀಕ ಕೋರ್ಟ್ ಮೆಟ್ಟಿಲೇರಿದನು. ಹೈಕೋರ್ಟ್ "ಸರ್ಕಾರವು ನಿವೇಶನಗಳನ್ನು ಹಂಚಿಕೆ ಮಾಡಿರುವುದು ಅಕ್ರಮ, ಕೂಡಲೇ ಸದರಿ ಜಮೀನಿನಲ್ಲಿರುವ ಮನೆಗಳನ್ನು ತೆರವುಗೊಳಿಸಿ ದಿ:1-9-2012 ರೊಳಗೆ ಮಾಲೀಕನಿಗೆ ಒಪ್ಪಿಸಿ" ಎಂದು ಜಿಲ್ಲಾಡಳಿತಕ್ಕೆ ಆದೇಶ ನೀಡಿತು.


ಕಳೆದ 30 ವರ್ಷಗಳಿಂದ ವಾಸ ಮಾಡಿ 25 ವರ್ಷಗಳಿಂದ ಹಕ್ಕು ಪತ್ರ ಹೊಂದಿ, ಪಡಿತರ ಚೀಟಿ, ಮತದಾರ ಪಟ್ಟಿ, ಸರ್ಕಾರದ ಇನ್ನಿತರೆ ಎಲ್ಲಾ ದಾಖಲೆಗಳಲ್ಲಿ ಅಧಿಕೃತವಾಗಿ ನಾಮಕರಣಗೊಂಡಿದ್ದ 'ವಿವೇಕಾನಂದ ನಗರ'ದ ಬಡ ದಲಿತರನ್ನು 1-9-2012 ರಂದು ಸಾವಿರಾರು ಪೊಲೀಸರ ಬಂದೋಬಸ್ತ್‌ನಲ್ಲಿ ನಿರ್ದಯವಾಗಿ ತೆರವುಗೊಳಿಸಲಾಯಿತು.

ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸದೇ ಏಕಾಏಕಿ ಮನೆಗಳನ್ನು ತೆರವು ಮಾಡಿದ್ದರಿಂದ ಈ ಬಡ ದಲಿತ ಕುಟುಂಬಗಳಿಗೆ ದಾರಿ ತೋಚದಂತಾಯಿತು. ದಲಿತ ಸಂಘಟನೆಗಳ ಮುತುವರ್ಜಿಯಿಂದ ಈ ಕುಟುಂಬಗಳಿಗೆ ಶ್ರೀರಾಮ ಮಂದಿರದಲ್ಲಿ ತಾತ್ಕಾಲಿಕವಾಗಿ ತಂಗಲು ವ್ಯವಸ್ಥೆ ಮತ್ತು ದಾನಿಗಳಿಂದ ಊಟದ ವ್ಯವಸ್ಥೆಯನ್ನು ಮಾಡಲಾಯಿತು.

ಬೀದಿಗೆ ಬಿದ್ದ ದಲಿತ ಕುಟುಂಬಗಳಿಗೆ ಸೂಕ್ತ ಪುನರ್ವಸತಿ ಕಲ್ಪಿಸಬೇಕೆಂದು ಒತ್ತಾಯಿಸಿ ಅಂದಿನಿಂದಲೇ ಸಿಪಿಐ(ಎಂ) ಮತ್ತು ದಲಿತ ಸಂಘಟನೆಗಳ ನೇತೃತ್ವದಲ್ಲಿ ಪುರಸಭೆ ಕಛೇರಿ ಮುಂದೆ ಧರಣಿ ಸತ್ಯಾಗ್ರಹವನ್ನು ಆರಂಭಿಸಲಾಯಿತು. ನಿರಂತರವಾಗಿ ಧರಣಿ ಸತ್ಯಾಗ್ರಹ ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಈ ಮಧ್ಯೆ ಕೋಲಾರ ಜಿಲ್ಲೆಯ ಬರ ವೀಕ್ಷಣೆಗೆ ಆಗಮಿಸಿದ್ದ ಉಪ ಮುಖ್ಯಮಂತ್ರಿ ಆರ್.ಅಶೋಕ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್, ಕಾಂಗ್ರೆಸ್‌ನ ಬರ ಸಮೀಕ್ಷಾ ತಂಡ ಧರಣಿ ಸ್ಥಳಕ್ಕೆ ಭೇಟಿ ನೀಡಿ ಶೀಘ್ರವಾಗಿ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ ಹೋದರೂ ಯಾವುದೇ ಪ್ರಯೋಜನವಾಗಲಿಲ್ಲ. ಆ ನಂತರ ಅವರು ಈ ಕಡೆ ತಲೆ ಹಾಕಲಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲಿ ಇದ್ದಾರೋ ಪತ್ತೆ ಇಲ್ಲ. ಮುಂದಿನ ಚುನಾವಣೆಯಲ್ಲಿ ನಾವು ಗೆದ್ದೇ ಬಿಡುತ್ತೇವೆಂದು ಶಾಸಕರಾಗಲು ತುದಿಗಾಲ ಮೇಲೆ ನಿಂತಿರುವ ಯಾವ ಜೆಡಿ(ಎಸ್) ದಲಿತ ನಾಯಕರೂ ಇತ್ತ ಮುಖ ಮಾಡಲಿಲ್ಲ.

ವಿಚಿತ್ರವೆಂದರೆ ಆಶ್ರಯ ಸಮಿತಿಯ ಅಧ್ಯಕ್ಷರಾದ ಮುಳಬಾಗಿಲು ಶಾಸಕ ಅಮರೇಶ್‌ರವರು ಆಶ್ರಯ ಸಮಿತಿ ಸಭೆಯನ್ನು ಕರೆದು ವಸತಿ ಕಳೆದುಕೊಂಡವರನ್ನು ಫಲಾನುಭವಿಗಳೆಂದು ನಿರ್ಣಯ ಅಂಗೀಕರಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರೆ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತಿತ್ತು. ಈ ಹೋರಾಟದಲ್ಲಿ ಭಾಗವಹಿಸುತ್ತಿರುವ ಕೆಲವು ದಸಂಸ ಮುಖಂಡರೊಂದಿಗೆ ಸ್ಥಳೀಯ ಶಾಸಕರಿಗೆ ಇರುವ ಮನಸ್ತಾಪದ ನೆಪವೊಡ್ಡಿ ಶಾಸಕರು ಆಶ್ರಯ ಸಮಿತಿ ಸಭೆಯನ್ನು ಕರೆಯಲಿಲ್ಲ.

ಮತ್ತೊಂದೆಡೆ ನೂಗಲುಬಂಡೆ ಮತ್ತು ವೀರಭದ್ರನಗರದಲ್ಲಿ ಒಟ್ಟು ಸುಮಾರು 200 ನಿವೇಶನಗಳಿಗೆ ಆಗುವಷ್ಟು ಆಶ್ರಯ ನಿವೇಶನಕ್ಕಾಗಿ ಈಗಾಗಲೇ ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ. ಈ ನಿವೇಶನಗಳನ್ನು ಕೂಡಲೇ ಹಂಚಿಕೆ





ಮಾಡಬಹುದಾಗಿದ್ದರೂ ಶಾಸಕರು ಈ ಬಗ್ಗೆ ಗಮನ ನೀಡಲಿಲ್ಲ.

ಸಿಪಿಐ(ಎಂ) ಪಕ್ಷ ಮತ್ತು ದಲಿತ ಸಂಘಟನೆಗಳ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ದಿ:06-09-2012 ರಂದು



ಧರಣಿ ಸತ್ಯಾಗ್ರಹ, ದಿ:07-09-2012 ರಂದು ಮುಳಬಾಗಿಲು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು. ನಂತರ ಪುರಸಭೆ ಆವರಣದಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ಹಾಕಿ ಹಲವಾರು ದಿನಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಗಾಂಧಿ ಜಯಂತಿಯಂದು ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಲು ಸಿಪಿಐ(ಎಂ), ದಲಿತ ಸಂಘರ್ಷ ಸಮಿತಿ, ದಲಿತ ಸಂಘರ್ಷ ಸಮಿತಿ (ಸಂಯೋಜಕ) ರೈತ ಹಕ್ಕುಗಳ ಹೋರಾಟ ಸಮಿತಿಯು ತೀರ್ಮಾನ ಕೈಗೊಂಡವು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ವಿ. ಗೀತಾ, ದಲಿತ ಸಂಘರ್ಷ ಸಮಿತಿ ತಾಲ್ಲೂಕು ಸಂಚಾಲಕ ಕೀಲು ಹೊಳಲಿ ಸತೀಶ್, ದಲಿತ ಸಂಘರ್ಷ ಸಮಿತಿ(ಸಂಯೋಜಕ)ಯ ತಾಲ್ಲೂಕು ಸಂಯೋಜಕ ಸಂಗಸಂದ್ರ ವಿಜಯಕುಮಾರ್, ರೈತ ಹಕ್ಕುಗಳ ಹೋರಾಟ ಸಮಿತಿಯ ತಾಲ್ಲೂಕು ಅಧ್ಯಕ್ಷ ಮೆಕ್ಯಾನಿಕ್ ಶ್ರೀನಿವಾಸ್‌ರವರು ಮುಳಬಾಗಿಲು ಪಟ್ಟಣದ ಸೌಂದರ್ಯ ವೃತ್ತದಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಅಕ್ಟೋಬರ್ 2, 2012-ಗಾಂಧಿ ಜಯಂತಿಯಂದು ಆರಂಭಿಸಿದರು. ಉಪವಾಸ ನಿರತರಿಗೆ ಹೂವಿನ ಹಾರಗಳನ್ನು ಹಾಕುವ ಮೂಲಕ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿಯವರು ಅಮರಣಾಂತ ಉಪವಾಸದ ಹೋರಾಟಕ್ಕೆ ಚಾಲನೆ ನೀಡಿದರು. ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಬ್ರಿಟೀಷ್ ಸಾಮ್ರಾಜ್ಯಶಾಹಿಗಳನ್ನು ಭಾರತದಿಂದ ಓಡಿಸಲು ಕಾರಣವಾದ ಗಾಂಧೀಜಿಯವರ ಉಪವಾಸ ಸತ್ಯಾಗ್ರಹದ ಮೂಲಕ ರಾಜ್ಯ ಸರ್ಕಾರವನ್ನು ಮತ್ತು ಶಾಸಕರನ್ನು ಮಣಿಸಲಾಗುವುದೆಂದೂ, ಗೊಡ್ಡು ಬೆದರಿಕೆಗಳಿಗೆ ಸೊಪ್ಪು ಹಾಕದೇ ಹೋರಾಟವನ್ನು ಮುಂದುವರಿಸಬೇಕೆಂದೂ, ಇದಕ್ಕೆ ಎಲ್ಲ ಜನಪರ ಶಕ್ತಿಗಳ ಬೆಂಬಲವಿದೆಯೆಂದು ಹೋರಾಟವನ್ನು ಉದ್ದೇಶಿಸಿ ಮಾತನಾಡಿ ಬಯ್ಯಾರೆಡ್ಡಿಯವರು ಬೆಂಬಲ ನೀಡಿದರು. ಇದಕ್ಕೂ ಮೊದಲು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ ಮತ್ತು ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ವಿ. ಗೀತಾ ರವರು ದ್ವಿಚಕ್ರ

ಪುಟ 10 ಕ್ಕೆ

ಕಾವೇರಿ: ಸದ್ದು, ಗದ್ದಲ, ಬಂದ್ ಕಾಳಜಿಯಿಲ್ಲದ ಕ್ರಮಗಳು

ಎಸ್.ವೈ.ಗುರುಶಾಂತ್

ಕಾವೇರಿ ನದಿ ನೀರಿನ ಹಂಚಿಕೆಯ ವಿವಾದದ 'ಬಂದ್' ಮುಗಿದಿದೆ. ಹಾಗೆ ಕರೆ ಕೊಟ್ಟವರ ವಿಷಯ ಪ್ರೀತಿಗೆ ಒಂದಲ್ಲ ಎರಡು ಬಂದ್ ಗಳು ನಡೆದದ್ದು ಈ ಬಾರಿಯ ವಿಶೇಷ! ಅಕ್ಟೋಬರ್ 6ರಂದು ಹಲವು ರಂಗಿನ ಪ್ರತಿಭಟನೆಗಳೂ ನಡೆದವು. ಟಯರ್ ಸುಡಲು ಕೆಲ ಸಂಘಟನೆಗಳ ಸ್ಪರ್ದೆ ಒಂದೆಡೆಯಾದರೆ, ರಾಜಕೀಯ ಹೊಟ್ಟೆ ಕಿಚ್ಚೂ ಹೊರ ಬಂದದ್ದು ಮತ್ತೊಂದು ಬಗೆ. ಹತಾಶ ಸ್ಥಿತಿಯಲ್ಲಿರುವ ವಿರೋಧ ಪಕ್ಷದ ನಾಯಕನಾಗಿ ಮಾರ್ಪಾಡಾಗಿರುವ ಯಡಿಯೂರಪ್ಪನವರ ರಂಗ ಪ್ರವೇಶವಂತೂ ಬಿಜೆಪಿಯೊಳಗಿನ ಗುಂಪುಗಾರಿಕೆಗೆ ಮುಷ್ಟಿ ಯುದ್ಧದ ಮೆರಗು ತಂದಿತು. ಪರಿಣಾಮವಾಗಿ ಗೂಡಿನೊಳಗೆ ಅಡಗಿ ಕುಳಿತು ಕತ್ತಿ ತಿರುವುತ್ತಿದ್ದ ಅನಂತಕುಮಾರ್ ಬೀದಿಯಲ್ಲಿ ಬೆವರು ಬಸಿಯುವಂತಾಯಿತು. ಸರಕಾರಕ್ಕೆ ಸದಾ ಸಲಹೆ ನೀಡಲೆಂದೇ ನೇಮಕಗೊಂಡಿರುವ ಕೇಶವಶಿಲ್ಪಾದ ಸ್ವಯಂಸೇವಕ ಚೆಡ್ಡಿಗಳು ತಮ್ಮ ಹಾಗೂ ಸರಕಾರದ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ನೀರಾವರಿ ಮತ್ತು ಕಾನೂನು ಮಂತ್ರಿಗಳು ಅಸಮರ್ಥರೆಂದು ಜರಿದು (ಇವರು ಸರಕಾರ ಅಲ್ಲವೇ) ಕೂಡಲೇ ರಾಜೀನಾಮೆ ಬಿಸಾಕಿ ಹೊರ ನಡೆಯುವಂತೆ ಟಿ.ವಿಗಳಲ್ಲೇ ಸಲಹೆಯ ತಾಕೀತು ಮಾಡಿದ್ದು ಬಿಜೆಪಿ ಗುಂಪುಗಳ ಕಿತ್ತಾಟದ ಮುಕ್ಕಟೆ ಮನೋರಂಜನೆಯನ್ನು ನಾಡಿನ ಜನತೆಗೆ ಒದಗಿಸಿತು. ಇಲ್ಲಿ ಹುಟ್ಟು ಹಾಕಲಾದ ಉದ್ವಿಗ್ನತೆ ಮತ್ತು ಪರಿಸ್ಥಿತಿಯನ್ನು ಗೋಜಲಾಗಿಸಿದ ರೀತಿಗೆ ಕಡಿವಾಣವೇ ಇರಲಿಲ್ಲ.

ಇವು ಅಗತ್ಯವಿತ್ತೇ?

ನಿಜ, ಜನತೆಯ ಪ್ರಶ್ನೆಗಳನ್ನು ಆಳುವವರು ನಿರ್ಲಕ್ಷಿಸಿದಾಗ ಬಂದ್ ನ್ನೂ ಒಳಗೊಂಡು ವಿವಿಧ ಸ್ವರೂಪದ ಪ್ರತಿಭಟನೆಗಳನ್ನು ನಡೆಸುವುದು ಸಹಜ ಮತ್ತು ಅದು ಪ್ರಜಾಸತ್ತಾತ್ಮಕ ಹಕ್ಕು ಕೂಡ. ಆದರೆ ಸಮಸ್ಯೆಯ ಸ್ವರೂಪವನ್ನು ಆಧರಿಸಿ ಪ್ರತಿಭಟನೆಯ ಸ್ವರೂಪ ವಿಧಾನಗಳನ್ನೂ ಅನುಸರಿಸ ಬೇಕಾಗುತ್ತದೆ. ಈ ಬಾರಿಯ ಕಾವೇರಿ ವಿಷಯದಲ್ಲಿ ನಮ್ಮ ರಾಜ್ಯದ ಅಭಿಪ್ರಾಯ, ತಕರಾರುಗಳನ್ನು ಪ್ರಾಧಿಕಾರ, ಇಲ್ಲವೇ ಸುಪ್ರಿಂಕೋರ್ಟ ಮುಂದೆ ಸಮರ್ಥವಾಗಿ ಮಂಡಿಸಿ ರಾಜ್ಯದ ಹಿತ ಕಾಯಲು ಪ್ರಯತ್ನಿಸ ಬೇಕಿತ್ತು. ಇಲ್ಲಿ ಅಷ್ಟಾಗಿ ಕಾಳಜಿ, ಮುತುವರ್ಜಿ ತೋರದೇ ಭಾವೋದ್ವೇಗದ ಮಾರ್ಗ ಅನುಸರಿಸಿದ್ದು ತಪ್ಪು. ಅದರಲ್ಲೂ ಸಮಸ್ಯೆಯ ಆಳ ಅಗಲಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ಅಗ್ಗದ ಜನಪ್ರಿಯತೆಗೆ ಮರುಳಾಗುವ ವಾಟಾಳ್, ನಾರಾಯಣಗೌಡ,



ಮಾದೇಗೌಡರಂತಹವರ ಬೆನ್ನು ಹತ್ತಿದ ಸರಕಾರದ್ದು ಅದೆಂತಹ ಜವಾಬ್ದಾರಿ ವರ್ತನೆ ಹೇಳಿ? ಇಂತಹ ಕನ್ನಡ ಸಂಘಟನೆಗಳ ನಾಯಕರ ನಡುವಿನ ಸ್ಪರ್ದೆಯಿಂದಾಗಿ ಬೆಂಗಳೂರಿನಂತಹ ಮಹಾ ನಗರ ಎರಡು ದಿನಗಳ ಬಂದ ನ್ನು ಅನುಭವಿಸುವಂತಾಯ್ತು. (ವಾಟಾಳ್ ಮತ್ತಿತರರು 6ಕ್ಕೆ ಬಂದ್ ಗೆ ಕರೆ ಕೊಟ್ಟಿದ್ದರೆ ಕರವೇ ಗೌಡ ಸ್ಪರ್ದೆಗಾಗಿ 5ರಂದೇ ನಡೆಸಿದ). ವಿಚಿತ್ರವೆಂದರೆ ದುಡಿಯುವ ಜನ, ಕಾರ್ಮಿಕರು, ರೈತ-ಕೂಲಿಕಾರರು, ಮಹಿಳೆಯರು, ದಲಿತರು ವಿದ್ಯಾರ್ಥಿ-ಯುವಜನರು ಮುಂತಾದ ವಿವಿಧ ವಿಭಾಗಗಳ ಜನತೆ ಶಾಂತ ರೀತಿಯ ಪ್ರಜಾಸತ್ತಾತ್ಮಕ ವಿಧಾನಗಳಲ್ಲಿ ಮೆರವಣಿಗೆ,ಸಭೆ ನಡೆಸಲೂ ಹಕ್ಕಿನ ಅವಕಾಶ ನಿರ್ಭಂದಿಸಿ ನಿರಾಕರಿಸುವ, ದಮನಿಸುವ ಸರಕಾರ ಕಾವೇರಿ ಹೆಸರಿನ ಅಂಧಾದುಂದಿ ಅರಾಜಕ ಕಾರ್ಯಗಳಿಗೆ ಮುಕ್ತ ಅವಕಾಶ ನೀಡಿ ಬೆಂಬಲಿಸಿತು. ಬಸ್ ಗಳ ನಿಲುಗಡೆ, ಶಾಲಾ ಕಾಲೇಜ್ ಬಂದ್ ಮಾಡಿದ್ದು ಇತ್ಯಾದಿ. ಇವರೆಲ್ಲರ ವರ್ತನೆಗಳು, ಬೆಳೆಸಿದ ಬಾವೋದ್ರೇಕ ಹಲವು ಆತಂಕಗಳನ್ನು ಸಾಮಾನ್ಯ ಜನರಲ್ಲಿ ಹುಟ್ಟು ಹಾಕಿದ್ದವು.

ಶಾಂತಿ, ಸಾಮರಸ್ಯದ ಬಯಕೆ

ಇಷ್ಟೆಲ್ಲಾವುಗಳ ನಡುವೆಯೂ ಬಂದ್ ಶಾಂತಿಯಿಂದ ನಡೆದದ್ದು ಜನತೆಯಲ್ಲಿನ ಶಾಂತಿ, ಸಾಮರಸ್ಯದ ಮನೋಭಾವದ ಸ್ಪಷ್ಟ ನಿದರ್ಶನ. ಹಾಗೆಯೇ ಈ ಚಳುವಳಿ ಮತ್ತು ಬಂದ್ ಕೆಲವು ಜಿಲ್ಲೆಗಳಲ್ಲಿ ಮಾತ್ರ ಯಶಸ್ವಿಯಾಗಿದೆ. ಆದರೆ ರಾಜ್ಯದ ಕರಾವಳಿ, ಉತ್ತರ ಕರ್ನಾಟಕ, ಗುಲ್ಬರ್ಗಾ ದಂತಹ ಹಲವು ಜಿಲ್ಲೆಗಳಲ್ಲಿ ನೀರಸ ಪ್ರತಿಕ್ರಿಯೆ ಪಡೆದದ್ದು ಸಹ ಗಮನಿಸಬೇಕು. ಅದರಲ್ಲೂ ಚಳುವಳಿಯ ಕಾವು ತೀವ್ರವೆನ್ನಲಾಗುತ್ತಿರುವ ಸಮಸ್ಯೆಯ ಭಾದಿತ ಪ್ರದೇಶವಾದ ಮಂಡ್ಯ ಜಿಲ್ಲೆಯಲ್ಲಿ ಹಲವು ತಾಲೂಕುಗಳಲ್ಲಿ ಇದಕ್ಕೆ ಸ್ಪಂದನೆ ಇಲ್ಲದಿರುವುದು ಯಾಕೆಂದು ಆ ಚಳುವಳಿಯ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಸಂಕುಚಿತ ರಾಜಕೀಯ ವರಸೆ

ಇಷ್ಟೆಲ್ಲಾ ಸದ್ದು, ಗದ್ದಲ ಬಂದ್ ಮುತ್ತಿಗೆ ಆದ ಮೇಲೆ ಪರಿಣಾಮವಾದರೂ ಏನು? ನೀರನ್ನು ಬಿಡದಂತೆ ತಡೆಯಲಾಯಿತೇ? ಇಲ್ಲ. ಪ್ರತಿಭಟನೆಗಳ ನಡುವೆಯೇ ಸರಕಾರ ಕಾವೇರಿ ನದಿ ಪ್ರಾಧಿಕಾರದ ಸೂಚನೆಯಂತೆ ಪ್ರತಿ ದಿನ 9000 ಕ್ಯೂಸೆಕ್ ನಂತೆ ತಮಿಳುನಾಡಿಗೆ ನೀರನ್ನು ಬಿಡುತ್ತಲೇ ಬಂತು. ಅದರಲ್ಲೂ ಬಂದ್ ನ ದಿನ 13000 ಕ್ಯೂ. ನೀರನ್ನು ಬಿಟ್ಟಿತು. ಅಂದರೆ ಪ್ರಾಧಿಕಾರ, ಕೋರ್ಟ್ ಮುಂದೆ ವಾದ ಮಂಡಿಸುವ, ನಿರ್ಧೇಶನ ಪಾಲಿಸಲೇ ಬೇಕಾದ ವಾಸ್ತವದ ಅರಿವು , ಮಿತಿಗಳು ಸರಕಾರಕ್ಕೆ , ಆಳುವ ಬಿಜೆಪಿಗೆ ಗೊತ್ತಿದ್ದರೂ ಆ ಪ್ರದೇಶಧಲ್ಲಿ ಕಾಂಗ್ರೆಸ್ ಮತ್ತು ಜೆಡಿ ಎಸ್ ನ್ನು ಹಣಿದು ತನ್ನ ನೆಲೆ ವಿಸ್ತರಿಸಿಕೊಳ್ಳಬೇಕು ಎಂಬ ತನ್ನ ಸಂಕುಚಿತ ರಾಜಕೀಯ ಇಚ್ಛೆ ಈಡೇರಿಸಿಕೊಳ್ಳಲು ಬೆಂಕಿಗೆ ಪೆಟ್ರೋಲ್ ಸುರಿಯುತ್ತಲೇ ಬಂತು. ಉಳಿದಂತೆ ಕಾಂಗ್ರೆಸ್ ಮತ್ತು ಜೆಡಿ ಎಸ್ ಪಕ್ಷಗಳೂ ಹಿಂದೆ ಬೀಳದಂತೆ ತಾಮುಂದು ನಾಮುಂದು ಎಂದು ಸ್ಪರ್ದೆ ನಡೆಸಿದ್ದನ್ನು ನೋಡಿದ್ದೇವೆ.

ಸಿಪಿಐ(ಎಂ) ಪಕ್ಷದ ಸರಿಯಾದ ನಿಲುಮೆ

ಇದರಲ್ಲಿ ಸಿಪಿಐ(ಎಂ) ಪಕ್ಷ ಮಾತ್ರ ಸರಿಯಾದ ನಿಲುಮೆಯನ್ನು ತಾಳಿದ್ದು. ಕರ್ನಾಟಕ ಸುಪ್ರಿಂ ಕೋರ್ಟ್ ಮುಂದೆ 10000 ಕ್ಯೂಸೆಕ್ಸ್ ನೀರನ್ನು ಬಿಡುವುದಾಗಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಅನುಸರಿಸಿ ಪ್ರಧಾನಿ ಅಧ್ಯಕ್ಷತೆಯ ಪ್ರಾಧಿಕಾರವು 9000 ಕ್ಯೂ. ನೀರನ್ನು ಬಿಡುವಂತ್ಲೆ ಆದೇಶಿಸಿದೆ. ಅಲ್ಲಿ ಸರಿಯಾಗಿ ವಾದ ಮಾಡದೇ ಪ್ರಾಧಿಕಾರದ ಸಭೆಯನ್ನು ಬಹಿಷ್ಕರಿಸಿದ ಸರಕಾರದ ಕ್ರಮ ರಾಜ್ಯದ ಹಿತಕ್ಕೆ ಮುಳುವಾಗಲಿದೆಯೆಂದು ಸಿಪಿಐ(ಎಂ) ಅದಾಗಲೇ ಎಚ್ಚರಿಸಿತ್ತು. ಇಂತಹುದೇ ಆತಂಕ, ಆಕ್ಷೇಪವನ್ನು ಹಿರಿಯ ನ್ಯಾಯವಾದಿ ನಾರಿಮನ್ ರ ತಂಡ ವ್ಯಕ್ತಪಡಿಸಿತ್ತು. 'ಕಾವೇರಿ ಜಲಾನಯನ

ಪುಟ 11 ಕ್ಕೆ

ಸ್ಥಾಪಿತ ಹಿತಾಸಕ್ತಿಗಳಿಗೆ ಕೈ ಜೋಡಿಸಿದ ಮಾಧ್ಯಮ

ಕಾವೇರಿ ನೀರಿನ ಚಳುವಳಿಯನ್ನು ಉದ್ರೇಕಗೊಳಿಸುವಲ್ಲಿ ಸರಕಾರ ಹಾಗೂ ವಿವಿಧ ಪಕ್ಷಗಳು, ಸಂಘಟನೆಗಳ ಪ್ರಯತ್ನವಿರುವಂತೆ ಬಹಳ ಪ್ರಮುಖವಾಗಿ ಟಿ.ವಿ, ಪತ್ರಿಕೆಗಳಂತಹ ಮಾಧ್ಯಮಗಳ ಪಾತ್ರ ಹೆಚ್ಚಿದೆ. ಆರಂಭದಲ್ಲಿ ಮಂಡ್ಯದಲ್ಲಿ ಬಹುತೇಕ ಪತ್ರಿಕೆಗಳು ಸಣ್ಣ ಪ್ರತಿಭಟನೆ ನಡೆದಾಗಲೂ ಅದನ್ನು ಭುಗಿಲೆದ್ದ ಚಳುವಳಿ ಎಂಬಂತೆ ಬಿಂಬಿಸಿ ಪ್ರಚೋದಿಸಿದವು. ನಂತರದಲ್ಲಿಯೂ ಸಮಸ್ಯೆಯ ಹಲವು ಮಗ್ಗಲು, ಸರಿಯಾದ ಪರಿಹಾರ ಮತ್ತು ಸಾಧ್ಯತೆಗಳನ್ನು ಸಮಚಿತ್ತದಿಂದ ವಿಶ್ಲೇಷಿಸಿ ಸರಕಾರದ ತಪ್ಪು ಹೆಜ್ಜೆಗಳನ್ನು , ವಿವಿಧ ಪಕ್ಷಗಳ ನಿಲುವುಗಳು, ಉದ್ದೇಶಗಳನ್ನು ಬಹಿರಂಗಕ್ಕೆ ಇಡಬಹುದಾಗಿತ್ತು. ಹಾಗೆ ಮಾಡದೇ ಸಂಕುಚಿತವಾದೀ, ಸ್ವಾರ್ಥ ರಾಜಕೀಯ ಹಿತಾಸಕ್ತಿಗಳನ್ನು ಕಾಪಾಡಲು,ಜನರನ್ನು ಆಳುವವರ ಕುತಂತ್ರಗಳಿಗೆ ಬಲಿ ಬೀಳಿಸಲು ಹಗಲಿರುಳೂ ಶ್ರಮಿಸಿದವು! ಕಾವೇರಿ ವಿವಾದ, ಸಮಸ್ಯೆ ಬಗ್ಗೆ ಸದಾ ವೈಜ್ಞಾನಿಕ ನಿಲುವು ತಳೆಯುತ್ತಾ ರಾಜ್ಯದ ಹಿತ ಕಾಪಾಡಲು, ಒಕ್ಕೂಟದ ವ್ಯವಸ್ಥೆ ರಕ್ಷಿಸಿ, ಸಾಮರಸ್ಯ ಉಳಿಸಲು ಶ್ರಮಿಸುತ್ತಾ ಬಂದ ಸಿ.ಪಿ.ಐ.(ಎಂ) ಪಕ್ಷವು ಈಗಿನ ಬಿಕ್ಕಟ್ಟಿಗೆ ಸಂಬಂಧಿಸಿ ತಳೆದ ನಿಲುವು, ಪರಿಹಾರ ಸೂತ್ರ ಮತ್ತು ಕುತಂತ್ರಗಳಿಗೆ ಬಲಿಯಾಗದಂತೆ ಜನತೆಯನ್ನು ಎಚ್ಚರಿಸಲು ನಡೆಸಿದ ಮಾಧ್ಯಮಗೋಷ್ಟಿ ಯಲ್ಲಿನ ಹೇಳಿಕೆಯನ್ನು ಇವೇ ಮಾಧ್ಯಮಗಳು ಪ್ರಕಟಿಸುವ ಧೈರ್ಯವನ್ನು ತೋರಲಿಲ್ಲ. ಇನ್ನು ಸರಕಾರ ತನ್ನ ಆಡಳಿತವನ್ನು ಆಳುವ ಬಿಜೆಪಿ ಬೆಳವಣಿಗೆಗೆ ದುರ್ಬಳಕೆ ಮಾಡಿಕೊಳ್ಳುವ ಪ್ರಯತ್ನಗಳಿಗೆ ಸಾಥ್ ನೀಡಿ ಪ್ರಜಾಪ್ರಭುತ್ವವನ್ನು ಅಣಕಿಸಿದವು.

ಹಮಾಲಿ ಕಾರ್ಮಿಕರ, ವಿದ್ಯಾರ್ಥಿಗಳ ಪ್ರತಿಭಟನೆಗಳು

ವಂಚನೆ ವಿರುದ್ಧ ಹಮಾಲಿ ಕಾರ್ಮಿಕರ ಪ್ರತಿಭಟನೆ:

ಹದಿನೇಳು ವರ್ಷಗಳಿಂದ ಹಮಾಲಿ ಕಾರ್ಮಿಕನಾಗಿ ದುಡಿಯುತ್ತಿದ್ದ ಹುಸೇನ್ ಎಂಬವರಿಗೆ ಸರ್ವಿಸ್ ಮೊತ್ತ ನೀಡದೆ ವಂಚಿಸಿದ ಮಂಗಳೂರು ಹಳೆ ಬಂದರಿನ ಮೇಘದೂತ ಟ್ರಾನ್ಸ್‌ಪೋರ್ಟ್ ಕಂಪೆನಿಯ ಮಾಲಿಕರ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ಹಮಾಲಿ ಕಾರ್ಮಿಕರು ಕಂಪೆನಿಯ ಕಚೇರಿ ಎದುರು ಅಕ್ಟೋಬರ್ 3 ರಂದು ಪ್ರತಿಭಟನೆ ನಡೆಸಿದರು.

ಕಡಲತೀರ

ವರದಿ : ವಾ.ಉ.

ಪ್ರತಿಭಟನೆಯನ್ನು ಉದ್ದೇಶಿಸಿ ದ.ಕ.ಜಿಲ್ಲಾ ತಲೆ ಹೊರೆ ಕಾರ್ಮಿಕ ಸಂಘ (ಸಿಐಟಿಯು) ದ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಕಾರ್ಮಿಕರು ಕೆಲಸಕ್ಕೆ ರಾಜಿನಾಮೆ ನೀಡಿದಾಗ ಮಾಲಿಕರು ಸರ್ವಿಸ್ ಮೊತ್ತವನ್ನು ಲೆಕ್ಕ ಹಾಕಿ ಕೊಡುವುದು ರೂಢಿ. ಈ ಟ್ರಾನ್ಸ್‌ಪೋರ್ಟ್ ಮಾಲಿಕರು ರೂಢಿಯ ಪ್ರಕಾರ ಸರ್ವಿಸ್ ಮೊತ್ತ ನೀಡದೆ ಹಠಮಾರಿ ಧೋರಣೆ ತೋರುತ್ತಿದ್ದಾರೆ. ಸಮಸ್ಯೆಯನ್ನು ಶೀಘ್ರ ಪರಿಹರಿಸದಿದ್ದಲ್ಲಿ ಕಂಪೆನಿಯ ಎದುರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಿ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಸಿಐಟಿಯು ಮುಖಂಡರಾದ ಯೋಗೀಶ್, ಸಂತೋಷ್ ಕುಮಾರ್, ಜಯ ಕುಮಾರ್, ನಝೀರ್ ಬೆಂಗರೆ, ಹುಸೇನ್, ಆಸೀಫ್, ಮುಸ್ತಾಫ, ಪ್ರವೀಣ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

★

ಪ್ರೊ.ಗೋವಿಂದ ವರದಿ ಖಂಡಿಸಿ ಎಸ್‌ಎಫ್‌ಐ ಪ್ರತಿಭಟನೆ:

1ನೇ ತರಗತಿಯಿಂದ 7ನೇ ತರಗತಿಯ ವರೆಗೆ 30 ಕ್ಕಿಂತ ಕಡಿಮೆ ಮಕ್ಕಳಿರುವ ಸರ್ಕಾರೀ ಶಾಲೆಗಳನ್ನು ಸಮೀಪದ ಶಾಲೆಗಳ ಜೊತೆ ವಿಲೀನಗೊಳಿಸುವಂತೆ ರಾಜ್ಯ ಸರ್ಕಾರ ನೇಮಿಸಿರುವ ಪ್ರೊ.ಗೋವಿಂದ ಸಮಿತಿ ವರದಿ ನೀಡಿದೆ. ಇದರಂತೆ ರಾಜ್ಯಾದ್ಯಂತ 12,760 ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಲು ರಾಜ್ಯ ಸರ್ಕಾರ ನಿರ್ದೇಶಿಸಿದೆ. ಜೊತೆಗೆ ಶಿಕ್ಷಕರ ನೇಮಕಾತಿಯ ಅಗತ್ಯವಿಲ್ಲ ಎನ್ನುವ ಮೂಲಕ ಡಿಎಡ್, ಬಿಎಡ್ ವಿದ್ಯಾರ್ಥಿಗಳನ್ನು ಬೀದಿ ಪಾಲು ಮಾಡಲಾಗುತ್ತಿದೆ. ಪ್ರೊ.ಗೋವಿಂದ ಅವರ ವರದಿಯನ್ನು ಖಂಡಿಸಿ ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಅಕ್ಟೋಬರ್ 5 ರಂದು ಪ್ರತಿಭಟನೆ ನಡೆಸಲಾಯಿತು.



ಪ್ರೊ.ಗೋವಿಂದ ಅವರ ವರದಿಯ ಪ್ರತಿಗೆ ಬೆಂಕಿ ಹಚ್ಚುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ಕ್ರಮದ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್ ಮಾತನಾಡಿದರು. ಕಾರ್ಯದರ್ಶಿ ರಝಾಕ್ ಮೊಂಟೆಪದವು, ಜಿಲ್ಲಾ ಸಮಿತಿಯ ಸದಸ್ಯರಾದ ಚರಣ್ ಪಂಜಿಮೊಗರು, ಫಯಾಜ್ ಮಂಜನಾಡಿ, ಸಂಕೇನ್, ರಿತೇಶ್, ಮಾಧುರಿ, ಮಯೂರಿ, ಧನಲಕ್ಷ್ಮಿ ಮತ್ತಿತರರು ನೇತೃತ್ವ ನೀಡಿದ್ದರು.

■ ವೆಂಕಟೇಶ್ ಕೋಣಿ

ಕೋಣಿ : ನಿವೇಶನ ರಹಿತರಿಂದ ಪಂಚಾಯತ್ ಮುತ್ತಿಗೆ ,

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಹಾಗೂ ಕೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಕೋಣಿ ಮತ್ತು ಕಂದಾವರ ಗ್ರಾಮದ ಮನೆ, ನಿವೇಶನ ರಹಿತರಿಂದ – ನಿವೇಶನದ ಹಕ್ಕುಪತ್ರ



ಮಂಜೂರಾತಿ ಕೋರಿಕೆಗೆ ಸ್ವೀಕರಿಸಿದ ಅರ್ಜಿಗಳನ್ನು ಕೋಣಿ ಗ್ರಾಮ ಪಂಚಾಯತ್ ಕಚೇರಿಗೆ ನಿವೇಶನ ರಹಿತರು ಮುತ್ತಿಗೆ ಹಾಕುವುದರ ಮೂಲಕ ಅರ್ಜಿಗಳನ್ನು ಪಂಚಾಯತ್ ಅಧ್ಯಕ್ಷ ಪ್ರದೀಪ್ ಕುಮಾರ್ ಶೆಟ್ಟಿ ಹಾಗೂ ಉಪಾಧ್ಯಕ್ಷ ಸಂಜೀವ ಮೊಗವೀರ ಇವರಿಗೆ ಹಸ್ತಾಂತರಿಸಿದರು.

ನಿವೇಶನ ರಹಿತರ ಬೃಹತ್ ಸಮಾವೇಶವನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಮಾತನಾಡುತ್ತಾ ಕೋಣಿ-ಕಂದಾವರ ಗ್ರಾಮದ ಬಡ ನಿವೇಶನ ರಹಿತರಿಂದ ಸ್ವೀಕರಿಸಿದ 231 ಅರ್ಜಿಗಳನ್ನು ಗ್ರಾಮ ಪಂಚಾಯತ್ ವಸತಿ ಸಮಿತಿ ಮೂಲಕ ನಿವೇಶನ ರಹಿತರ ಅಂತಿಮ ಪಟ್ಟಿ ಮಾಡಿ ತಾಲೂಕು ಪಂಚಾಯತ್‌ಗೆ ಶಿಫಾರಸ್ಸು ಮಾಡುವುದಕ್ಕೆ ಕೂಡಲೇ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕೃಷಿಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿಯ ಕರೆಯಂತೆ ರಾಜ್ಯಾದ್ಯಂತ ಜಿಲ್ಲಾ, ತಾಲೂಕು ಕೇಂದ್ರಗಳಲ್ಲಿ ನವೆಂಬರ್ 5 ರಂದು ನಿವೇಶನ ರಹಿತರಿಂದ ಜೈಲ್ ಭರೋ ಹೋರಾಟ ಕಾರ್ಯಕ್ರಮ ಜರುಗುವುದರ ಭಾಗವಾಗಿ ಅಂದು ಕುಂದಾಪುರ ತಾಲೂಕು ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕುವುದರ ಮೂಲಕ ಜೈಲ್ ಭರೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮನೆ ನಿವೇಶನ ರಹಿತರಿಗೆ ಸರಕಾರಿ ಜಮೀನನ್ನು ಕೂಡಲೇ ಗುರುತಿಸಿ – ನಿವೇಶನ ರಹಿತರಿಗೆ ಹಕ್ಕುಪತ್ರ ಮಂಜೂರು ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ಕೋಟೇಶ್ವರ ಗ್ರಾಮ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ಕರಿಯ ದೇವಾಡಿಗ, ಪುರಸಭೆ – ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ವಿ. ನರಸಿಂಹ, ಹಂಗಳೂರು ಗ್ರಾಮ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ಸುರೇಶ ಕಲ್ಲಾಗರ, ಮೋಹನ ದೇವಾಡಿಗ, ರಮೇಶ ಕೋಣಿ ಉಪಸ್ಥಿತರಿದ್ದರು.

ವರದಿ : ವೆಂಕಟೇಶ್ ಕೋಣಿ

ಮಂಗಳೂರು : ನಿವೇಶನ ರಹಿತರ ಬೃಹತ್ ಸಮಾವೇಶ

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಮತ್ತು ಹಂಗಳೂರು ಗ್ರಾಮ ನಿವೇಶನ ರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಹಂಗಳೂರು ಗ್ರಾಮದ ಬಡ ನಿವೇಶನ ರಹಿತರಿಂದ ಮನೆ ನಿವೇಶನ ಹಕ್ಕುಪತ್ರಕ್ಕಾಗಿ ಒತ್ತಾಯಿಸುವುದಕ್ಕೆ ಸ್ವೀಕರಿಸಿದ ಒಟ್ಟು 254 ಅರ್ಜಿಗಳನ್ನು ಪಂಚಾಯತ್ ಅಧ್ಯಕ್ಷೆ ವನಜ ರವರಿಗೆ ಹಸ್ತಾಂತರಿಸಲಾಯಿತು.

ಹಂಗಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವೇಶನ ರಹಿತರ ಹೋರಾಟ ಸಮಿತಿ ಸಂಚಾಲಕ ಸುರೇಶ ಕಲ್ಲಾಗರ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಗ್ರಾಮಾಂತರ ಪ್ರದೇಶದ ಬಡ ನಿವೇಶನ ರಹಿತರಿಗೆ ಮೂಲಭೂತ ಸೌಲಭ್ಯವಾದ ವಸತಿ,



ಆಹಾರ, ಆರೋಗ್ಯ, ವಿದ್ಯಾಭ್ಯಾಸ ಪಡೆಯುವ ಹಕ್ಕನ್ನು ಸರಕಾರ ನಿರಾಕರಿಸಲು ಸಾಧ್ಯವಿಲ್ಲ – ಸ್ವತಂತ್ರ ಪಡೆದು 6 ದಶಕಗಳು ಕಳೆದರೂ ಬಡ ಜನರು ಮನೆ, ನಿವೇಶನ, ರೇಶನ್, ವಿದ್ಯುತ್, ಕುಡಿಯುವ ನೀರಿಗಾಗಿ ಪರದಾಡುತ್ತಿರುವುದು ಸರಕಾರದ ಆಡಳಿತ ವೈಫಲ್ಯ ಎತ್ತಿ ತೋರುತ್ತಿದೆ ಎಂದು ಟೀಕಿಸಿದರು.

ಕೃಷಿಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಸಮಾವೇಶದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದರು. ಸ್ವಾತಂತ್ರ್ಯದ 6 ದಶಕ ಕಳೆದರೂ ದೇಶದಲ್ಲಿ ಬಡತನ ತಾಂಡವವಾಡುತ್ತಿದೆ. ದೇಶದ 25 ಕೋಟಿ ಜನತೆಗೆ ಒಪ್ಪತ್ತಿನ ಆಹಾರವಿಲ್ಲ, ಹಸಿವಿನಿಂದ ಬಳಲುತ್ತಿದ್ದಾರೆ □ ಮೂಲಭೂತ ಸೌಕರ್ಯವಾದ ಮನೆ ನಿವೇಶನ ಹಕ್ಕುಪತ್ರ ಮಂಜೂರು ಮಾಡಲು ಒತ್ತಾಯಿಸಿ ನವೆಂಬರ್ 5 ರಂದು ಕುಂದಾಪುರ ತಾಲೂಕು ಪಂಚಾಯತ್ ಮುತ್ತಿಗೆ ಹೋರಾಟ "ಜೈಲ್ ಭರೊ" ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆ ನೀಡಿದರು.

ಕೃಷಿಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ, ಹೋರಾಟ ಸಮಿತಿಯ ಸಂಚಾಲಕರಾದ ಮೋಹನ ದೇವಾಡಿಗ, ಕರಿಯ ದೇವಾಡಿಗ ನೇರಂಬಳ್ಳಿ, ನಾರಾಯಣ ದೇವಾಡಿಗ ಉಪಸ್ಥಿತರಿದ್ದರು. ■

ಜನಶಕ್ತಿ
ಕನ್ನಡ ವಾರಪತ್ರಿಕೆ

ವೆನೆಝುವೆಲದಲ್ಲಿ ಚವೇಝ್ ಗೆಲುವು

ಸಾಮ್ರಾಜ್ಯಶಾಹಿ–ವಿರೋಧಿ ಪ್ರಕ್ರಿಯೆಗೆ ಉಜ್ವಲ ವಿಜಯ

ಲ್ಯಾಟಿನ್ ಅಮೆರಿಕಾ ಪ್ರದೇಶದ ವೆನೆಝುವೆಲದ ಮಹತ್ವದ ಚುನಾವಣೆಯಲ್ಲಿ ಚವೇಝ್ ಸತತ ನಾಲ್ಕನೇ ಬಾರಿಗೆ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ವೆನೆಝುವೆಲ ಜನತೆ ತಂದು ಕೊಟ್ಟಿರುವ ಈ ವಿಜಯ ನವ–ಉದಾರವಾದ ಮತ್ತು ಸಾಮ್ರಾಜ್ಯಶಾಹಿ ಪ್ರಾಬಲ್ಯದಿಂದ ಮುಕ್ತವಾದ ಒಂದು ದಾರಿಯ ಶೋಧನೆಯನ್ನು ಮುಂದುವರೆಸಲು ಅನುವು ಮಾಡಿಕೊಟ್ಟಿದೆ, ಸಾಮ್ರಾಜ್ಯಶಾಹಿ ದೇಶಗಳ ಜಾಗತಿಕ ತೈಲ ರಾಜಕೀಯದ ವಿರುದ್ಧ ಹೋರಾಟದಲ್ಲೂ ನೆರವಾಗಲಿದೆ.

ಸೀತಾರಾಂ ಯೆಚೂರಿ


ಹ್ಯೂಗೊ ಚವೇಝ್ ನಾಲ್ಕನೇ ಬಾರಿಗೆ ವೆನೆಝುವೆಲಾದ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಇದು ಆ ದೇಶದಲ್ಲಿ ಇನ್ನೊಂದು ಐತಿಹಾಸಿಕ ಚುನಾವಣೆ ಎನಿಸಿತ್ತು. 80ಶೇ.ಕ್ಕೂ ಹೆಚ್ಚು ಜನ ಈ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದರು. ಇದುವರೆಗಿನ ಅತಿ ದೊಡ್ಡ ಪ್ರಮಾಣವಿದು. 55.11ಶೇ. ಮತಗಳಿಸಿದ ಚವೇಝ್ ಪ್ರತಿಪಕ್ಷದ ಅಭ್ಯರ್ಥಿ ಹೆನ್ರಿಕ್ ಕೆಪ್ರಿಲೆಸ್‌ಗಿಂತ 11ಶೇ. ಹೆಚ್ಚು ಮತಗಳಿಸಿ ಈ ಚುನಾವಣೆಗಳಲ್ಲಿ ಗೆದ್ದಿದ್ದಾರೆ.

ಚವೇಝ್ ಮೊದಲು ಅಧ್ಯಕ್ಷರಾಗಿ ಚುನಾಯಿತರಾದದ್ದು 1998ರಲ್ಲಿ. 1999ರಲ್ಲಿ ಹೊಸ ಸಂವಿಧಾನ ಜಾರಿಯಾದ ಮೇಲೆ ಇದು ಅವರ ಮೂರನೇ ಚುನಾವಣಾ ವಿಜಯ. ಈ ವಿಜಯದ ನಂತರ ಇನ್ನು ಆರು ವರ್ಷಗಳ ಅವಧಿಯವರೆಗೆ ಅಂದರೆ 2019ರ ವರೆಗೆ ಅವರು ಅಧ್ಯಕ್ಷರಾಗಿರುತ್ತಾರೆ. ಈ ಚುನಾವಣೆ ವೆನೆಝುವೆಲ ಮತ್ತು ಸಮಸ್ತ ಲ್ಯಾಟಿನ್ ಅಮೆರಿಕಾ ಪ್ರದೇಶದ ಭವಿಷ್ಯದ ದಾರಿಯ ದೃಷ್ಟಿಯಿಂದ ಬಹಳ ನಿರ್ಣಾಯಕವಾಗಿತ್ತು. 1999ರಲ್ಲಿ ಬೊಲಿವೇರ್‌ವಾದಿ ಕ್ರಾಂತಿಯ ಪ್ರಕ್ರಿಯೆಯನ್ನು ಚವೇಝ್ ಆರಂಭಿಸಿದಂದಿನಿಂದ ಆ ದೇಶದಲ್ಲಿ ಒಂದು ಸಂಘರ್ಷ ನಡೆಯುತ್ತಾ ಬಂದಿದೆ. ಈ ಸಂಘರ್ಷದಲ್ಲಿ ಪರಸ್ಪರ ಮುಖಾಮುಖಿಯಾಗಿರುವ ಶಕ್ತಿಗಳೆಂದರೆ, ಒಂದೆಡೆ ಹಳೆಯ ಆಳುವ ವರ್ಗಗಳು, ಹಿಡಿಯಷ್ಟು ಬಂಡವಾಳಶಾಹಿಗಳ ಗುಂಪಿನ ಉಚ್ಚಕುಲೀನರು, ಇನ್ನೊಂದೆಡೆ ಚವೇಝ್ ನೇತೃತ್ವದ ಜನಪ್ರಿಯ ಆಂದೋಲನ ಮತ್ತು ಎಡ–ಸಮಾಜವಾದಿ ಶಕ್ತಿಗಳು.

ವೆನೆಝುವೆಲ ಒಂದು ತೈಲ ಸಂಪನ್ನ ದೇಶ. ಜಗತ್ತಿನಲ್ಲಿಯೆ ಅತೀ ದೊಡ್ಡ ತೈಲ ಸಂಗ್ರಹವನ್ನು ಇದು ಹೊಂದಿದೆ. ಸೌದಿ ಅರೇಬಿಯಾ ಎರಡನೇ ಸ್ಥಾನದಲ್ಲಿರುವಂತದ್ದು. ಈ ತೈಲ ಸಂಪತ್ತಿನ ಮೇಲೆ ಈಗ ಚವೇಝ್‌ರಿಂದಾಗಿ ಆ ದೇಶದ್ದೇ ಹತೋಟಿ ಸ್ಥಾಪನೆಯಾಗಿದೆ. ವಿದೇಶಿ ಕಂಪನಿಗಳ ಪ್ರಾಬಲ್ಯವಿಲ್ಲ. ಅವರು ತೈಲ ಆದಾಯಗಳನ್ನು ಸಾಕ್ಷರತೆ, ಶಿಕ್ಷಣ, ಆರೋಗ್ಯ ಮತ್ತು ವಸತಿಯ ಸಾಮಾಜಿಕ ಗುರಿ ಸಾಧನೆಗಳಿಗೆ ಬಳಸಿದ್ದಾರೆ. ಇದರಿಂದಾಗಿ ಈ ದೇಶದಲ್ಲಿ ಬಡತನದ ಮಟ್ಟಗಳಲ್ಲಿ ಗಮನಾರ್ಹ ಇಳಿಕೆಯಾಗಿದೆ.

ಸಮಾಜವಾದವೇ ಗುರಿ

ಸಮಾಜವಾದ ಈ ಬೊಲಿವೇರ್‌ವಾದಿ ಕ್ರಾಂತಿಯ ಗುರಿ ಎಂದು ಚವೇಝ್ 2006ರಲ್ಲಿ ಘೋಷಿಸಿದರು. ವೆನೆಝುವೆಲಾದಲ್ಲಿ ಒಂದು ಬಂಡವಾಳಶಾಹಿ ವ್ಯವಸ್ಥೆ ಬೇರು ಬಿಟ್ಟಿದೆ. ಚವೇಝ್ ಆಳ್ವಿಕೆಯಲ್ಲಿ ಸರಕಾರ ಉದ್ದಿಮೆ ವಲಯದ ಗಮನಾರ್ಹ ಭಾಗವನ್ನು ಮತ್ತು ದೂರಸಂಪರ್ಕ ವ್ಯವಸ್ಥೆಯನ್ನು ರಾಷ್ಟ್ರೀಕರಿಸಿದೆ. ವಿದೇಶಿ ಕಂಪನಿಗಳ ವಶವಿದ್ದ ದೊಡ್ಡ ಜಮೀನು ಎಸ್ಟೇಟುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ; ಭೂಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.



'ಸಾಮುದಾಯಿಕ ಮಂಡಳಿಗಳು' ಎಂದು ಹೆಸರಿಸಿರುವ ಸ್ವಯಮಾಡಳಿತದ ಸ್ಥಳೀಯ ಸಂಸ್ಥೆಗಳ ಮೂಲಕ ನಾಗರಿಕರ ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯನ್ನು ಸ್ಥಾಪಿಸಲಾಗಿದೆ. ಪ್ರಾದೇಶಿಕ ಸಹಕಾರಕ್ಕಾಗಿ 'ಅಲ್ಬ'('ನಮ್ಮ ಅಮೆರಿಕಾದ ಜನತೆಯ ಬೊಲಿವೇರಿಯನ್ ಮೈತ್ರಿಕೂಟ') ಮುಂತಾದ ಸಂಸ್ಥೆಗಳನ್ನು ರಚಿಸುವಲ್ಲಿ, ಪೋಷಿಸುವಲ್ಲಿ ವೆನೆಝುವೆಲ ನೇತೃತ್ವ ನೀಡುತ್ತಿದೆ. ಲ್ಯಾಟಿನ್ ಅಮೆರಿಕಾದಲ್ಲಿ ಎಡಶಕ್ತಿಗಳ ಮುನ್ನಡೆಯಲ್ಲಿ ವೆನೆಝುವೆಲಾದ್ದು ನಿರ್ಣಾಯಕ ಪಾತ್ರ. ಅದರ ಬೆಂಬಲ, ಸೌಹಾರ್ದಕ್ಕೆ ನಿಂತದ್ದು ಬೊಲಿವಿಯ ಮತ್ತು ಇಕ್ವೆಡೋರ್. ಕ್ಯೂಬಾ ಮತ್ತು ವೆನೆಝುವೆಲ ನಡುವಿನ ನಿಕಟ ಸಂಬಂಧಗಳು ಮತ್ತು ಸಹಕಾರ ಈ ಪ್ರಗತಿಪರ ಬದಲಾವಣೆಗಳ ಬೆನ್ನೆಲುಬು.

ಇವೆಲ್ಲ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಮತ್ತು ಆಂತರಿಕವಾಗಿ ಉಚ್ಚವರ್ಗದವರ ಕ್ರೋಧಕ್ಕೆ ಮತ್ತು ವೈಷಮ್ಯಕ್ಕೆ ಕಾರಣವಾಗಿವೆ. ಚವೇಝ್ ನೇತೃತ್ವದ ಸರಕಾರವನ್ನು ಅಸ್ಥಿರಗೊಳಿಸಲು ಹಲವು ಪ್ರಯತ್ನಗಳು ನಡೆದವು. ಆದರೆ ವೆನೆಝುವೆಲಾ ಕ್ರಾಂತಿಕಾರಿ ಪ್ರಕ್ರಿಯೆಯ ಎದ್ದು ಕಾಣುವ ಲಕ್ಷಣವೆಂದರೆ ಪ್ರಜಾಪ್ರಭುತ್ವವನ್ನು ಅದು ಆಳಗೊಳಿಸಿದ್ದು. ಜನತೆಯ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಬುಡಮೇಲು ಮಾಡುವ ಪ್ರಯತ್ನ ನಡೆಸಿದ್ದು ಸಾಮ್ರಾಜ್ಯಶಾಹಿ–ಪರ ಪ್ರತಿಗಾಮಿ ಶಕ್ತಿಗಳು. ಇದು 2002ರ ವಿಫಲ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಕಾಣಬಂತು.

ಅಕ್ಟೋಬರ್ 2012ರ ಚುನಾವಣೆ ಈ ಹಿನ್ನೆಲೆಯಲ್ಲಿ ಬಹಳ ಮಹತ್ವ ಗಳಿಸಿತ್ತು, ಜೀವನ್ಮರಣ ಪ್ರಶ್ನೆಗಳು ಪಣಕ್ಕೊಡ್ಡಲ್ಪಟ್ಟಿದ್ದವು. ಎಂಯುಡಿ ('ಪ್ರಜಾಸತ್ತಾತ್ಮಕ ಐಕ್ಯತೆಯ ದುಂಡುಮೇಜು') ಎಂಬ ಬಲಪಂಥೀಯ ಪ್ರತಿಪಕ್ಷ ಎಲ್ಲ ಛಾಯೆಗಳ ವಿರೋಧಿ ಶಕ್ತಿಗಳನ್ನು ಒಟ್ಟುಗೂಡಿಸಿ ಕೆಪ್ರಿಲೆಸ್ ಎಂಬ ತಮ್ಮ ಐಕ್ಯ ಅಭ್ಯರ್ಥಿಯನ್ನು ನಿಲ್ಲಿಸಿದವು. ಬಲಪಂಥೀಯ ಸಂಪ್ರದಾಯಶರಣ ಕೂಟದಿಂದ ಬಂದಿದ್ದ ಈ ವ್ಯಕ್ತಿ ಒಂದು ಸೌಮ್ಯ ಮಧ್ಯಗಾಮಿ ಮುಖವಾಡ ಧರಿಸಿ ಓಡಾಡಿದರೂ, ಪ್ರತಿಪಕ್ಷಗಳು ಗೆದ್ದರೆ ಬೊಲಿವೇರಿಯನ್ ಕ್ರಾಂತಿಕಾರಿ ಪ್ರಕ್ರಿಯೆಯ ಸಾಧನೆಗಳನ್ನೆಲ್ಲ ಮಣ್ಣುಗೂಡಿಸಲಾಗುತ್ತದೆ, ಮತ್ತೆ ಹಿಂದಿನಂತೆ ತೈಲ ಸಂಪತ್ತನ್ನು ಬಹುರಾಷ್ಟ್ರೀಯ ಕಂಪನಿಗಳ, ಪಾಶ್ಚಿಮಾತ್ಯ ಶಕ್ತಿಗಳ ಹಿತ ಸಾಧಿಸಲು ಬಳಸುತ್ತಾರೆ ಎಂಬುದು ಸ್ಪಷ್ಟವಾಗಿತ್ತು. ಅಮೆರಿಕಾ ಸಂಯುಕ್ತ ಸಂಸ್ಥಾನ ಪ್ರತಿಪಕ್ಷಗಳ ನೆರವಿಗೆ ಹಣಕಾಸನ್ನು ಸುರಿಯಿತು. ಫಲಿತಾಂಶಗಳನ್ನು ಸೃಷ್ಟಿಸಿದರೆ ಅದನ್ನು ಒಪ್ಪಲಾಗದು ಎಂಬ ಪ್ರಚಾರವನ್ನು ಪ್ರತಿಪಕ್ಷಗಳು ನಡೆಸಿದವು. ಚವೇಝ್ ವಿರುದ್ಧ, ಅವರು ಗೆಲ್ಲುವ ಸಾಧ್ಯತೆ ಇಲ್ಲವೆಂದು ಬಿಂಬಿಸಲು ತಪ್ಪು ಮಾಹಿತಿ ಹರಡಲು ಬಲಪಂಥೀಯ ಮಾಧ್ಯಮಗಳ ಗರಿಷ್ಠ ಬಳಕೆ ಮಾಡಲಾಯಿತು. ಚವೇಝ್ ಕ್ಯಾನ್ಸರ್ ಕಾಯಿಲೆಯೊಂದಿಗೂ ಸೆಣಸಿ ಇತ್ತೀಚೆಗಷ್ಟೇ ತನ್ನ ಕೆಲಸ ಮುಂದುವರೆಸಲು ಸಾಧ್ಯವಾಗಿತ್ತು.

ಕ್ರಾಂತಿ ಪ್ರಕ್ರಿಯೆಗೆ ಜನಾದೇಶ

ಕೊನೆಗೂ ಜಯಶೀಲರಾದದ್ದು ಚವೇಝ್ ಮತ್ತು ಎಡಶಕ್ತಿಗಳೇ. ಬೊಲಿವೇರ್‌ವಾದಿ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಮುಂದುವರೆಸಬೇಕೆಂಬ ಜನಾದೇಶ ವೆನೆಝುವೆಲ ಜನತೆಯಿಂದ ಸಿಕ್ಕಿದೆ. ಚವೇಝ್ ಅಧಿಕಾರ ನಡೆಸುತ್ತಿರುವ ಪ್ರಭುತ್ವ ಚುನಾವಣೆಗಳ ಫಲಿತಾಂಶವನ್ನು ವಿಕೃತಗೊಳಿಸಲಿದೆ ಎಂಬ ಅಪಪ್ರಚಾರ ಬಯಲಾಯಿತು. ವಾಸ್ತವವಾಗಿ ಚುನಾವಣಾ ವ್ಯವಸ್ಥೆಗೆ ವ್ಯಾಪಕ ಶ್ಲಾಘನೆಯೇ ದೊರೆಯಿತು. 'ಯುನಸುರ್'(ದಕ್ಷಿಣ ಅಮೆರಿಕಾದ ದೇಶಗಳ ಸಂಘ)ನಿಂದ ಒಂದು ಚುನಾವಣಾ ವೀಕ್ಷಕ ತಂಡ ಚುನಾವಣೆಗಳ ವೇಳೆಯಲ್ಲಿ ಆ ದೇಶದಲ್ಲಿತ್ತು. ಅದರ ಮುಖ್ಯಸ್ಥರು "ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆ ಎಂದರೇನು ಎಂಬುದರ ಒಂದು ಮಾದರಿ ಪ್ರದರ್ಶನವನ್ನು ವೆನೆಝುವೆಲ ನೀಡಿದೆ, ಮತ್ತು ಜಗತ್ತಿಗೆ ಒಂದು ಪಾಠ ಕಲಿಸಿದೆ. ಇದು ಮಹತ್ವಪೂರ್ಣ" ಎಂದಿದ್ದಾರೆ.

ಅಧ್ಯಕ್ಷ ಚವೇಝ್ ಈಗ ವೆನೆಝುವೆಲವನ್ನು ಒಂದು ಸಾಮಾಜಿಕವಾಗಿ ನ್ಯಾಯಪೂರ್ಣವಾದ ಮತ್ತು ಪ್ರಗತಿಶೀಲ ಸಮಾಜವಾಗಿ ಪರಿವರ್ತಿಸುವ ಅಗಾಧ ಕೆಲಸ ಸಾಧಿಸುವತ್ತ ಮುನ್ನಡೆಯಬಹುದು. ವ್ಯಾಪಕವಾದ ಅಪರಾಧ ಪ್ರವೃತ್ತಿ, ಹಣದುಬ್ಬರ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆ ಮುಂತಾದ ಗಂಭೀರ ಸಮಸ್ಯೆಗಳೂ ಇವೆ. ಅವನ್ನು ಎದುರಿಸಬೇಕಾಗಿದೆ. ಅವರ ವಿಜಯ, ದಕ್ಷಿಣ ಅಮೆರಿಕಾ ಖಂಡದ ದೇಶಗಳ ಪ್ರಾದೇಶಿಕ ಸಹಕಾರದ ಸಂಸ್ಥೆಗಳು ನವ–ಉದಾರವಾದ ಮತ್ತು ಸಾಮ್ರಾಜ್ಯಶಾಹಿ ಪ್ರಾಬಲ್ಯದಿಂದ ಮುಕ್ತವಾದ ಒಂದು ದಾರಿಯ ಶೋಧನೆಯನ್ನು ಮುಂದುವರೆಸಲು ಅನುವು ಮಾಡಿಕೊಟ್ಟಿದೆ. ಅಲ್ಬ, ಮೆರ್ಕಸುರ್(ದಕ್ಷಿಣ ಪ್ರಾದೇಶಿಕ ಸಾಮಾನ್ಯ ಮಾರುಕಟ್ಟೆ), 'ಲ್ಯಾಟಿನ್ ಅಮೆರಿಕನ್ ಮತ್ತು ಕೆರಿಬಿಯನ್ ಪ್ರಭುತ್ವಗಳ ಸಮುದಾಯ' ಮುಂತಾದವುಗಳ ಬೆಳವಣಿಗೆ ಮತ್ತು ಕ್ರೋಢೀಕರಣಕ್ಕೆ ಅವಕಾಶ ಸಿಕ್ಕಿದೆ. ವೆನೆಝುವೆಲದಲ್ಲಿನ ವಿಜಯ ಸಾಮ್ರಾಜ್ಯಶಾಹಿ ದೇಶಗಳ ಜಾಗತಿಕ ತೈಲ ರಾಜಕೀಯದ ವಿರುದ್ಧ ಹೋರಾಟದಲ್ಲೂ ನೆರವಾಗಲಿದೆ.

ಈ ಉಜ್ವಲ ವಿಜಯ ಸಾಧಿಸಿದ ವೆನೆಝುವೆಲ ಜನತೆಗೆ ನಮ್ಮ ನಮನಗಳು.

[ಸಿಮೊನ್ ಬೊಲಿವಾರ್(1783–1830) ಈ ದೇಶ ಮತ್ತು ಸುತ್ತಲಿನ ಹಲವು ದೇಶಗಳ ವಿಮೋಚನಾ ಹೋರಾಟಗಳ ಪ್ರತೀಕವಾಗಿರುವ ಇತಿಹಾಸ ಪುರುಷ. ಅವರ ಸ್ಮರಣಾರ್ಥ ಈ ದೇಶ ಈಗ ಅಧಿಕೃತವಾಗಿ 'ವೆನೆಝುವೆಲ ಬೊಲಿವೇರಿಯನ್ ಗಣತಂತ್ರ' ಎನಿಸಿಕೊಂಡಿದೆ ಹಾಗೂ ಈಗ ಅಲ್ಲಿ ನಡೆಯುತ್ತಿರುವ ಪ್ರಕ್ರಿಯೆಯನ್ನು ಬೊಲಿವೇರಿಯನ್ ಕ್ರಾಂತಿ ಎಂದು ಗುರುತಿಸಲಾಗಿದೆ.]

ಸರ್ಕಾರಿ ಕನ್ನಡ ಶಾಲೆಗಳನ್ನು 'ಗೋವಿಂದ' ಮಾಡುವ

ಪ್ರೊ. ಗೋವಿಂದ ವರದಿ

ಅನಂತ ನಾಯ್ಕ

ಕರ್ನಾಟಕ ರಾಜ್ಯದಲ್ಲಿ 12,740 ಶಾಲೆಗಳನ್ನು ಮುಚ್ಚಿ- ಶಿಕ್ಷಕರ ನೇಮಕಾತಿಯನ್ನು ಕಡಿತ ಮಾಡಿ, ಶಾಲಾ ಕಟ್ಟಡಗಳ ನಿರ್ಮಾಣ ಅಗತ್ಯವಿಲ್ಲ ಅದನ್ನು ಕೈ ಬಿಡಿ ಎನ್ನುವ ಅಘಾತಕಾರಿ ಶಿಫಾರಸ್ಸುಗಳನ್ನು ನೀಡಿರುವ ಪ್ರೊ. ಗೋವಿಂದ ಸಮಿತಿ ವರದಿಯನ್ನು ಕಸದ ಬುಟ್ಟಿಗೆ ಎಸೆಯಬೇಕೆಂಬ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ. ಅದೇ ಸಮಯದಲ್ಲಿ ಇಂತಹ ಶಿಫಾರಸ್ಸು ನೀಡುವ ಮಹಾ'ತಜ್ಞ'ರನ್ನು ಪತ್ತೆ ಹಚ್ಚಿ, ನೇಮಿಸಿ ವರದಿ ಬರೆಸಿಕೊಂಡಿರುವ ರಾಜ್ಯ ಬಿಜೆಪಿ ಸರ್ಕಾರದ ನಿಜವಾದ ಉದ್ದೇಶ ಏನು ಎಂಬ ಬಗ್ಗೆಯೂ ಎಚ್ಚರ ವಹಿಸಬೇಕಾದ ಅಗತ್ಯವಿದೆ.

- **ಕರ್ನಾಟಕದಲ್ಲಿ ಶಾಲಾ ಶಿಕ್ಷಣದ ಸಂರಚನೆಯ ಉನ್ನತೀಕರಣ ಹಾಗೂ ಪುನರ್ ಸಂಘಟನೆ** ಕುರಿತು ರಾಜ್ಯ ಸರ್ಕಾರ ಚರ್ಚೆಯನ್ನು ಪ್ರಾರಂಭಿಸಿ ಅದಕ್ಕಾಗಿ ದೆಹಲಿಯ "ಶೈಕ್ಷಣಿಕ ಯೋಜನೆ ಮತ್ತು ಆಡಳಿತದ ರಾಷ್ಟ್ರೀಯ ವಿಶ್ವ ವಿದ್ಯಾಲಯದ(ನ್ಯೂಫಾ) ಉಪಕುಲಪತಿ ಪ್ರೊ॥ ಆರ್. ಗೋವಿಂದ ಅಧ್ಯಕ್ಷತೆಯಲ್ಲಿ ವರದಿಯನ್ನು ಸಿದ್ಧಪಡಿಸಿಕೊಂಡಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಮಾಜಿ ಆಯುಕ್ತ ತುಷಾರ್ ಗಿರಿನಾಥ್ ಈ ಸಮಿತಿಯ ಸದಸ್ಯ ಕಾರ್ಯದರ್ಶಿ. ಇನ್ನುಳಿದಂತೆ ಈ ಸಮಿತಿಯಲ್ಲಿ ಮತ್ಯಾವ ಶಿಕ್ಷಣ ತಜ್ಞರಿದ್ದಾರೆ ಎಂಬದನ್ನು ಉಲ್ಲೇಖಿಸಿಲ್ಲ.

- ಕರ್ನಾಟಕದ ಶಾಲಾ ಶಿಕ್ಷಣದ ಸಂರಚನೆ ಬದಲಿಸಿ ಪುನರ್ ರಚನೆ ಮಾಡಲು ಯೋಚಿಸುವಾಗ ವಾಸ್ತವವಾಗಿ ಸಂವಿಧಾನ ಬದ್ಧ ಶಿಕ್ಷಣದ ಹಕ್ಕು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಯಾಗುತ್ತಿದೆಯೇ? ಯಾವ ಪ್ರಮಾಣದಲ್ಲಿ? ಅಥವಾ ಇದಕ್ಕಿರುವ ತೊಡಕುಗಳೇನು? ಎಂಬುದರ ಕುರಿತು ಗಂಭೀರವಾದ ಚರ್ಚೆ ನಡೆಸಬೇಕಿತ್ತು. ಆದರೆ ಈ ವರದಿಯಲ್ಲಿ ಎಲ್ಲಿಯೂ ಈ ಅಂಶ ಚರ್ಚಿತವಾಗಿಲ್ಲ, ರಾಜ್ಯದಲ್ಲಿ ಲಕ್ಷಾಂತರ ಸಂಖ್ಯೆಯ ಮಕ್ಕಳು ಶಾಲೆ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲ. ಅಷ್ಟೇ ಅಲ್ಲದೆ ಮಕ್ಕಳು ಪ್ರತಿ ವರ್ಷ ಪ್ರತಿ ತರಗತಿಯಿಂದ ತರಗತಿಗೆ ಪಾಸಾಗಿ ಹೋಗುವ ಬದಲು ಶಾಲೆ ತೊರೆಯುತ್ತಿದ್ದಾರೆ. ಇದಕ್ಕೆ ಕಾರಣಗಳೂ, ಪರಿಹಾರಗಳು ವರದಿಯಲ್ಲಿ ಇಲ್ಲ.

- ಇತಿಹಾಸ, ಏಕೀಕರಣದ ಕುರಿತು ಪ್ರಸ್ತಾಪ ಮಾಡುವ ವರದಿ ಹಿಂದೆ ಮೈಸೂರು ಸಂಸ್ಥಾನದಲ್ಲಿ ಹೋಬಳಿಗೊಂದು ಶಾಲೆ ಇತ್ತು ಎನ್ನುವ ಮೂಲಕ ಈಗ ಹೆಚ್ಚು ಶಾಲೆಗಳ ಅಗತ್ಯವಿಲ್ಲ ಎಂಬುದನ್ನು ಹೇಳಲು ಹೊರಟಿದೆ.



- ಈ ವರದಿಯಲ್ಲಿ ನಿರ್ದಿಷ್ಟವಾಗಿ ಯಾವುದನ್ನೂ ಚರ್ಚಿಸಿಲ್ಲ, ಅಂತಿಮವಾಗಿ ಶಿಫಾರಸ್ಸುಗಳೇನು? ಈ ವರದಿಯಲ್ಲಿ ನಿರ್ದಿಷ್ಟ ಶಿರ್ಫಾರಾರಸ್ಸುಗಳಿಲ್ಲದಿರುವುದು ಹಾಸ್ಯಾಸ್ಪದ.

- ರಾಜ್ಯದಲ್ಲಿ ಶಾಲೆಗಳ (ಸರ್ಕಾರಿ,ಅನುದಾನಿತ,ಅನುದಾನರಹಿತ) ಸಂಖ್ಯೆ? ಅವುಗಳಲ್ಲಿ ತರಗತಿವಾರು ವಿದ್ಯಾರ್ಥಿಗಳ ದಾಖಲಾತಿ ಎಷ್ಟು? ಶುಲ್ಕ ವಸೂಲಿ, ಇತ್ಯಾದಿ ಕುರಿತು ನಿಖರವಾದ ಮಾಹಿತಿಗಳಿಲ್ಲ. ಇಡೀ ವರದಿಯಲ್ಲಿ ಬಳಸಲಾದ ಅಂಕಿ ಅಂಶಗಳು ಗೊಂದಲಕಾರಿಯಾಗಿವೆ, ನಿರ್ದಿಷ್ಟವಾಗಿಲ್ಲ.

- ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಕಾರಣದಿಂದ ಶೈಕ್ಷಣಿಕ ಪ್ರಗತಿಯೂ ಕೂಡ ಅಸಮಾನತೆಯಿಂದ ಕೂಡಿದೆ. ಈ ಕುರಿತು ವರದಿಯು ನಿರ್ಲಕ್ಷ್ಯ ವಹಿಸಿದೆ. ಬಡತನ, ಸಾಮಾಜಿಕ ಅಸಮಾನತೆಯ ಕಾರಣಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಶಾಲೆ ತೊರೆಯುತ್ತಿದ್ದರೂ ಈ ವರದಿಯಲ್ಲಿ ಯಾವುದೇ ಪ್ರಸ್ತಾಪಗಳಿಲ್ಲ.



- ಶಾಲೆಗಳಿಗೆ ದಾಖಲಾತಿ ಕಡಿಮೆಯಾಗಲು ಜನನ ಪ್ರಮಾಣ **ಕಡಿಮೆಯಾಗಿರುವುದಾಗಿದೆ ಕಾರಣ** ಎಂದು ವರದಿ ಹೇಳುತ್ತದೆ. ರಾಜ್ಯದ ಜನಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವ ವಾಸ್ತವ ಸಂಗತಿ ಈ ಸಮಿತಿಯ ಅರಿವಿಗೆ ಬಂದಿಲ್ಲ. ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯಗಳಿಲ್ಲದಿರುವುದು ಮತ್ತು ಬೇಕಾಬಿಟ್ಟಿ ಖಾಸಗಿ ಶಾಲೆಗಳಿಗೆ ಪರವಾನಗಿ ನೀಡಿರುವುದು, ಸರ್ಕಾರಿ ಶಾಲೆಗಳಿಗೆ ಸೌಲಭ್ಯ ನೀಡದೆ ನಿರ್ಲಕ್ಷ್ಯ ತಾಳಿರುವುದರಿಂದ ಈ ಶಾಲೆಗಳಿಗೆ ಮಕ್ಕಳು ಆಕರ್ಷಿತರಾಗುತ್ತಿಲ್ಲ. ಇವುಗಳ ಬಲಪಡಿಸುವ ಕುರಿತು ಚರ್ಚಿಸದೆ ಮಕ್ಕಳೇ ಬರುತ್ತಿಲ್ಲ ಎನ್ನುವ ವಾದ ಶಿಕ್ಷಣ ನೀಡುವ

ಜವಾಬ್ದಾರಿಯಿಂದ ಸರ್ಕಾರ ತಪ್ಪಿಸಿಕೊಳ್ಳುವುದಕ್ಕೆ ಪೂರಕವಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತಿದೆ.

- **"ರಾಜ್ಯದ ಆರ್ಥಿಕತೆಯು ಅನೇಕ ವರ್ಷಗಳಿಂದ ಉಚ್ಛ್ರಾಯ ಸ್ಥಿತಿಯಲ್ಲಿದೆ"** ಎಂದು ಬಹು ಪರಾಕ್ ಹಾಕಿ ಹೊಗಳುವ ಈ ವರದಿ 1964 ಡಾ॥ ಕೊಥಾರಿಯವರ ಆಯೋಗ ಶಿಕ್ಷಣಕ್ಕೆ ರಾಜ್ಯ ಬಜೆಟ್ಟಿನಲ್ಲಿ ಕನಿಷ್ಠ 30% ಹಣ ಮೀಸಲಿಡಬೇಕು ಎಂದಿದ್ದ ಶಿಫಾರಸ್ಸನ್ನು ಕನಿಷ್ಠ ನೆನಪಿಸಿಕೊಂಡಿಲ್ಲ. ಅಥವಾ ವಾಸ್ತವವಾಗಿ ಸರ್ಕಾರ ಶಿಕ್ಷಣಕ್ಕೆ ಎಷ್ಟು ಹಣ ನೀಡುತ್ತಿದೆ? ಅದು ಸಾಕಾಗುತ್ತದೆಯೇ? ಎಂಬುದನ್ನು ತಿಳಿಸಿಲ್ಲ. ಪ್ರಸ್ತುತ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಕೇವಲ 14% ಪಾಲು ಮಾತ್ರ ನೀಡಿದೆ. (ಪಕ್ಕದ ಕೇರಳದ'ಎಡರಂಗ ಸರ್ಕಾರ ಶಿಕ್ಷಣಕ್ಕೆ 28% ನೀಡಿತ್ತು).

- **1–7ನೇ ತರಗತಿಯ 30ಕ್ಕಿಂತ ಕಡಿಮೆ ಮಕ್ಕಳಿರುವ 12,740 ಸರ್ಕಾರಿ ಕನ್ನಡ ಶಾಲೆಗಳನ್ನು ವಿಲೀನಗೊಳಿಸುವುದು** (ಮುಚ್ಚುವುದು ಎಂಬುದೇ ಇದರ ಅರ್ಥ)ಎನ್ನುವ ಈ ವರದಿಯ ಉದ್ದೇಶ ಲಕ್ಷಾಂತರ ಮಕ್ಕಳನ್ನು ಶಿಕ್ಷಣದಿಂದ ವಂಚಿಸುವುದೇ ಆಗಿದೆ. ದಲಿತರ ಕೇರಿಗಳು, ಆದಿವಾಸಿಗಳ ಹಾಡಿಗಳು, ತಾಂಡಗಳು, ಸ್ಲಂಗಳು, ಮತ್ತು ಚಿಕ್ಕ ಚಿಕ್ಕ ಗ್ರಾಮಗಳ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದಲ್ಲಿ ಕೆಲವೊಮ್ಮೆ ವ್ಯತ್ಯಾಸಗಳಾಗಬಹುದು. ಅಂದ ಮಾತ್ರಕ್ಕೆ ಅಂತಹ ಶಾಲೆಗಳನ್ನು ಮುಚ್ಚಲು ಹೊರಟಿರುವುದು ಕೆಳವರ್ಗ, ಕೆಳಜಾತಿಯವರಿಗೆ ಶಿಕ್ಷಣವನ್ನು ನಿರಾಕರಿಸುವ ಬಿ.ಜೆ.ಪಿ. ಸರ್ಕಾರದ ಮನುವಾದಿ ಮನಸ್ಸನ್ನು ಬಹಿರಂಗ ಪಡಿಸಿದೆ.

- ಶಿಕ್ಷಣ ಹಕ್ಕು ಕಾಯ್ದೆ-2009 ಪ್ರತಿಯೊಂದು ಮಗುವಿಗೆ ಶಿಕ್ಷಣ ನೀಡುವ ಜವಾಬ್ದಾರಿ ಸರ್ಕಾರದ್ದು ಎಂಬುದನ್ನು ಹೇಳುತ್ತದೆ. ಎಳೆಯ ಮಕ್ಕಳಿಗೆ ಪೂರಕವಿರುವಂತೆ "ಶಿಶು ಸ್ನೇಹಿ ಶಾಲೆ, ಕೊಠಡಿ, ವಾತಾವರಣ ಇರಬೇಕು ಎನ್ನುವ ಶಿಕ್ಷಣ ಹಕ್ಕು ಕಾಯ್ದೆಯ ವಿರುದ್ಧ ಈ ಸಮಿತಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದೆ. ಕಳೆದ ವರ್ಷ 3,174 ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಿದ ಸರ್ಕಾರ ಈಗ 12,740 ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಲು ಹೊರಟಿದೆ. ಲಕ್ಷಾಂತರ ವಿದ್ಯಾರ್ಥಿಗಳನ್ನು ಬೀದಿಪಾಲು ಮಾಡಿ, ಸುಮಾರು 50 ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು, 20ಸಾವಿರಕ್ಕೂ ಹೆಚ್ಚು ಬಿಸಿಯೂಟ ನೌಕರರನ್ನು ಕೆಲಸದಿಂದ ವಂಚಿಸುವ ಹುನ್ನಾರ ಇದರಲ್ಲಿ ಅಡಕವಾಗಿದೆ. ಆರ್.ಟಿ.ಇ. ಪ್ರಕಾರ ಎಲ್ಲರಿಗೂ ಕಡ್ಡಾಯ ಶಿಕ್ಷಣ ನೀಡುವಂತಾಗಲು, ಎಲ್ಲಾ ಮಕ್ಕಳು ಶಾಲೆಗೆ ಬರುವಂತಾಗಲು ರಾಜ್ಯಕ್ಕೆ ಇನ್ನೂ 3,000 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಅವಶ್ಯಕತೆ ಇದೆ ಎಂದು ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಹೇಳುತ್ತಿರುವುದನ್ನು ಕಡೆಗಣಿಸಲಾಗಿದೆ. ಅಲ್ಲದೆ ಇರುವ ಶಾಲೆಗಳನ್ನು ಬಲಪಡಿಸುವ ಬದಲು ಮುಚ್ಚಲು ಹೊರಟಿರುವ ರಾಜ್ಯ ಸರ್ಕಾರ ಗ್ರಾಮೀಣ ಜನರ ಬಡವರ, ದಲಿತರ, ಹಿಂದುಳಿದವರ, ಬುಡಕಟ್ಟು-ಅದಿವಾಸಿ ಜನರ ವಿರೋಧಿಯಾಗಿದೆ. ಈ ಮೂಲಕ ಸಂವಿಧಾನ

ಜನಶಕ್ತಿ
ಕನ್ನಡ ವಾರಪತ್ರಿಕೆ

ವಿರೋಧಿಯೂ ಆಗಿದೆ.

• ರಾಜ್ಯದಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ ಎನ್ನುವ ಈ ವರದಿ ದೇಶದಲ್ಲಿಯೇ ಕರ್ನಾಟಕ ರಾಜ್ಯದಲ್ಲಿ ಈ ಹಕ್ಕನ್ನು ಅತ್ಯಂತ ಕಳಪೆ ಮಟ್ಟದಲ್ಲಿ ಜಾರಿಗೊಳಿಸುತ್ತಿರುವುದನ್ನು ಮರೆಮಾಚುತ್ತಿದೆ. ಪ್ರಸಕ್ತ ಸಾಲಿನಲ್ಲಿ ಆರ್.ಟಿ.ಇ. ನಿಯಮದಂತೆ ರಾಜ್ಯದ ಖಾಸಗಿ ಶಾಲೆಗಳಲ್ಲಿ ಒಟ್ಟು 1,12,474 ಬಡ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕಾಗಿತ್ತು. ಆದರೆ ಕೇವಲ 41,663 (37%) ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ 70,811 (63%) ವಿದ್ಯಾರ್ಥಿಗಳಿಗೆ ಪ್ರವೇಶದಿಂದ ವಂಚಿಸುವ ಕೆಲಸ ನಡೆದಿರುವುದು ಈ ಗೋವಿಂದ ಸಮಿತಿಯ ಗಮನಕ್ಕೆ ಬರಲಿಲ್ಲವೇ? ಶಿಕ್ಷಣ ಹಕ್ಕು ಜಾರಿಗೊಳಿಸುವಲ್ಲಿ ವಿಫಲವಾಗಿರುವ ರಾಜ್ಯ ಬಿಜೆಪಿ ಸರ್ಕಾರವನ್ನು ಈ ಸಮಿತಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯ ಉದ್ದೇಶವನ್ನು ಹೊಂದಿಲ್ಲ.

• ಶಿಕ್ಷಕರ ನೇಮಕಾತಿಯಅಗತ್ಯವಿಲ್ಲ ಎಂದು ವರದಿ ಹೇಳುತ್ತದೆ. ಉತ್ತಮ ಕಲಿಕೆ ಸಾಧ್ಯವಾಗಲು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು ಶಿಕ್ಷಕರ ಸಂಖ್ಯೆ ಹೆಚ್ಚಾಗಬೇಕು ಎನ್ನುವ ಅನೇಕ ಶಿಕ್ಷಣ ತಜ್ಞರ ಅಭಿಪ್ರಾಯವನ್ನು ಕಡೆಗಣಿಸಲಾಗಿದೆ. ಕನಿಷ್ಠ 20 ಜನ ವಿದ್ಯಾರ್ಥಿಗಳಿಗೆ ವಿಷಯವಾರು ಶಿಕ್ಷಕ, ಶಿಕ್ಷಕರಿಗೊಂದು ಕೊಠಡಿ ಇರಬೇಕೆಂಬ ಶಿಕ್ಷಣ ಹಕ್ಕು ಮಸೂದೆ. (ಆರ್.ಟಿ.ಇ.)ನ ನಿಯಮದ ಪ್ರಕಾರ ರಾಜ್ಯಕ್ಕೆ ಲಕ್ಷಾಂತರ ಶಿಕ್ಷಕರ ನೇಮಕಾತಿಯ ತುರ್ತು ಇದೆ. ನೇಮಕಾತಿ ಅಗತ್ಯವಿಲ್ಲವೆಂದು ಹೇಳುವ ಈ ವರದಿ ಜನಪರವಾದುದಲ್ಲ. ರಾಜ್ಯದಲ್ಲಿ ಹೊರಗುತ್ತಿಗೆ, ಅತಿಥಿ, ಅರೆಕಾಲಿಕ ಇತ್ಯಾದಿ ಹೆಸರಿನಲ್ಲಿ ರಾಜ್ಯವ್ಯಾಪಿ ಸಾವಿರಾರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಅವರ ಬದುಕು, ಭದ್ರತೆಯ ಕುರಿತು ವರದಿಯಲ್ಲಿ ಯಾವುದೂ ಪ್ರಸ್ತಾಪವಿಲ್ಲ.

• **ತರಗತಿಯಲ್ಲಿ ಕನಿಷ್ಠ 120 ಮಕ್ಕಳಿರಬೇಕು** ಎನ್ನುವ ಈ ವರದಿಯ ಅಂಶವೇ ಅವೈಜ್ಞಾನಿಕ. ತರಗತಿಯಲ್ಲಿ ಕಡಿಮೆ ಮಕ್ಕಳಿದ್ದರೆ ಅವರನ್ನು ಆಪ್ತತೆಯಿಂದ ಅವರ ಬೌದ್ಧಿಕ ಸಾಮರ್ಥ್ಯಕ್ಕೆತಕ್ಕ ಬೋಧನೆ ಮಾಡಲು ಅನುಕೂಲವಾಗುತ್ತದೆ. ಒಂದು ತರಗತಿಯಲ್ಲಿ 20 ವಿದ್ಯಾರ್ಥಿಗಳಿರಬೇಕು ಎನ್ನುವುದು ವೈಜ್ಞಾನಿಕ ನಿಯಮ. ಆದರೆ ಈ ಸಮಿತಿ ಶಾಲೆಗಳ ಮುಚ್ಚುವ ಬರದಲ್ಲಿ ಪ್ರಾಥಮಿಕ ಶಾಲೆಗಳ ತರಗತಿಗೆ 50, ಪ್ರೌಢಶಾಲೆಗಳಿಗೆ 120 ವಿದ್ಯಾರ್ಥಿಗಳಿರಬೇಕು ಎಂದು ಹೇಳುತ್ತಿರುವುದು ಅಪಾಯಕಾರಿ ಮತ್ತು ಈ 'ತಜ್ಞ' ರ ತಿಳುವಳಿಕೆಯ ಮಟ್ಟ ಹಾಸ್ಯಾಸ್ಪದವಾಗಿದೆ.

• ರಾಜ್ಯದಲ್ಲಿ ಈಗ ಇರುವ 5+2+3+2 ತರಗತಿಗಳ ಶಿಕ್ಷಣ ಪದ್ಧತಿಯ ಬದಲಾಗಿ 1–5 ಪ್ರಾಥಮಿಕ, 6–8 ಹಿರಿಯ ಪ್ರಾಥಮಿಕ, 9–12 ಮಾಧ್ಯಮಿಕ, ಉಚ್ಚ ಮಾಧ್ಯಮಿಕ ವಿಭಾಗಗಳಾಗಿ ವಿಂಗಡಿಸಲು ಸಮಿತಿ ಪ್ರಸ್ತಾಪ ಮಾಡಿದೆ. ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಸಮರ್ಪಕವಾಗಿ



ಎಲ್ಲರಿಗೂ ನೀಡುವಂತಾಗಲು ಅಗತ್ಯ ಹಣಕಾಸಿನ ಕುರಿತು ಚರ್ಚಿಸುವ ಬದಲು ಶಾಲಾ ಸಂರಚನೆ ಪುನರ್ ರಚಿಸುವ ಚರ್ಚೆಯೇ ಸದ್ಯಕ್ಕೆ ಅಪ್ರಸ್ತುತ. ಈಗ ಇರುವ ವ್ಯವಸ್ಥೆಯಲ್ಲಿಯೇ ಸೂಕ್ತ ಸೌಲಭ್ಯ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲದಿರುವಾಗ ಈ ಪನರ್‌ರಚನೆ ಎನ್ನುವುದರ ಹಿಂದೆ ಆಳವಾದ ಕುತಂತ್ರವಷ್ಟೆ ಇರಲು ಸಾಧ್ಯ.

• ಕಲಿ ನಲಿ, ಪರಿಹಾರ ಭೋದನೆ ಮತ್ತು ಸರ್ವಶಿಕ್ಷಣ ಅಭಿಯಾನದ ಇನ್ನೂ ಅನೇಕ ಕಾರ್ಯಕ್ರಮಗಳಷ್ಟರಿಂದಲೇ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಪೂರೈಸಲು ಆಗುತ್ತಿಲ್ಲ. ಅಂತರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ, ಇನ್ನಿತರ ಹೆಸರಿನ ಪಠ್ಯಕ್ರಮ ಮತ್ತು ಶಾಲೆಗಳು ಮಕ್ಕಳಲ್ಲಿ ಅಸಮಾನತೆ ಬಿತ್ತುತ್ತಿವೆ. ಇವುಗಳ ಸರಿಪಡಿಸುವ ನಿಟ್ಟಿನಲ್ಲಿ ಕೊಠಾರಿ ಆಯೋಗ ಮಾಡಿರುವ ಶಿಫಾರಸ್ಸು – 'ಸಮಾನ ಶಾಲಾ ಶಿಕ್ಷಣ ಪದ್ದತಿ' ಕುರಿತು ಯಾವುದೇ ಪ್ರಸ್ತಾಪಗಳಿಲ್ಲದಿರುವುದನ್ನು ನೋಡಿದರೆ ತಾರತಮ್ಯದ ಶಿಕ್ಷಣ ವ್ಯವಸ್ಥೆಯನ್ನು ಹಾಗೇ ಉಳಿಸಿಕೊಂಡು ಹೋಗುವ ಉದ್ದೇಶವಿದ್ದಂತಿದೆ.

• ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರೀ ನರ್ಸರಿ, ಎಲ್.ಕೆ.ಜಿ., ಯು.ಕೆ.ಜಿ. ಇತ್ಯಾದಿ ಹೆಸರಿನಲ್ಲಿ ಬಾಲ್ಯವನ್ನು ದುರ್ಬಳಕೆ ಮಾಡಿಕೊಂಡು ಹಣ ಮಾಡುವ ದಂಧೆಯಲ್ಲಿ ಮುಳುಗಿವೆ. ಇವುಗಳನ್ನು ನಿಯಂತ್ರಿಸಲು ಸರ್ಕಾರದಿಂದ ಸಾಧ್ಯವಾಗುತ್ತಿಲ್ಲ. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳದ ಹೊರತು ಮಕ್ಕಳ ಶಿಕ್ಷಣದ ಹಕ್ಕಿಗೆ ಬೆಲೆ ಇರದು. ದುರಂತವೆಂದರೆ ಪೂರ್ವ ಪ್ರಾಥಮಿಕ ಶಿಕ್ಷಣದ ಕುರಿತು ಈ ವರದಿಯಲ್ಲಿ ಯಾವುದೇ ಪ್ರಸ್ತಾಪಗಳಿಲ್ಲ.

• **ಮೂಲ ಸೌಕರ್ಯಗಳನ್ನು ಒದಗಿಸಿಕೊಳ್ಳುವುದು ಖಾಸಗೀ ಶಿಕ್ಷಣ ಸಂಸ್ಥೆಗಳ** ಜವಾಬ್ದಾರಿ ಎನ್ನುವ ಮೂಲಕ 8ನೇ ತರಗತಿಯ ನಂತರದ ಶಿಕ್ಷಣವನ್ನು ಸಂಪೂರ್ಣ ಖಾಸಗೀಕರಿಸುವ ಹುನ್ನಾರ ಇಲ್ಲಿ ಕಾಣುತ್ತದೆ. ಈ ಪ್ರಯತ್ನ ಅಪಾಯಕಾರಿ. ಈಗ ಇರುವ ಪ್ರಾಥಮಿಕ ಶಾಲೆಯಲ್ಲಿಯೇ 8 ನೇ ತರಗತಿವರೆಗೆ ಶಿಕ್ಷಣ ನೀಡುವುದಷ್ಟೆ ತನ್ನ ಕರ್ತವ್ಯವೆಂದು ಸರ್ಕಾರ ಭಾವಿಸಿದಂತಿದೆ. ಪ್ರೌಢಶಾಲೆ, ಪದವಿ ಪೂರ್ವಶಿಕ್ಷಣ ಸಂಸ್ಥೆಗಳು ಅತೀ ಹೆಚ್ಚು ಖಾಸಗಿಯವೇ ಆಗಿರುವುದರಿಂದ ಅವರಿಗೆ ಅನುಕೂಲವಾಗುವಂತೆ ಖಾಸಗೀ ಸಂಸ್ಥೆಗಳೇ ಮೂಲಸೌಕರ್ಯಗಳನ್ನು



ಕಲ್ಪಿಸಿಕೊಳ್ಳಲಿ ಎನ್ನುವ ಮೂಲಕ ವ್ಯಾಪಾರೀಕರಣಕ್ಕೆ ಅವಕಾಶ ಕಲ್ಪಿಸುವಂತಿದೆ.

• ಪ್ರಸ್ತುತ ರಾಜ್ಯದಲ್ಲಿ ಅವಶ್ಯವಿರುವ 22,718 ಕೊಠಡಿಗಳ ನಿರ್ಮಾಣಕ್ಕೆ ಪ್ರತಿ ಕೊಠಡಿಗೆ 5.45 ಲಕ್ಷ ರೂನಂತೆ ಒಟ್ಟು 1,238.13 ಕೋಟಿ ರೂ. ಹಣದ ಅವಶ್ಯಕತೆ ಇದೆ ಎನ್ನುವದನ್ನು ಈ ವರದಿಯು ತಿರಸ್ಕರಿಸುತ್ತದೆ. ಶಾಲೆ ವಿಲೀನಗೊಳಿಸುವುದರಿಂದ ಮತ್ತು ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಮಾಡುವುದರಿಂದ ಕೇವಲ 5,208 ಕೊಠಡಿಗಳನ್ನು ನಿರ್ಮಿಸಿದರೆ ಸಾಕೆಂದು ಹೇಳುತ್ತಿದೆ. ಇದಕ್ಕಾಗಿ ತಲಾ ರೂ 5.45 ಲಕ್ಷದಂತೆ ಬೇಕಾಗುವ ಮೊತ್ತ ರೂ,28.383 ಕೋಟಿಗಳು ಇದನ್ನು ಸರ್ವಶಿಕ್ಷ ಅಭಿಯಾನ (ಕೇಂದ್ರ ಸರ್ಕಾರ) ದಿಂದ ಪಡೆಯುವ ಏಕೈಕ ಉದ್ದೇಶದಿಂದ ಶಾಲೆಗಳ ಉನ್ನತೀಕರಣಕ್ಕೆ ರಾಜ್ಯ ಸರ್ಕಾರದ ನಿರ್ದಿಷ್ಟ ಕಾರ್ಯಕ್ರಮಗಳೇನು ಎಂಬುದನ್ನು ಎಲ್ಲಿಯೂ ಚರ್ಚಿಸಿಲ್ಲ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣದ ಭಾಗವಾಗಿ ಈ ಹಣವನ್ನು ತರಲು ಶಾಲೆಗಳ ಸಂರಚನೆ ಕುರಿತು ಚರ್ಚಿಸುತ್ತಿರುವುದು ಅಪ್ರಸ್ತುತ.

ಉದಾರೀಕರಣ ನೀತಿಯ ಫಲವಾಗಿ ಹಣವುಳ್ಳವರಿಗೆ ಮಾತ್ರ ಶಿಕ್ಷಣವೆನ್ನುವ ಮತ್ತು ಶಿಕ್ಷಣದ ಹಕ್ಕನ್ನು ಕಸಿದು ಕೊಳ್ಳುವ, ಶಿಕ್ಷಣವನ್ನು ಮಾರಾಟದ ಸರಕನ್ನಾಗಿಸುವ ಈ ಸಮಿತಿಯ ವರದಿ ತಿರಸ್ಕರಿಸಲು ಮುಂದಾಗಬೇಕಿದೆ.

ಒತ್ತಾಯಗಳು

• 12,740 ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚುವ ಪ್ರದನ್ನು (ವಿಲೀನಗೊಳಿಸುವುದನ್ನು)ಜಾರಿಗೆ ತರಬಾರದು. ತತ್‌ಕ್ಷಣ ಈ ಚಿಂತನೆ ಕೈಬಿಡಬೇಕು. ಮಕ್ಕಳ ಸಂಖ್ಯೆ ಕಡಿಮೆ ಇರುವ ಶಾಲೆಗಳನ್ನು ಬಲಪಡಿಸಿ ವಸತಿ, ಆಶ್ರಮ ಶಾಲೆಗಳನ್ನಾಗಿ ಪರಿವರ್ತಿಸಬೇಕು.

• ಸರಕಾರಿ ಶಾಲೆಗಳಿಗೆ ವಿಷಯವಾರು ಸಮರ್ಥ ಶಿಕ್ಷಕರ ನೇಮಕ, ಶಿಕ್ಷಕರಿಗೊಂದು ಕೊಠಡಿ, ಆಟದ ಮೈದಾನ, ಶೌಚಾಲಯ, ಕುಡಿಯುವ ನೀರು, ಗ್ರಂಥಾಲಯ ಇನ್ನಿತರ ಅಗತ್ಯ ಸೌಲಭ್ಯ ಕಲ್ಪಿಸಬೇಕು.

• 1ನೇ ತರಗತಿಯಿಂದಲೇ ಇಂಗ್ಲೀಷನ್ನು ಒಂದು ಭಾಷೆಯಾಗಿ ಸಮರ್ಥವಾಗಿ ಕಲಿಸಬೇಕು.

• ಖಾಸಗಿ ಶಾಲೆಗಳಿಗೆ ಅನುಮತಿ ನೀಡಬಾರದು. ಅಕ್ರಮ ಖಾಸಗೀ ಶಾಲೆಗಳ ಮೇಲೆ ಕ್ರಮ ಕೈಗೊಳ್ಳಬೇಕು.

• ತಾರತಮ್ಯದ ವಿವಿಧ ಪಠ್ಯಕ್ರಮ, ವಿವಿಧ ಆಡಳಿತ ವೈಖರಿಯ ಶಾಲೆಗಳ ಬದಲಾಗಿ 'ಸಮಾನ ಶಾಲಾ ಶಿಕ್ಷಣ ಪದ್ಧತಿ'ಯ ಗುಣಮಟ್ಟದ ಶಿಕ್ಷಣ ಜಾರಿಗೆ ತರಬೇಕು.

• 12,740 ಸರ್ಕಾರಿ ಶಾಲೆಗಳನ್ನು ಮುಚ್ಚಿ ದಲಿತ ಹಿಂದುಳಿದ, ಅಲ್ಪ ಸಂಖ್ಯಾತ, ಹಳ್ಳಿಗಳ ಮಕ್ಕಳನ್ನು ಅದರಲ್ಲೂ ವಿದ್ಯಾರ್ಥಿನಿಯರನ್ನು ಶಿಕ್ಷಣದಿಂದ ವಂಚಿಸುವ ಖಾಸಗೀಕರಣ ಪ್ರೇರಿತ ಪ್ರೊ॥ ಗೋವಿಂದ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು.

ಜೇವರ್ಗಿ ಅಂಗವಿಕಲರ ಯಶಸ್ವಿ ಹೋರಾಟ

ಅಂಗವಿಕಲರು ಜೇವರ್ಗಿ ತಾಲ್ಲೂಕಿನಲ್ಲಿ 'ಅಂಗವಿಕಲರ ಮತ್ತು ಪಾಲಕರ ಒಕ್ಕೂಟ' ರಚಿಸಿಕೊಂಡು ಹಲವಾರು ಹೋರಾಟ ನಡೆಸಿದ್ದಾರೆ. ಅಂಗವಿಕಲರ ಹಕ್ಕುಗಳಿಗಾಗಿ



ಹೋರಾಟ ನಡೆಸಲು ಸಂಘಟಿತರಾಗಿದ್ದಾರೆ. ಸರ್ಕಾರ ಅಂಗವಿಕಲರಿಗೆ ಕೆಲವು ಸವಲತ್ತುಗಳನ್ನು ನೀಡಿದೆ. ಇದರ ಮೇಲೆಯೂ ರಾಜಕಾರಣಿಗಳ, ಪಟ್ಟ ಭದ್ರರ ಕಣ್ಣು ನೆಟ್ಟಿರುತ್ತದೆ. ಅಂಗವಿಕಲರಿಗೆ ಮನೆಯಲ್ಲಿ ಶೇ 5 ರಷ್ಟು ಮನೆಗಳು ಕೊಡಬೇಕೆಂದಿದ್ದರೂ ಈ ಸವಲತ್ತು ಅಂಗವಿಕಲರಿಗೆ ಮುಟ್ಟಿರುವುದಿಲ್ಲ. ಎಲ್ಲಾ ಇಲಾಖೆಯಲ್ಲೂ, ಉದ್ಯೋಗದಲ್ಲೂ, ಶಿಕ್ಷಣದಲ್ಲಿಯೂ ಶೇ. 3 ರಷ್ಟು ಮೀಸಲಾತಿ ಅನುದಾನ ಅಂಗವಿಕಲರಿಗೆ ಇದ್ದರೂ ಅದನ್ನು ಸಂಪೂರ್ಣವಾಗಿ ದೋಚಿ ಅಂಗವಿಕಲರನ್ನು ಕಡೆಗಣಿಸಿದ್ದನ್ನು ನೋಡುತ್ತಿದ್ದೇವೆ. ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಅಂಗವಿಕಲರು ಮೊದಲು ಅಂಗವಿಕಲರಿಗಾಗಿ ಇರುವ ಅನುದಾನದ ಮೀಸಲಾತಿ ಅಂಗವಿಕಲರಿಗೇ ನೀಡಬೇಕೆಂದು ಒತ್ತಾಯಿಸಿ ಮನವಿ ನೀಡಿ ಧರಣಿ ಪ್ರಾರಂಭಿಸಿದರು.

ಜೇವರ್ಗಿ ತಾಲ್ಲೂಕಿನಲ್ಲಿ ಇಲ್ಲಿಯವರಿಗೆ ತಾಲ್ಲೂಕ ಪಂಚಾಯತಿಗೆ ಬರುತ್ತಿರುವ ಅನುದಾನದಲ್ಲಿ ಶೇ 3 ರಷ್ಟು ಹಣವನ್ನು ಅಂಗವಿಕಲರಿಗಾಗಿ ಮೀಸಲಿಡಬೇಕಿತ್ತು. ವಿಪರ್ಯಾಸವೆಂದರೆ ಅಂಗವಿಕಲರ ಹಣವನ್ನು ಸೇರಿಸಿಕೊಂಡು ಜೇವರ್ಗಿಯಲ್ಲಿ ವಾಣಿಜ್ಯ ಮಳಗಿಗಳನ್ನು ನಿರ್ಮಿಸಿದ್ದಾರೆ. ಧರಣಿ ಕುಳಿತವರು ಇದರ ಮಾಹಿತಿ ಕೇಳಿದಾಗ ಅಧಿಕಾರಿಗಳು ಕಕ್ಕಾ ಬಿಕ್ಕಿಯಾದರು. ನಂತರ ಇದರಲ್ಲಿನ ಒಂದು ಕೋಣೆಯನ್ನು ಅಂಗವಿಕಲರ ಚಟುವಟಿಕೆಗಾಗಿ ಬಿಟ್ಟು ಕೊಡುವುದಾಗಿ ತಿಳಿಸಿದ್ದಾರೆ.

ಇಲ್ಲಿಯ ಪಟ್ಟಣ ಪಂಚಾಯತಿಯು ಈ ನೀತಿಗೆ ಹೊರತಾಗಿಲ್ಲ, ಅಧಿಕಾರಿಗಳನ್ನು ಧರಣಿ ಸ್ಥಳಕ್ಕೆ ಕರೆಯಿಸಿ ಶೇ. 3 ಅನುದಾನ ಬಳಕೆಯ ಬಗ್ಗೆ ಗಟ್ಟಿ ಹಿಡಿದು ಕುಳಿತಾಗ ಇವರು ಕೂಡ ಕಕ್ಕಾಬಿಕ್ಕಿಯಾಗಿದ್ದಾರೆ. ವಿಶೇಷವೆಂದರೆ ಇಲ್ಲಿಯವರೆಗೂ ಕೂಡ ಅಂಗವಿಕಲರಿಗೆ ಯಾವ ಹಣವನ್ನು ಬಳಸದೇ ಪಟ್ಟ ಭದ್ರರ ಬೇರೆಯೇ ಕೆಲಸಗಳಿಗೆ ಬಳಕೆ ಮಾಡಿದ್ದಾರೆ. ಇನ್ನೂ ಮುಂದೆ ಅಂಗವಿಕಲರಿಗಾಗಿ ಶೇ. 3 ರ ಹಣ ತೆಗೆದಿರಿಸುವುದಾಗಿ ತಿಳಿಸಿ ಲೆಕ್ಕಾಚಾರ ಮಾಡಿ 2 ಕೋಟಿ ಕ್ರಿಯಾ ಯೋಜನೆಯಲ್ಲಿ 6 ಲಕ್ಷ ಹಣ ನೀಡುವುದಾಗಿ ತಿಳಿಸಿ ಈ ಹಣವನ್ನು, ಅಂಗವಿಕಲರಿಗಾಗಿ ಬಳಸುವುದಾಗಿ ಬರವಣಿಗೆಯ ಮೂಲಕ ಭರವಸೆ ನೀಡಿದ್ದಾರೆ.

ಬಿಸಿಎಂ ಮತ್ತು ಎಸ್.ಸಿ/ಎಸ್.ಟಿ ಹಾಸ್ಟೆಲ್‌ಗಳಲ್ಲಿ ನೀಡುತ್ತಿದ್ದ ಹಾಲು, ಮೊಟ್ಟೆ, ಬಾಳೆಹಣ್ಣು, ಮಾಂಸಹಾರ ಇನ್ನಿತರ ಪೌಷ್ಟಿಕಾಂಶ ಆಹಾರ ಕೊಡುವುದನ್ನು ನಿಲ್ಲಿಸಿದ್ದು ಕೂಡಲೇ ನೀಡಬೇಕೆಂದು ಮತ್ತು ಮಾಸಿಕ ಆಹಾರ ಭತ್ಯೆಯನ್ನು ಕೇರಳ ಮಾದರಿಯಂತೆ 1650ರೂ ಹೆಚ್ಚಿಸಬೇಕೆಂದು ಆಗ್ರಹಿಸಿ ಬೆಂಗಳೂರಿನ ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ 12.10.2012 ರಂದು ಎಸ್.ಎಫ್.ಐ ನೇತೃತ್ವದಲ್ಲಿ ನಡೆದ ಪ್ರತಿಭಟನೆ ನಡೆಸಿದರು



ಮುಳಬಾಗಿಲು: ದಲಿತರನ್ನು.....

ಪುಟ 4 ರಿಂದ

ವಾಹನಗಳ ರ್‍ಯಾಲಿ ಮುಖಾಂತರ ಕೋಲಾರದಿಂದ ಆರ್.ವೆಂಕಟರಾಮಯ್ಯ ನವರ ಸಮಾಧಿ ಬಳಿ ತೆರಳಿ, ಅವರ ಸಮಾಧಿಗೆ ಪುಷ್ಪ ಮಾಲೆಯನ್ನು ಹಾಕಿ ನಂತರ ಪ್ರತಿಭಟನಾ ಸ್ಥಳಕ್ಕೆ ತೆರಳಿದರು.

ಸೌಹಾರ್ದ ಬೆಂಬಲ

ಮುಳಬಾಗಿಲು ಹೋರಾಟ ಬೆಂಬಲಿಸಿ ದಿ:03-10-2012 ರಂದು ಹಲವು ಸಂಘಟನೆಗಳು ಸೇರಿ ಕೋಲಾರದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಇದಲ್ಲದೇ ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಸಮಸ್ಯೆಯನ್ನು ಶೀಘ್ರವಾಗಿ ಬಗೆಹರಿಸಲು ಒತ್ತಾಯ ಮಾಡಲಾಯಿತು. ಇದೇ ದಿನ ಮುಳಬಾಗಿಲೂ ಪಟ್ಟಣದ ಪ್ರಮುಖ ಶಾಲಾ ಕಾಲೇಜು ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ, ಬಡ ದಲಿತರಿಗೆ ಪುನರ್ವಸತಿ ಕಲ್ಪಿಸುವಂತೆ ಮುಳಬಾಗಿಲು ಪಟ್ಟಣದಲ್ಲಿ ಪ್ರತಿಭಟನಾ ರ್‍ಯಾಲಿಯನ್ನು ಮತ್ತು ಶಾಸಕರ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಪ್ರತಿಭಟನೆಗಳು ತೀವ್ರವಾಗುತ್ತಿರುವುದನ್ನು ಮನಗೊಂಡ ಸರ್ಕಾರದ ಸಚಿವರು, ಅಧಿಕಾರಿಗಳು ಮತ್ತು ಜಿಲ್ಲಾಡಳಿತವು ಶಾಸಕರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದರು. ದಿ:4-10-2012 ರಂದು ಹೆಚ್ಚುವರಿ ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಪುರಸಭೆ ಮುಖ್ಯಾಧಿಕಾರಿಗಳು, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಮತ್ತು ವಿವಿಧ ಸಂಘಟನೆಯ ಪ್ರತಿನಿಧಿಗಳೊಂದಿಗೆ ತಾಲ್ಲೂಕು ಪಂಚಾಯಿತಿಯಲ್ಲಿ ಸಭೆ ನಡೆಸಿದ ಶಾಸಕರು ನವೆಂಬರ್ 1, 2012 ರೊಳಗೆ ಆಶ್ರಯ ನಿವೇಶನಗಳನ್ನು ಹಂಚುವುದಾಗಿ ಭರವಸೆ ನೀಡಿದರು. ನಂತರ ಉಪವಾಸ ಸತ್ಯಾಗ್ರಹವನ್ನು ಕೈಬಿಡಲಾಯಿತು.

ಈ ಮಧ್ಯ ಪ್ರವೇಶಕ್ಕೆ ನೊಂದವರಿಂದ ಮಾತ್ರವಲ್ಲದೇ ಪ್ರಗತಿಪರರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನವೆಂಬರ್ 1, 2012 ರೊಳಗೆ ಈ ಸಮಸ್ಯೆಗೆ ಖಾಯಂ ಪರಿಹಾರ ಸಿಗದಿದ್ದಲ್ಲಿ, ನವೆಂಬರ್ 4. 2012 ರ ಉದ್ದೇಶಿತ ಸಮಾವೇಶದಲ್ಲಿ ಚರ್ಚಿಸಿ ಹೋರಾಟವನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ತೀರ್ಮಾನಿಸಲಾಗಿದೆ.



ದಲಿತರ ಮೇಲೆ ಹಲ್ಲೆ
ಕ್ರಮಕ್ಕೆ ಒತ್ತಾಯಿಸಿ ಪ್ರತಿಭಟನೆ:

ಮುಳಬಾಗಿಲು ತಾಲ್ಲೂಕಿನಲ್ಲಿ ಸಿಪಿಐ(ಎಂ) ಪಕ್ಷವು ಇತ್ತೀಚಿನ ದಿನಗಳಲ್ಲಿ ದಲಿತರ ಸಮಸ್ಯೆ ಕುರಿತಂತೆ ಮತ್ತೊಂದು ಘಟನೆಯಲ್ಲಿ ಮಧ್ಯ ಪ್ರವೇಶ ಮಾಡಿದೆ. ಮುಖ್ಯವಾಗಿ ಎರಡು ತಿಂಗಳ ಹಿಂದೆ ಮೇಲ್ ತಾಯಲೂರು ಗ್ರಾಮದಲ್ಲಿ ಮಾವಿನ ಕಾಯಿ ಕಿತ್ತನೆಂಬ ಕ್ಷುಲ್ಲಕ ಕಾರಣಕ್ಕಾಗಿ ತೋಟದ ಮಾಲೀಕನ ಮಗ ದಲಿತ ಬಾಲಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ಈ ಘಟನೆ ಕುರಿತಂತೆ ಸಿಪಿಐ(ಎಂ) ಪಕ್ಷದ ನಿಯೋಗವು ಮೇಲ್ ತಾಯಲೂರು ಗ್ರಾಮಕ್ಕೆ ಭೇಟಿ ನೀಡಿ ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದ್ದಲ್ಲದೇ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತದ ಮೇಲೆ ಒತ್ತಡ ಹೇರಿತು.

ಇಷ್ಟೆಲ್ಲ ಹೋರಾಟಗಳು ನಡೆದರೂ ಮುಳಬಾಗಿಲು ತಾಲ್ಲೂಕಿನಲ್ಲಿರುವ ಸಿಪಿಐ ಪಕ್ಷವು ಇದರ ಬಗ್ಗೆ ಯಾವುದೇ ಚಕಾರ ಎತ್ತದೇ ಇದ್ದದ್ದು ಸಾರ್ವಜನಿಕರ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಏಳಲು ಕಾರಣವಾಗಿದೆ.

ಕನ್ನಡ ವಾರಪತ್ರಿಕೆ

ಧಾರವಾಡ: ಜಿಲ್ಲಾ ರೈತ ಸಮಾವೇಶ

ರೈತರ ಸಂಕಷ್ಟ ಪರಿಹರಿಸಲು ವಿಫಲವಾದ ಕೃಷಿ ಬಜೆಟ್‌ಗಳು

ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ಕೃಷಿ ಉತ್ಪಾದನೆಗೆ ಬೇಕಾಗುವ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ ಮತ್ತೊಂದೆಡೆ "ಕೃಷಿಕರು" ಎನ್ನುವ ಪರಿಭಾಷೆಯನ್ನೆ ಬದಲಿಸಿ ಬಹುರಾಷ್ಟ್ರೀಯ ಕಂಪನಿಗಳಿಗೆ, ಭೂಗಳ್ಳರಿಗೆ ಫಲವತ್ತಾದ ಕೃಷಿಭೂಮಿಯನ್ನು ಪರಭಾರೆ ಮಾಡಲು ಸರಕಾರ ಹುನ್ನಾರ ನಡೆಸಿದೆ. ಈ ಹಿನ್ನಲೆಯಲ್ಲಿ ಹಲವು ಕಾನೂನುಗಳಿಗೆ ತಿದ್ದುಪಡಿ ಮಾಡಲು ಸರಕಾರ ಸಜ್ಜಾಗಿದೆ ಈ ರೈತ ವಿರೋಧಿ ನೀತಿಗಳ ವಿರುದ್ಧ ನವೆಂಬರ್-5 ರಂದು ರಾಜ್ಯಾದ್ಯಂತ ನಡೆಯಲಿರುವ ಜೈಲ್‌ಭರೋ ಹೋರಾಟಕ್ಕೆ ರೈತ-ಕೃಷಿಕೂಲಿಕಾರರು ಸನ್ನದ್ಧರಾಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಕರೆ ನೀಡಿದರು.

ಅಕ್ಟೋಬರ-6, 2012 ರಂದು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ರೈತರ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ರಾಜ್ಯದ ಬಿಜೆಪಿ ಸರಕಾರ ತಾವೇ ಭರವಸೆ ನೀಡಿದಂತೆ ಎಷ್ಟು ಜನ ಬಗರಹುಕುಂ ಸಾಗುವಳಿದಾರರಿಗೆ ಪಟ್ಟಾ ನೀಡಿದ್ದಾರೆ ?. ಯಡಿಯೂರಪ್ಪನವರ ಕ್ಷೇತ್ರದಲೇ ಸಾವಿರಾರು ಬಗರಹುಕುಂ ಸಾಗುವಳಿದಾರರ ಅರ್ಜಿಗಳು ತಿರಸ್ಕಾರವಾಗಿವೆ. ಈ ಸರಕಾರ ರೈತರಿಗೆ ವಂಚನೆ ಮಾಡಿದೆ. ರೈತರನ್ನು ಉದ್ಧಾರ ಮಾಡುತ್ತೇವೆ ಎಂದು ಮಂಡಿಸಿದ ಮೂರು ಕೃಷಿ ಬಜೆಟ್‌ಗಳು ರೈತ-ಕೃಷಿಕೂಲಿಕಾರರ ಸಂಕಷ್ಟಗಳನ್ನು ಪರಿಹರಿಸಲು ವಿಫಲವಾಗಿವೆ ಅಲ್ಲದೇ ಮತ್ತಷ್ಟು ಸಂಕಷ್ಟಕ್ಕೀಡು ಮಾಡಿವೆ ಎಂದರು. ಈ ವಿಷಯದಲ್ಲಿ ಕೇಂದ್ರ ಸರಕಾರವು ಕೂಡ ಅತ್ಯಂತ ರೈತ ವಿರೋಧಿ ನೀತಿ ಅನುಸರಿಸುತ್ತಿದ್ದು ಈ ನೀತಿಗಳನ್ನು ಹಿಮ್ಮೆಟ್ಟಿಸಲು ಬಲಿಷ್ಟ ಸಂಘಟನೆ ಕಟ್ಟೋಣ ಎಂದರು.

ರಾಜಕೀಯ ಜೀತ ಬೇಡ.

ಜನತೆಗೆ ರಾಜಕೀಯ ಪ್ರಜ್ಞೆ ಬೆಳೆದು ಬರಬೇಕು. ಜಾತಿ, ಹಣ ಮುಂತಾದ ಆಮೀಷಕ್ಕೆ ಒಳಗಾಗಿ ಮತ ನೀಡಿ ಮುಂದಿನ ಚುನಾವಣೆಯವರೆಗೆ ರಾಜಕೀಯ ಜೀತ ಅನುಭವಿಸುವುದು ಬೇಡ. ದುಡಿಯುವ ವರ್ಗವಾದ ನೀವು ನಿಮ್ಮವರನ್ನೇ ಚುನಾವಣೆಯಲ್ಲಿ ಆಯ್ಕೆ ಮಾಡುವ ಪ್ರಭುದ್ಧತೆಯನ್ನು ಮೆರೆಯಬೇಕು. ಅಂದಾಗ ಮಾತ್ರ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯ. ಗ್ರಾಮೀಣ ಪ್ರದೇಶದಲ್ಲಿ ಶೇ. 33% ರಷ್ಟು ಭೂರಹಿತರಿದ್ದು ಆ ಸಂಖ್ಯೆ ಬೆಳೆಯುತ್ತಲೇ ಇದೆ.

ನವೆಂಬರ್-05, ಜೈಲಭರೋ ಚಳುವಳಿಗೆ ಸನ್ನದ್ಧರಾಗಲು ಕರೆ.



ಸಣ್ಣ ರೈತರು ಸಂಕಷ್ಟದಲ್ಲಿದ್ದಾರೆ. ಭೂಮಿ, ಜನರ ಬದುಕು ಹಾಗೂ ಒಣ ಭೂಮಿಯಲ್ಲಿ ಕೃಷಿಯ ಅಭಿವೃದ್ಧಿ ಕುರಿತು ಸಂಶೋಧನೆಗಳು ಸಾಕಷ್ಟು ನಡೆಯಬೇಕಾಗಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಚಂದ್ರ ಪೂಜಾರಿ ಸಮಾವೇಶದಲ್ಲಿ "ಭೂಮಿಯ ಪ್ರಶ್ನೆ" ಕುರಿತು ಉಪನ್ಯಾಸ ನೀಡುತ್ತಾ ಹೇಳಿದರು.

ಜಿಲ್ಲಾ ಸಂಚಾಲಕ ಬಿ.ಎಸ್.ಸೊಪ್ಪಿನ ಅಧ್ಯಕ್ಷತೆ ವಹಿಸಿ ಮಾತನಾಡಿ ರೈತ-ಕೃಷಿಕೂಲಿಕಾರರು ಅತ್ಯಂತ ಸಂಕಷ್ಟದಲ್ಲಿದ್ದು, ಗಂಭೀರ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅದರಲ್ಲೂ 3-4 ವರ್ಷಗಳಿಂದ ಈ ಭಾಗದಲ್ಲಿ ನೆರೆಹಾವಳಿ, ಅತಿವೃಷ್ಟಿ, ಬರಗಾಲದಿಂದ ಜನ ತತ್ತರಿಸಿದ್ದಾರೆ. ಆದಾಗ್ಯೂ ಸರಕಾರ ರೈತರ ನೆರವಿಗೆ ಬರಲಿಲ್ಲ. ಶಿಥಿಲಗೊಂಡ ರೈತ ಚಳುವಳಿಯನ್ನು ಪುನಸ್ಥಾಪಿಸುವ ನಿಟ್ಟಿನಲ್ಲಿ ಸಂಘಟನೆಯನ್ನು ಜಿಲ್ಲೆಯಾದ್ಯಂತ ವಿಸ್ತರಿಸುವ ಪ್ರಯತ್ನಗಳು ನಡೆದಿವೆ ಎಂದರು. ನೇಗಿಲಯೋಗಿ ರೈತ ಗೀತೆಯೊಂದಿಗೆ ಸಮಾವೇಶ ಪ್ರಾರಂಭವಾಯಿತು. ನಂತರ ನಡೆದ ಚರ್ಚೆಯಲ್ಲಿ ವಿವಿಧ ಗ್ರಾಮಗಳಿಂದ ಬಂದ ರೈತ ಮುಖಂಡರು ಮಾತನಾಡಿದರು, ಕೆ.ಎಚ್.ಪಾಟೀಲ ಪ್ರಸ್ತಾವಣೆ ಮಾಡಿದರು, ಮಹೇಶ ಪತ್ತಾರ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು. ನಾರಾಯಣ ಕಾಳೆ ವಂದಿಸಿದರು. ವೇದಿಕೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಆರ್.ಎಚ್.ಆಯಿ ಉಪಸ್ಥಿತರಿದ್ದರು. ವಿವಿಧ ಗ್ರಾಮಗಳಿಂದ ನೂರಾರು ರೈತರು ಭಾಗವಹಿಸಿದ್ದರು.

ಪ್ರಮುಖ ನಿರ್ಣಯಗಳು

- ಒಮ್ಮೆ ರೈತರ ಎಲ್ಲಾ ರೀತಿಯ ಸಾಲಗಳನ್ನು ಮನ್ನಾ ಮಾಡಬೇಕು.
- ಬರ ಪರಿಹಾರ ಪ್ರತಿ ಎಕರೆಗೆ 10 ಸಾವಿರ ನೀಡಬೇಕು.
- ಜಿಲ್ಲೆಯ ಬಗರಹುಕುಂ ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಬೇಕು.
- ಗ್ರಾಮೀಣ ಪ್ರದೇಶದಲ್ಲಿ ಸರಕಾರಿ ಜಮೀನನಲ್ಲಿ ಅನಧಿಕೃತವಾಗಿ ಕಟ್ಟಿಕೊಂಡ ಮನೆಗಳನ್ನು ಸಕ್ರಮಗೊಳಿಸಲು ಒತ್ತಾಯ.

ಪದಾಧಿಕಾರಿಗಳ ಆಯ್ಕೆ

ಸಮಾವೇಶ ಕರ್ನಾಟಕ ಪ್ರಾಂತ ರೈತ ಸಂಘದ ಧಾರವಾಡ ಜಿಲ್ಲಾ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆಮಾಡಿತು.

ಅಧ್ಯಕ್ಷರಾಗಿ ಬಿ.ಎಸ್.ಸೊಪ್ಪಿನ. ಉಪಾಧ್ಯಕ್ಷರುಗಳಾಗಿ ಮಡಿವಾಳಪ್ಪ ದಿಂಡರಕೊಪ್ಪ ಮೈಲಾರಪ್ಪ ಶಿವಪ್ಪನವರ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಎಚ್.ಪಾಟೀಲ, ಸಹಕಾರ್ಯದರ್ಶಿಗಳಾಗಿ ನೀಲಕಂಠಪ್ಪ ಶಿಂಪಗೇರ, ಮಲ್ಲಿಕಾರ್ಜುನ ಉಪ್ಪಾರ, ಖಜಾಂಚಿಯಾಗಿ ಮಂಜುನಾಥ ಕೇರಾಳಿ ಸಮಿತಿಯ ಸದಸ್ಯರಾಗಿ ಸಿಂಗಯ್ಯ ಚಿಕ್ಕಮಠ, ಲಿಂಗರಾಜ ತಿರ್ಲಾಪೂರ, ರಮೇಶ ಬರ್ಗಿ, ಶೇಖಪ್ಪ ದಳವಾಯಿ, ಗಂಗಪ್ಪ ಗೌರಿ, ಫೀರಪ್ಪ ಪೀರಗಾರ, ಗದಗಯ್ಯ ಚಿಕ್ಕಮಠ ಆಯ್ಕೆಯಾದರು.

- ಮಹೇಶ ಪತ್ತಾರ

ಕಾವೇರಿ: ಸದ್ದು, ಗದ್ದಲ, ಬಂದ್.......

ಪುಟ 5ರಿಂದ

ಪ್ರದೇಶದಲ್ಲಿ ಉಂಟಾಗಿರುವ ನೀರಿನ ತೀವ್ರ ಕೊರತೆಯನ್ನು ವಿವಿಧ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿವೆ. ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಹಾಗೂ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಎರಡೂ ಕೂಡ ಕರ್ನಾಟಕದಲ್ಲಿ ಒಂದು ನಿಲುವು ಹಾಗೂ ತಮಿಳುನಾಡಿನಲ್ಲಿ ಅದಕ್ಕೆ ವಿರುದ್ಧವಾದ ನಿಲುವನ್ನು ತಳೆದಿವೆ. ತಮ್ಮ ಪಕ್ಷದ ನಾಯಕರನ್ನು ಹಾಗೂ ಕಾರ್ಯಕರ್ತರನ್ನು ಜನ ಸಾಮಾನ್ಯರನ್ನು ಮತ್ತು ರೈತರನ್ನು ಭಾವೋದ್ರೇಕಗೊಳಿಸುವುದರಲ್ಲಿ ನಿರತವಾಗಿವೆ. ಆ ಮೂಲಕ ಒಂದು ರಾಜ್ಯದ ಜನತೆ ಹಾಗೂ ರೈತರನ್ನು ಮತ್ತೊಂದು ರಾಜ್ಯದ ಜನತೆ ಹಾಗೂ ರೈತರ ವಿರುದ್ಧ ಎತ್ತಿಕಟ್ಟುವುದರಲ್ಲಿ ಭಾಗಿಯಾಗಿವೆ'ಯೆಂದು ಇದನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸಿತ್ತು. ಮುಖ್ಯವಾಗಿ ಎರಡೂ ರಾಜ್ಯಗಳು ಮೇಲ್ಮನವಿ ಮಾಡಲು ನಿರ್ಧರಿಸಿರುವುದರಿಂದ ನಮ್ಮ ವಾದವನ್ನು ಸಮರ್ಥವಾಗಿ ಮಂಡಿಸಿ ನ್ಯಾಯ ಪಡೆಯಲು ಮುಂದಾಗಬೇಕೆಂದು ಆಗ್ರಹಿಸಿತ್ತು. ಈಗ ಎರಡೂ ರಾಜ್ಯಗಳಲ್ಲಿನ ವಸ್ತು ಸ್ಥಿತಿಯನ್ನು ಅಧ್ಯಯನ ಮಾಡಿದ ಕಾವೇರಿ ಉಸ್ತುವಾರಿ ಸಮಿತಿಯ ವರದಿ ನಂತರದ ಬೆಳವಣಿಗೆಗಳು ಇದೇ ಅನಿವಾರ್ಯ, ಅಗತ್ಯ ಕ್ರಮವೆಂದು ಸಾಬೀತಾಗಿದೆ.

ಸಿಪಿಐ: ಹೀಗೇಕೆ?

ಆದರೆ ವಿಚಿತ್ರವೆಂದರೆ ಒಂದು ಎಡ ಪಕ್ಷವಾಗಿರುವ ದುಡಿಯುವ ವರ್ಗದ ಅಂತರಾಷ್ಟ್ರೀಯತೆಯನ್ನು ಫೆಡರಲ್ ತತ್ವವನ್ನು ಒಪ್ಪಿಕೊಂಡಿರುವ ಭಾರತ ಕಮ್ಯೂನಿಸ್ಟ್ ಪಕ್ಷ(ಸಿಪಿಐ)ದ ಕರ್ನಾಟಕ ಘಟಕ ಈ ಉನ್ಮಾದದ ಚಳುವಳಿಯೊಂದಿಗೆ ತನ್ನನ್ನು ತೊಡಗಿಸಿಕೊಂಡದ್ದು, ಅದರ ಹಿರಿಯ ನಾಯಕರು ನೀರು ಬಿಡಕೂಡದು ಎಂಬ ನಿಲುವಿನ ಸಂಕುಚಿತವಾದೀ ಕನ್ನಡ ಸಂಘಟನೆಗಳೊಂದಿಗೆ ಜಂಟಿಯಾಗಿ ಭಾಗಿಯಾಗಿಯಾದದ್ದು. ಭಾಷೆ, ಗಡಿ, ನೀರಿನ ಹಂಚಿಕೆಯಂತಹ ವಿಷಯಗಳಲ್ಲಿ ದುಡಿಯುವ ವರ್ಗದ ಪಕ್ಷಗಳು ಒಂದೊಂದು ರಾಜ್ಯಗಳಲ್ಲಿ ಒಂದೊಂದು ಸಂದರ್ಭ ಸಾಧಕ ನಿಲುವನ್ನು ತೆಗೆದುಕೊಳ್ಳಲಾದೀತೆ?. ಹಾಗಾದಲ್ಲಿ ಕಮ್ಯೂನಿಸ್ಟ್ ಪಕ್ಷ ವೆಂದುಕೊಳ್ಳಲು ಅರ್ಥವಾದರೂ ಏನಿದೆ.? ಇರಲಿ, ಸಿಪಿಐ ನ ಇಂತಹ ನಿಲುವುಗಳು ಹೊಸತೇನಲ್ಲ.

ಮಲಪ್ರಭಾ ನೀರಾವರಿ ಪ್ರದೇಶದಲ್ಲಿ ಬರ

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹಂಚಿನಾಳದ ಗ್ರಾಮದ ರೈತ ಕಲ್ಲಪ್ಪ ಒಬ್ಬ ಸಣ್ಣ ರೈತ. ಎರಡು ಎಕರೆ ಭೂಮಿಯ ಒಡೆಯ. ಎರಡು ಎತ್ತುಗಳನ್ನು ಸಾಕಿದ್ದಾನೆ. ಮನೆಯಲ್ಲಿ ಮಡದಿ ಮಕ್ಕಳಲ್ಲದೆ, ವಯಸ್ಸಾದ ತಂದೆ ತಾಯಿ ಇದ್ದಾರೆ. ಈಗ ಸಧ್ಯ ಈತ ಸುಮಾರು 18 ಕಿ.ಮೀ. ದೂರದಲ್ಲಿರುವ ತಾಲ್ಲೂಕು ಕೇಂದ್ರ ಸವದತ್ತಿಯಲ್ಲಿ ನಿರ್ಮಾಣವಾಗುತ್ತಿರುವ ಒಂದು ಕಟ್ಟಡ ಕಾವಲುಗಾರನಾಗಿ ಕೆಲಸ ಮಾಡುತ್ತಾನೆ. ಯಾಕಪ್ಪ ಕಲ್ಲಪ್ಪ, ನೀನು ಕಾವಲು ಕಾಯುವ ಕೆಲಸಕ್ಕೆ ನಿಂತು ಬಿಟ್ಟಿದ್ದಿಯಾ ? ಎಂದು ಕೇಳಿದರೆ, ಆತನಿಂದ ಸಿಗುವ ಉತ್ತರ ಮನಕುಲುಕುವಂತಾದ್ದು.

ನಾನೊಬ್ಬ ರೈತ ಹೌದು. ಆದರೆ ನಾನೊಬ್ಬ ಸಾಲಗಾರ. ಬೇರೊಬ್ಬರ ಭೂಮಿಯನ್ನು ಲಾವಣಿ (ಗೇಣಿ)ಗೆ ಪಡೆದು ವ್ಯವಸಾಯ ಮಾಡಲು ಹೋಗಿ ಮುಂಗಡ ಲಾವಣಿ ಕೊಡಲು ಪಡೆದ ಖಾಸಗೀ ಸಾಲ ಹಾಗೂ ಅದರ ಬಡ್ಡಿ ಸೇರಿಕೊಂಡು ಎರಡು ಲಕ್ಷ ರೂ ಆಗಿದೆ. ಇತ್ತ ಮಳೆ ಇಲ್ಲ, ಬೆಳೆ ಇಲ್ಲ, ಎತ್ತುಗಳಿಗೆ ಮೇವು ಇಲ್ಲ. ನನ್ನಂತವರು ಅನೇಕ ಜನ ಗೋವಾ, ಮಹಾರಾಷ್ಟ್ರಕ್ಕೆ ಕೆಲಸ ಹುಡುಕಿಕೊಂಡು ಹೋಗಿದ್ದಾರೆ. ಅಲ್ಲಿ ದಿನಕ್ಕೆ ರೂ 300-400 ಕೂಲಿ ಸಿಗುತ್ತದೆ. ನನಗೆ ಊರು ಬಿಟ್ಟು ಹೋಗಲು ಸಾಧ್ಯವಿಲ್ಲ. ಮನೆಯಲ್ಲಿರುವ ಎತ್ತುಗಳಿಗೆ ಮೇವು ವ್ಯವಸ್ಥೆ ಮಾಡಬೇಕು. ವಯಸ್ಸಾದ ತಂದೆ ತಾಯಿಯರನ್ನು ನೋಡಬೇಕು. ಹೀಗಾಗಿ ನಾನು ಸವದತ್ತಿಯಲ್ಲಿ ವಾಚಮನ್ ಕೆಲಸ ಮಾಡುತ್ತಿದ್ದೇನೆ. ಹಗಲು ಹೊತ್ತಿನಲ್ಲಿ ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಇರುತ್ತೇನೆ. ರಾತ್ರಿ ಹೊತ್ತು ಮನೆಗೆ ಬಂದು ಮನೆಯಲ್ಲಿನ ಕೆಲಸ ಮಾಡುತ್ತೇನೆ. ಬೆಳಿಗ್ಗೆ ಮತ್ತೆ ಕೆಲಸಕ್ಕೆಂದು ಹೋದಾಗ ಆಘಾತ ಕಾದಿರುತ್ತದೆ. ನಿರ್ಮಾಣ ಹಂತದಲ್ಲಿರುವ ಆ ಕಟ್ಟಡ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣದ ಹತ್ತಿರ ಇರುವುದರಿಂದ ರಾತ್ರಿ ಸಮಯದಲ್ಲಿ ಯಾರ್‍ಯಾರೋ ಮಲ ವಿಸರ್ಜನೆ ಮಾಡಿ ಹೋಗಿರುತ್ತಾರೆ. ನಾನು ನನ್ನ ಕೆಲಸ ಉಳಿಸಿಕೊಳ್ಳುವುದಕ್ಕಾಗಿ ಕಾಂಟ್ರಾಕ್ಟರ್ ಬರುವುದರೊಳಗಾಗಿ ಅದೆಲ್ಲವನ್ನು ಸ್ವಚ್ಛ ಮಾಡುತ್ತೇನೆ, ಎಂದು ತನ್ನ ಗೋಳು ಹಂಚಿಕೊಳ್ಳುತ್ತಾನೆ.

ಇಂದು ಮಲಪ್ರಭಾ ನೀರಾವರಿ ಪ್ರದೇಶದಲ್ಲಿ ಆವರಿಸಿಕೊಂಡಿರುವ ಬರದಿಂದಾಗಿ ಇಲ್ಲಿಯ ರೈತರು ಮತ್ತು ಕೂಲಿಕಾರರು ಯಾವ ರೀತಿ ಪರದಾಡುತ್ತಿದ್ದಾರೆ ಎನ್ನುವುದರ ಒಂದು



ಸಣ್ಣ ಸ್ಯಾಂಪಲ್ ಇದು ಎಂದರೆ ತಪ್ಪಾಗದು. ಸವದತ್ತಿ ತಾಲ್ಲೂಕಿನ ಹಂಚಿನಾಳ, ಹರೇಕುಂಬಿ, ಚಿಕ್ಕುಂಬಿ, ಆಚಮಟ್ಟಿ, ದಡೇರಕೊಪ್ಪ ಮೊದಲಾದ ಹಳ್ಳಿಗಳು ಹಾಗೂ ನವಲಗುಂದ, ನರಗುಂದ, ರೋಣ, ಬದಾಮಿ ಮತ್ತು ರಾಮದುರ್ಗ ತಾಲ್ಲೂಕಿನ ಹಳ್ಳಿಗಳು ಮಲಪ್ರಭಾ ಅಚ್ಚುಕಟ್ಟು ಪ್ರದೇಶಕ್ಕೆ ಒಳಪಟ್ಟಿವೆ. ಸತತವಾಗಿ ಬರಗಾಲವನ್ನು ಎದುರಿಸುತ್ತಾ ಬಂದಿರುವ ಈ ತಾಲ್ಲೂಕುಗಳ ರೈತರ ಅನುಕೂಲಕ್ಕೆಂದು ಸವದತ್ತಿ ತಾಲ್ಲೂಕು ನವಿಲುತೀರ್ಥದಲ್ಲಿ ಮಲಪ್ರಭಾ ನದಿಗೆ ಅಡ್ಡವಾಗಿ ಅಣೆಕಟ್ಟು ಕಟ್ಟಲಾಗಿತ್ತು. 1974 ರಿಂದ ಕಾಲುವೆಗಳಲ್ಲಿ ನೀರು ಹರಿಯಲು ಆರಂಭವಾಯಿತು. ಜೊತೆಯಲ್ಲಿ ಹೆಚ್ಚು ಇಳುವರಿ ಕೊಡುವ 'ವರಲಕ್ಷ್ಮೀ' ಹತ್ತಿಯನ್ನು ಪರಿಚಯಿಸಲಾಯಿತು. ಆರಂಭದ ವರ್ಷಗಳಲ್ಲಿ ಇಳುವರಿಯೂ ಚೆನ್ನಾಗಿ ಬಂತು. ಒಳ್ಳೆಯ ಬೆಲೆಯೂ ಸಿಕ್ಕಿತು. ಕೃಷಿ ಕೂಲಿಕಾರರಿಗೆ ಒಳ್ಳೆಯ ದುಡಿಮೆಯನ್ನು ಒದಗಿಸಿತು. ಬೇರೆ ಬೇರೆ ಜಿಲ್ಲೆಗಳಿಂದ ಕೂಲಿಕಾರ ಕುಟುಂಬಗಳು ಮಲಪ್ರಭಾ ನೀರಾವರಿ ಪ್ರದೇಶಕ್ಕೆ ಬಂದು ಇಲ್ಲಿಯೇ ನೆಲೆಸಿದ್ದರೂ ಮಳೆ ಅಭಾವ ಉಂಟಾದಾಗಲೂ, ಖಾನಾಪುರ ತಾಲ್ಲೂಕಿನಲ್ಲಿ ಮಳೆಯಾದಾಗ ನೀರು ಹರಿದು ಬಂದು ಮಲಪ್ರಭಾ ಜಲಾಶಯ ತುಂಬಿಕೊಳ್ಳುತ್ತಿತ್ತು. ಆ ನೀರಿನಿಂದ ರೈತರು ಹತ್ತಿ, ಜೋಳ, ಗೋದಿ, ಸೂರ್ಯಕಾಂತಿ, ಗೋವಿನಜೋಳ ಮೊದಲಾದ ಬೆಳೆಗಳನ್ನು ಬೆಳೆದು ಸ್ವಲ್ಪ ಮಟ್ಟಿಗೆ ನೆಮ್ಮದಿಯಿಂದ ಬದುಕು ಸಾಗಿಸುತ್ತಿದ್ದರು.

ಆದರೆ ಈ ಸಲದ ಬರದಿಂದ ಮಲಪ್ರಭಾ ನೀರಾವರಿ ಪ್ರದೇಶದ ರೈತರು ಕಂಗೆಟ್ಟಿದ್ದಾರೆ. 80-90 ವರ್ಷದ ಹಿರಿಯ ರೈತರು ಹೇಳುವ ಪ್ರಕಾರ ಇಂತಹ ಭೀಕರ ಬರವನ್ನು ಅವರು ಅವರ ಜೀವಮಾನದಲ್ಲೇ ಕಂಡಿರಲಿಲ್ಲ. ದನಕರುಗಳಿಗೆ ಮೇವಿನ ಕೊರತೆ ಗಂಭೀರವಾಗಿದೆ. ಪ್ರತಿವರ್ಷ ರೋಹಿಣಿ, ಮೃಗಶಿರ ಮಳೆಯಾದಾಗ ಕೃಷಿ ಚಟುವಟಿಕೆಗಳು ಆರಂಭವಾಗಿ ಹೆಸರು ಬಿತ್ತಿ, ನಂತರದಲ್ಲಿ ಗೋವಿನ ಜೋಳ ಬೆಳೆದು ಮನಃ ಹಿಂಗಾರಿ ಬೆಳೆಗಾಗಿ ಬಿಳಿ ಜೋಳ, ಗೋದಿ ಸೂರ್ಯಕಾಂತಿ, ಕಡಲೆ ಮೊದಲಾದ ಬೆಳೆಗಳನ್ನು ಬೆಳೆದು ರೈತರು ತಕ್ಕಮಟ್ಟಿಗೆ ನೆಮ್ಮದಿಯಿಂದ ಇರುತ್ತಿದ್ದರು ಆದರೆ ಈ ವರ್ಷ ರೋಹಿಣಿ, ಮೃಗಶಿರ ಮಳೆ ಕೈಕೊಟ್ಟಿವೆ ಮಾತ್ರವಲ್ಲ ಸಪ್ಟಂಬರ್ ತಿಂಗಳವರೆಗೂ ಇಲ್ಲಿ ಮಳೆಯೇ ಇಲ್ಲ. ಖಾನಾಪುರ ತಾಲ್ಲೂಕಿನಲ್ಲಿ ಅಲ್ಪ ಸ್ವಲ್ಪ ಮಳೆಯಾಗಿರುವುದರಿಂದ ಮಲಪ್ರಭಾ ಜಲಾಶಯದಲ್ಲಿ ಸ್ವಲ್ಪ ಪ್ರಮಾಣದಲ್ಲಿ ನೀರು ಸಂಗ್ರಹಣೆ ಆಗಿದೆ. ಅದನ್ನು ಕುಡಿಯುವ ನೀರಿಗಾಗಿ ಹಾಗೂ ಹಿಂಗಾರಿ ಬೆಳೆಗೆ ಸಹಾಯವಾಗಲೆಂದು ನೀರಾವರಿ ಇಲಾಖೆಯವರು ಕಾದಿಟ್ಟಿದ್ದಾರೆ.

ಇದೆಲ್ಲದರ ಪರಿಣಾಮವಾಗಿ ಹಳ್ಳಿಗಳಲ್ಲಿ ರೈತರು ಮತ್ತು ಕೂಲಿಕಾರರ ಪರಿಸ್ಥಿತಿ ಗಂಭೀರವಾಗಿದೆ. ರೈತ ಕುಟುಂಬಗಳು ಸಹ ಕೊಲ್ಲಾಪುರ, ಪೂನಾ ಮೊದಲಾದ ನಗರಗಳಿಗೆ ಗುಳೆ ಹೋಗಿವೆ. ಮುದುಕರು ಮಕ್ಕಳನ್ನು ಮನೆಗಳಲ್ಲಿ ಬಿಟ್ಟು ಹೋಗಿದ್ದಾರೆ. ರೈತರ ಭೂಮಿಯನ್ನು ಲಾವಣಿಗೆ ಪಡೆದು ವ್ಯವಸಾಯ ಮಾಡುತ್ತಿದ್ದ ಸಣ್ಣ ರೈತರು, ಕೃಷಿಕೂಲಿಕಾರರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಲಾವಣಿ ಮುಂಗಡಕ್ಕಾಗಿ ಮಾಡಿದ ಖಾಸಗಿ ಸಾಲ ಮತ್ತು ಅದರ ಬಡ್ಡಿ ಬೆಳೆದು ಸಾಲ ವಾಪಸ್ ಕೊಡಲು ಸಾಧ್ಯವಾಗದೆ ಕಂಗಾಲಾಗಿದ್ದಾರೆ. ಮಳೆಯನ್ನು ನಂಬಿ, ಭೂ ಮಾಲಿಕರಿಗೆ ಲಾವಣಿ ಮುಂಗಡ ಕೊಟ್ಟು ಭೂಮಿ ಉಳುಮೆ ಮಾಡಿದ್ದರೂ ಬೀಜ ಬಿತ್ತಲು ಸಾಧ್ಯವಾಗದೆ ತೀವ್ರ ಹಾನಿ ಅನುಭವಿಸಿದ್ದಾರೆ. ಇತ್ತೀಚೆಗೆ ಒಂದೆರಡು ಸಲ ಜೋರಾಗಿ ಮಳೆ ಸುರಿದಿದ್ದರೂ ನೀರು ಇಲ್ಲಿಯ ಕಪ್ಪು ಎರಿ ಭೂಮಿಯೊಳಗೆ ಇಳಿಯದೆ ಹರಿದು ಹೋಗಿರುವುದರಿಂದ ಹಿಂಗಾರಿ ಬೆಳೆ ಕಾಣುವ ರೈತರು ಕನಸುಗಳೂ ನುಚ್ಚುನೂರಾಗಿವೆ.

ಎಲ್ಲಿ ನೋಡಿದರೂ ಕಪ್ಪು ಮಣ್ಣಿನ ಭೂಮಿ ಕಾಣುತ್ತಿರುತ್ತದೆ. ಎಲ್ಲಿಯೂ ಹಸಿರು ಕಾಣುವುದಿಲ್ಲ. ಕುರಿಗಾರರು ತೀವ್ರ ಸಂಕಷ್ಟದಲ್ಲಿದ್ದಾರೆ. ಮುಳ್ಳು ಕಂಟಿಗಳು ಸಹ ಒಣಗಿ ಹೋಗಿವೆ. ಬನ್ನಿ ಮರ, ಬೇವಿನ ಮರ, ಜಾಲಿ ಮರಗಳೆಲ್ಲಾ ಬೋಳಾಗಿವೆ. ಕುರಿಗಳು ಭೂಮಿಯನ್ನು ಕೆದರಿ ಕರಕಿ ಬೇರನ್ನು ಹುಡುಕಿ ತಿನ್ನುವುದನ್ನು ನೋಡಿದರೆ ಅವುಗಳು ಕಪ್ಪು ಮಣ್ಣನ್ನೇ ತಿನ್ನುತ್ತವೆಯೇನೋ ಎಂಬ ಭಾವನೆ ಬರುತ್ತದೆ. ಒಟ್ಟಾರೆಯಾಗಿ ನೀರಾವರಿ ಪ್ರದೇಶ ಜನಗಳು ಮತ್ತು ಜಾನುವಾರುಗಳು ಈ ಸಲದ ಬರದಿಂದ ತತ್ತರಿಸಿದ್ದಾರೆ. ರಾಜ್ಯದಲ್ಲಿ ಸರ್ಕಾರ ಇದ್ದೂ ಸತ್ತಂತಾಗಿದೆ.

– ಎಲ್.ಎಸ್.ನಾಯಕ್

ಡಬ್ಲ್ಯೂಎಫ್‌ಟಿಯು–ಕಾರ್ಮಿಕ ವರ್ಗದ ಜಾಗತಿಕ ಕಾರ್ಯಾಚರಣೆ

3, ಅಕ್ಟೋಬರ್, 2012 ಹಾಸನ. : ಜಾಗತಿಕ ಕಾರ್ಮಿಕ ಸಂಘಗಳ ಒಕ್ಕೂಟ(ಡಬ್ಲ್ಯೂಎಫ್‌ಟಿಯು)ವು ಈ ಕೆಳಕಂಡ ಜಗತ್ತಿನ ದುಡಿಯುವ ಜನರು ಸಾರ್ವತ್ರಿಕವಾಗಿ ಎದುರಿಸುತ್ತಿರುವ ಈ ಕೆಳಕಂಡ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಗಳನ್ನು ಆಗ್ರಹಪಡಿಸಿ ಅಕ್ಟೋಬರ್ 3, 2012 ರಂದು ಅಂತರ್ ರಾಷ್ಟ್ರೀಯ ಕಾರ್ಯಾಚರಣೆ ದಿನವಾಗಿ ಆಚರಿಸಬೇಕೆಂದು ಜಗತ್ತಿನ ಕಾರ್ಮಿಕ ವರ್ಗಕ್ಕೆ ಕರೆ ನೀಡಿತ್ತು.


ಈ ಹಿನ್ನೆಲೆಯಲಿ ಹಾಸನದಲ್ಲಿ ಅಕ್ಟೋಬರ್ 3ರ ಬುಧವಾರ ಮಧ್ಯಾಹ್ನ 3 ಗಂಟೆಗೆ ಹೇಮಾವತಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿ, ಈ ಕೆಳಕಂಡ ಬೇಡಿಕೆಗಳಿಗೆ ಸರ್ಕಾರಗಳನ್ನು ಒತ್ತಾಯಿಸಲಾಯಿತು.

ಬೇಡಿಕೆಗಳು

- ಆಹಾರದ ಹಕ್ಕು ಸಾರ್ವತ್ರಿಕ ಹಕ್ಕಾಗಬೇಕು.
- ಶುದ್ಧ ಕುಡಿಯುವ ನೀರು ಮೂಲಭೂತ ಹಕ್ಕಾಗಬೇಕು.
- ಉಚಿತ, ಸಾರ್ವತ್ರಿಕ ಮತ್ತು ಗುಣಾತ್ಮಕ ಶಿಕ್ಷಣವನ್ನು ಎಲ್ಲರಿಗೂ ಖಾತ್ರಿಗೊಳಿಸಬೇಕು.
- ಸಾಮಾಜಿಕ ಭದ್ರತೆಯಡಿಯಲ್ಲಿ ಎಲ್ಲರಿಗೂ ಉಚಿತ ಔಷಧಿ ಮತ್ತು ಆರೋಗ್ಯ ಚಿಕಿತ್ಸೆ ಲಭ್ಯವಾಗಬೇಕು.
- ವಾಸಕ್ಕೆ ಯೋಗ್ಯವಾದ ಮನೆ ಪ್ರತಿಯೊಬ್ಬ ಕಾರ್ಮಿಕನ ಹಕ್ಕಾಗಬೇಕು.


ಈ ಕಾರ್ಯಾಚರಣೆಯಲ್ಲಿ ಜಗತ್ತಿನೆಲ್ಲೆಡೆ ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ಭಾಗವಹಿಸಿವೆ. ಭಾರತದಲ್ಲೂ ಡಬ್ಲ್ಯೂಎಫ್‌ಟಿಯುಗೆ ಸಂಯೋಜಿತ ಹೊಂದಿದ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಎಐಸಿಸಿಟಿಯು, ಎಐಯುಟಿಯುಸಿ, ಟಿಯುಸಿಸಿ, ಯುಟಿಯುಸಿ, ಬ್ಯಾಂಕ್ ಮತ್ತು ವಿಮೆ, ಬಿಎಸ್‌ಎನ್‌ಎಲ್ ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರೀ ನೌಕರರ ಸಂಘಟನೆಗಳು ಕಾರ್ಮಿಕರನ್ನು ಜಾಗೃತಗೊಳಿಸಿ, ಐಕ್ಯತೆಯಿಂದ ಅಕ್ಟೋಬರ್ 3 ಬುಧವಾರದಂದು ಮೇಲ್ಕಂಡ ಬೇಡಿಕೆಗಳಿಗೆ ಒತ್ತಾಯಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಮೇಲ್ಕಂಡ ಬೇಡಿಕೆಗಳಿಗಾಗಿ ಒತ್ತಾಯಿಸಿ, ದೇಶದ ಎಲ್ಲಾ ರಾಜ್ಯಗಳಲ್ಲಿ, ನಗರ ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಜಂಟಿ ಪ್ರತಿಭಟನೆ ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಹಾಸನದಲ್ಲಿ ಸಿಐಟಿಯು, ಎಐಟಿಯುಸಿ, ಬ್ಯಾಂಕ್ ಮತ್ತು ವಿಮಾ ನೌಕರರ ಸಂಘಟನೆಗಳು, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟಗಳು, ಜಂಟಿಯಾಗಿ ಹೇಮಾವತಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲಾಯಿತು.

ವಿದೇಶಿ ಹೂಡಿಕೆದಾರರನ್ನು ಖುಶಿಪಡಿಸಲು ಮತ್ತಷ್ಟು 'ಸುಧಾರಣೆ'ಗಳ ಕಂತೆ



ವೇದರಾಜ ಎನ್.ಕೆ.

ಕಳೆದ ಶುಕ್ರವಾರ (ಅಕ್ಟೋಬರ್ 5) ಯುಪಿಎ-2 ಸರಕಾರದ ಅತ್ಯಂತ 'ಉತ್ಪಾದಕ' ದಿನ ಎಂದು ಒಂದು ಆರ್ಥಿಕ ಪತ್ರಿಕೆ ಬೆನ್ನು ತಟ್ಟಿದೆ. ಅಂದು ವಿಮಾ ವಲಯದಲ್ಲಿ ಮತ್ತು ಪೆನ್ಶನ್ ನಿಧಿಯಲ್ಲಿ 49ಶೇ. ದ ವರೆಗೆ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗೆ ಅವಕಾಶ ಸೇರಿದಂತೆ ಒಟ್ಟು 23 ನಿರ್ಣಯಗಳನ್ನು ಕೇಂದ್ರ ಸಂಪುಟ ಕೈಗೊಂಡಿದ್ದಕ್ಕೆ ಭಾರತದ ಬಂಡವಾಳಿಗರ ಹತೋಟಿಯ ಮಾಧ್ಯಮಗಳು ಮಾತ್ರವಲ್ಲ, ವಿದೇಶಿ ಮಾಧ್ಯಮಗಳೂ ಶಹಬ್ಬಾಶ್ ಎಂದಿವೆ. ಅದುವರೆಗೆ ಕೇಂದ್ರ ಸಂಪುಟ ಮತ್ತು ಆರ್ಥಿಕ ಹಾಗೂ ಮೂಲರಚನೆ ಸಮಿತಿಗಳು ಸರಾಸರಿ ತಿಂಗಳಿಗೆ 18 ನಿರ್ಣಯಗಳನ್ನು ಮಾತ್ರ ತಗೊಂಡಿದ್ದವಂತೆ. ಅಕ್ಟೋಬರ್ 5 ರಂದು ಒಂದೇ ದಿನದಲ್ಲಿ 23 ನಿರ್ಣಯಗಳನ್ನು, ಅದೂ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಬಹು ದಿನಗಳಿಂದ ಆಗ್ರಹಿಸುತ್ತಿದ್ದ ನಿರ್ಣಯಗಳನ್ನು ಕೈಗೊಂಡದ್ದು ಅವರಲ್ಲಿ ಹರ್ಷ ತಂದಿದೆ. ಅಂತೂ ಕೆಲವು ವಾರಗಳ ಹಿಂದೆ ಪಾಶ್ಚಿಮಾತ್ಯ ಪತ್ರಿಕೆ 'ಟೈಮ್'ನಿಂದ 'ಅರೆ ಸಾಧಕ' (ಅಂಡರ್ ಅಚೀವರ್)ಎಂದು ಬಿರುದು ಪಡೆದು ಖಿನ್ನ ಮನಸ್ಕರಾಗಿದ್ದ ನಮ್ಮ ಪ್ರಧಾನಿಗಳು ಈ ಶಹಬ್ಬಾಸ್‌ಗಿರಿಗಳಿಂದ ಉಲ್ಲಸಿತರಾಗಿರಬಹುದು.



ಕಳೆದ ವಾರ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಕೈಗಾರಿಕಾ ಮಂತ್ರಿಗಳು ಹೇಳಿದರೆ, ಡೀಸೆಲ್ ದರ ಏರಿಕೆ ಮಧ್ಯಮ ವರ್ಗಗಳನ್ನು ಮಾತ್ರ ತಟ್ಟುತ್ತದೆ ಎಂದ ಪ್ರಧಾನ ಮಂತ್ರಿಗಳು ಅಷ್ಟಕ್ಕೇ ನಿಲ್ಲದೆ 'ಹಣವೇನು ಮರಗಳಲ್ಲಿ ಬೆಳೆಯುವುದಿಲ್ಲ' ಎಂದು ನುಡಿಮುತ್ತು ಉದುರಿಸಿದ್ದರು. ಆದರೆ ವಾಸ್ತವವಾಗಿ ಈ ಎಲ್ಲ ಕ್ರಮಗಳು ಭಾರತದ 'ಸಾಲ ಅರ್ಹತೆ'ಯನ್ನು ಹೆಚ್ಚಿಸುವುದಕ್ಕಾಗಿ ಮತ್ತು ಅಂತರ್ರಾಷ್ಟ್ರೀಯ ಹೂಡಿಕೆದಾರರ 'ವಿಶ್ವಾಸ' ಗಳಿಸಲಿಕ್ಕಾಗಿ ಎಂದು ಕೇಂದ್ರ ಮಂತ್ರಿಯೊಬ್ಬರು ಯಾವುದೇ ನಾಚಿಕೆಯಿಲ್ಲದೆ ಒಪ್ಪಿಕೊಂಡಿದ್ದಾರಂತೆ. ಅವರ ವಿಶ್ವಾಸ ಗಿಟ್ಟಿಸಿದರೆ, ಭಾರತಕ್ಕೆ ವಿದೇಶಿ ಹೂಡಿಕೆಗಳು ಹರಿದು ಬರುತ್ತವೆ, ಕೆಳಗಿಳಿಯುತ್ತಿರುವ ರೂಪಾಯಿ ಮೌಲ್ಯ ಮೇಲೇರುತ್ತದೆ ಎಂಬುದು ಈ ಸರಕಾರದ ನಿರೀಕ್ಷೆ.

ನಿಜ, ಕಳೆದ ವಾರದಂತೆ, ಹಾದಿ-ಬೀದಿಗಳಲ್ಲಿ ಜನಸಾಮಾನ್ಯರೆಲ್ಲ ಡೀಸೆಲ್ ಬೆಲೆಯೇರಿಕೆ ಮತ್ತು ಮನೆಗಳಲ್ಲಿ ಗೃಹಿಣಿಯರೆಲ್ಲ ಅಡುಗೆ ಅನಿಲ ಸಿಲಿಂಡರುಗಳ ಮಿತಿಯ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾಗಲೇ ಶೇರು ಮಾರುಕಟ್ಟೆಯಲ್ಲಿ ತೇಜಿ ಬಂದು ರೂಪಾಯಿಯ ಮೌಲ್ಯವೂ ಏರಿದಂತೆ ಈ ವಾರವೂ ಈ 23 ನಿರ್ಣಯಗಳ ದಾಖಲೆ ನಿರ್ಮಿಸಿದ ದಿನ ಶೇರು ಸೂಚ್ಯಂಕಗಳು ಏರಿದವು, ರೂಪಾಯಿ ಮೌಲ್ಯ ಏರಿತು. ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್‌ರವರು ಹೇಳಿದಂತೆ 'ಜನತೆಗೆ ಏಟು ಕೊಟ್ಟಾಗ ಬಂಡವಾಳಕ್ಕೆ ಆನಂದವಾಗುತ್ತದೆ' ಎಂಬುದು ಇನ್ನೊಮ್ಮೆ ಸಾಬೀತಾಯಿತು. ಆದರೆ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಈ ತೇಜಿಯೂ ಮಾಯವಾಗಿದೆ, ರೂಪಾಯಿ ಮೌಲ್ಯ ಮತ್ತೆ ಕೆಳಮುಖವಾಗಿದೆ.

ವಿಮಾವಲಯದಲ್ಲಿ ಎಫ್‌ಡಿಐ ಮಿತಿಯನ್ನು ಈಗಿರುವ 26ಶೇ. ದಿಂದ 49ಶೇ.ಕ್ಕೆ ಏರಿಸುವುದು ಯುಪಿಎ-2 ಹಣಕಾಸು ಮಂತ್ರಿಗಳ ಬಹುವರ್ಷಗಳ ಕನಸು. ಎಡಪಕ್ಷಗಳ ಬೆಂಬಲದ ಮೇಲೆ ಅವಲಂಬಿಸಿದ್ದ ಯುಪಿಎ-1 ಸರಕಾರದಲ್ಲಿ ಅವರಿಗೆ ಇದನ್ನು ಮಾಡಲಾಗಿರಲಿಲ್ಲ. ನಂತರ ಸಂಸದೀಯ ಸಮಿತಿಯೂ ಇದು ಸಲ್ಲದು ಎಂಬ ಶಿಫಾರಸನ್ನು ಮಾಡಿತು. ಆದರೆ ಈಗ ಈ ನಿರ್ಣಯದಿಂದ ನಮ್ಮ ಹಣಕಾಸು ಮಂತ್ರಿಗಳು ಧನ್ಯರಾಗಿದ್ದಾರೆ. ಜತೆಗೆ ಪೆನ್ಶನ್ ನಿಧಿ ಶೇರು ಮಾರುಕಟ್ಟೆಯತ್ತ ಹರಿಯುವಂತೆ ಮಾಡುವ ತಮ್ಮ ಕನಸು ನನಸಾಗುವ ವಿಶ್ವಾಸ ಅವರಿಗಿದೆ.

ರೈತರು ಆತ್ಮಹತ್ಯೆ ಮಾಡಿಕೊಂಡರೇನಂತೆ, ಕೃಷಿ ಉತ್ಪಾದನೆಯ ಸೂಚ್ಯಂಕ ಇಳಿದು, ಆಹಾರ ಬೆಲೆಸೂಚ್ಯಂಕ ಏರುತ್ತಿದ್ದರೇನಂತೆ, ವಿದೇಶಿ ಹೂಡಿಕೆದಾರರ 'ವಿಶ್ವಾಸ'ವೇ ಮುಖ್ಯವಾಗಿರುವುದರಿಂದ ಒಂದು ವಾಯಿದಾ ಮಾರುಕಟ್ಟೆ ಆಯೋಗವನ್ನು ರಚಿಸಲೂ ನಿರ್ಧರಿಸಲಾಗಿದೆ. 'ಬರಿಹೊಟ್ಟೆಯ ಜನಗಳ ಬದುಕನ್ನು ಸಟ್ಟಾಕೋರರಿಗೆ ವಹಿಸಿಕೊಟ್ಟ ಮೇಲೆ, ಈಗ ಸರಕಾರದ ಹತೋಟಿಯಿಂದ ಮುಕ್ತವಾದ ಮಾರುಕಟ್ಟೆಗಳ ಪ್ರಾಬಲ್ಯಕ್ಕೆ ಪಕ್ಕಾಗುವ ಒಂದು ಸ್ವಾಯತ್ತ ಸಂಘಟನೆಯನ್ನು ಸೃಷ್ಟಿಸಿ ಅದನ್ನು ಮತ್ತಷ್ಟು ಬಲಪಡಿಸಲಾಗಿದೆ. ಇವು ವಿದೇಶಿ ಹೂಡಿಕೆದಾರರ ಹಿತಸಾಧಿಸಲು ರಾಷ್ಟ್ರೀಯ ಆರ್ಥಿಕವನ್ನು ಮತ್ತು ಜನಗಳು ಬದುಕನ್ನು ಬಲಿಗೊಡಲೂ ಹೇಸದ ಭಂಡ ರಾಷ್ಟ್ರ-ವಿರೋಧಿ ಕ್ರಮಗಳು' ಎಂದು ಸಿಐಟಿಯು ಬಲವಾಗಿ ಖಂಡಿಸಿದೆ.

ಈ ಎಲ್ಲ ಕ್ರಮಗಳಿಗೆ ಲೋಕಸಭೆಯಲ್ಲಿ ಬಹುಮತ

ಪುಟ 15 ಕ್ಕೆ

ಅನಾರೋಗ್ಯ ಪ್ರತಿ ವರ್ಷ 3.9 ಕೋಟಿ ಮಂದಿಗೆ ಬಡತನ ಹೇರುತ್ತಿದೆ

ಎಂದಿದ್ದಾರೆ ಯುಪಿಎ-2 ಆರೋಗ್ಯ ಮಂತ್ರಿಗಳು. ಪ್ರತಿ ವರ್ಷ 3.9 ಕೋಟಿ ಭಾರತೀಯರನ್ನು ಅನಾರೋಗ್ಯ ಬಡತನಕ್ಕೆ ತಳ್ಳುತ್ತಿದೆ, ಗ್ರಾಮೀಣ ಭಾರತದಲ್ಲಿ 30.ಶೇಕಡಾ ಮಂದಿ ಹಣಕಾಸು ತೊಂದರೆಗಳಿಂದಾಗಿ ಯಾವುದೇ ಚಿಕಿತ್ಸೆಗೆ ಹೋಗುತ್ತಿಲ್ಲ. ಇದು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಹೆಚ್‌ಒ)ಯ ಒಂದು ವರದಿಯಲ್ಲಿರುವ ಅಂಶ. ಆದರೆ ಈ ಮಾಹಿತಿಯನ್ನು ನೀಡಿರುವವರು ಸ್ವತಃ ಯುಪಿಎ-2 ಸರಕಾರದ ಈ ಆರೋಗ್ಯ ಮಂತ್ರಿಗಳು. ಅದನ್ನು ಹೇಳಿದ್ದು ನವದೆಹಲಿಯಲ್ಲಿ ಅಥವ ದೇಶದ ಬೇರೆ ಯಾವುದೇ ಸ್ಥಳದಲ್ಲಿ ಅಲ್ಲ, ಆರ್ಥಿಕ 'ಸುಧಾರಣೆ'ಗಳ ಎರಡನೇ ಕಂತುಗಳ ನಂತರ ಭಾರತ ಸರಕಾರ ಪತ್ರಿಕೆಗಳಲ್ಲಿ ಹೊರಡಿಸುತ್ತಿರುವ 'ಆಮ್ ಆದ್ಮಿ'ಯ ಬಗ್ಗೆ ತನ್ನ ಕಳಕಳಿ, ಸಾಧನೆಗಳ ಜಾಹೀರಾತುಗಳಲ್ಲಂತೂ ಅಲ್ಲವೇ ಅಲ್ಲ, ಬದಲಾಗಿ ಯುರೋಪಿನ ಆಮ್‌ಸ್ಟರ್‌ಡ್ಯಾಂನಲ್ಲಿ, ಯಾವುದೋ ವಿಚಾರ ಸಂಕಿರಣ ಅಥವ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಎಂದು ನೀವು ಸುಲಭವಾಗಿ ಊಹಿಸಿಕೊಳ್ಳಬಹುದು. ಹೌದು, 'ಔಷಧಿಗಳ ಜವಾಬ್ದಾರಿಯುತ ಬಳಕೆ'ಯ ಮೇಲೆ ಏರ್ಪಡಿಸಿರುವ ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ. ಇದಕ್ಕೆ ಮೊದಲು ಅವರೇ, ಅದೇ ವರದಿಯಿಂದ, ಭಾರತದಲ್ಲಿ ಒಟ್ಟು ಆರೋಗ್ಯ ಖರ್ಚುಗಳಲ್ಲಿ 60ಶೇ.ವನ್ನು ಜನಸಾಮಾನ್ಯರು ಅಂದರೆ ಯುಪಿಎ ಯ 'ಆಮ್ ಆದ್ಮಿ' ಸ್ವಂತ ಜೇಬಿನಿಂದ ಮಾಡುತ್ತಾರೆ, ಗ್ರಾಮೀಣ ಭಾರತದಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು 47ಶೇ. ಮಂದಿ ಸಾಲಸೋಲ ಮಾಡುತ್ತಾರೆ, ಅಥವ ತಮ್ಮ ಆಸ್ತಿಗಳನ್ನು ಮಾರಬೇಕಾಗುತ್ತದೆ, ನಗರ ಪ್ರದೇಶಗಳಲ್ಲಿ ಈ ಪ್ರಮಾಣ 31ಶೇ. ಎಂದು ಹೇಳಿದ್ದರು, ಹೆಮ್ಮೆಯಿಂದಲೋ, ಅಥವ ಬೇಸರದಿಂದಲೋ ಗೊತ್ತಿಲ್ಲ.

ಏಕೆಂದರೆ, ಔಷಧಿ ಬೆಲೆಗಳು ಯಾವ ಮಟ್ಟದಲ್ಲಿವೆಯೆಂದರೆ ಜನಸಾಮಾನ್ಯರಿಗೆ ಇರುವ ಆಯ್ಕೆಯೆಂದರೆ ಕಾಯಿಲೆಯಿಂದ ಸಾಯುವುದು ಅಥವ ತನ್ನ ಮನೆಮಾರುಗಳನ್ನು ಮಾರಿ ಔಷಧಿಗೆ ಸುರಿದು ಬದುಕುವುದು ಎಂದು ಸುಪ್ರಿಂ ಕೋರ್ಟ್ ಟಿಪ್ಪಣಿ ಮಾಡಿದೆ, ಒಂಭತ್ತು ವರ್ಷವಾದರೂ ಏಕೆ ಏನೂ ಆಗಿಲ್ಲ, ಸರಕಾರ ನ್ಯಾಯಾಲಯ ಮಧ್ಯಪ್ರವೇಶಿಸಿದಾಗ ಮಾತ್ರ ಚಲನೆ ತೋರುತ್ತದೆ ಏಕೆ ಎಂದೂ ಅದು ಟಿಪ್ಪಣಿ ಮಾಡಿದೆ ಎಂಬ ಸುದ್ದಿಯನ್ನು ಕಳೆದ ವಾರ ಈ ಅಂಕಣದಲ್ಲಿ ಗಮನಿಸಿದ್ದೀರಿ. ಇದಕ್ಕೆ ಪ್ರತಿಯಾಗಿ ಯುಪಿಎ-2 ಸರಕಾರ ಔಷಧಿ ಉದ್ದಿಮೆಯ ಮಹಾಕುಳಗಳಿಗೆ ಅನುಕೂಲವಾದ ಔಷಧಿ ಬೆಲೆ ನೀತಿಯನ್ನು ತರುವ ಹುನ್ನಾರ ನಡೆಸಿದೆ ಎಂಬುದನ್ನೂ ಓದಿದ್ದಿರಿ. ಆದರೆ ಅದೇ ಸರಕಾರದ ಆರೋಗ್ಯ ಮಂತ್ರಿಗಳು ಆಮ್‌ಸ್ಟರ್‌ಡ್ಯಾಂನಲ್ಲಿ ಹೇಳುತ್ತಾರೆ- ಪೇಟೆಂಟ್ ವ್ಯವಸ್ಥೆ(ಅದೂ ನವ-ಉದಾರೀಕರಣದ ಭಾಗವಾಗಿ ನಮ್ಮ ಆಳರಸರೇ ಬದಲಿಸ ಕೊಂಡದ್ದು) ಔಷಧಿಗಳನ್ನು ಪಡೆಯುವಲ್ಲಿ ಒಂದು ದೊಡ್ಡ ಅಡ್ಡಿಯಾಗಿದೆ ಎಂದು- ಅದೇ ಡಬ್ಲ್ಯುಹೆಚ್‌ಒ ವರದಿಯನ್ನು ಉದ್ಧರಿಸುತ್ತಾ!

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಮತ್ತೊಂದು ಅಂಕಿ-ಅಂಶ ಪ್ರಕಟವಾಗಿದೆ. ಈಗಲೂ ಜಗತ್ತಿನ ಅತಿ ಹೆಚ್ಚು ಅಪೌಷ್ಟಿಕತೆ ಪೀಡಿತರು ಇರುವುದು ಭಾರತದಲ್ಲಿ ಎಂದು ವಿಶ್ವ ಆರೋಗ್ಯ ಸಂಘಟನೆ(ಎಫ್‌ಎಒ)ಯ ವರದಿ ಹೇಳುತ್ತದೆ. ಒಟ್ಟು ಸುಮಾರು 21.7 ಕೋಟಿ ಮಂದಿ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಜಗತ್ತಿನ ಜನಸಂಖ್ಯೆಯಲ್ಲಿ ಅಪೌಷ್ಟಿಕತೆ ಪೀಡಿತರ ಪ್ರಮಾಣ 12.5ಶೇ. ಇದ್ದರೆ, ಭಾರತದಲ್ಲಿ ಇದು 17.5ಶೇ. 2015ರ ವೇಳೆಗೆ ಮುಟ್ಟಬೇಕಾದ 'ಸಹಸ್ರಮಾನದ ಅಭಿವೃದ್ಧಿ ಗುರಿ' ಮುಟ್ಟುವಲ್ಲಿ ವಿಫಲರಾಗಬಹುದಾದ ದೇಶಗಳ ಪಟ್ಟಿಯಲ್ಲಿ ಭಾರತದ ಹೆಸರು ಕಾಂಗೋ, ನಮೀಬಿಯಾ ಮುಂತಾದ ದೇಶಗಳ ಜತೆಗೆ ಇದೆ.

ಏನು ಮಾಡುವುದು, 'ಹಣ್ಣ ಮರಗಳಲ್ಲಿ ಬೆಳೆಯುವುದಿಲ್ಲವಲ್ಲ', ಅತ್ತ ಅದಕ್ಕಾಗಿ ವಿದೇಶಿ ಹೂಡಿಕೆದಾರರನ್ನು ಖುಶಿಪಡಿಸುವುದಕ್ಕೆ ಎಡಪಂಥೀಯರು ಮಾತ್ರವಲ್ಲ, ಇತರ ಪ್ರತಿಪಕ್ಷಗಳೂ ಈಗ ಬಿಡುವುದಿಲ್ಲವಲ್ಲ, ಎಂಬ ಹೊಸ ಮಂತ್ರವನ್ನು ಪಠಿಸಬಹುದು.

ಬಸ್ ಪ್ರಯಾಣ ದರ ಹೆಚ್ಚಿಸಿರುವುದನ್ನು ವಿರೋಧಿಸಿ ರಸ್ತೆ ತಡೆ



ಸಿಪಿಐ(ಎಂ) ತಾಲ್ಲೂಕ ಸಮಿತಿ ಸಿಂಧನೂರು ಕರ್ನಾಟಕ ಸರ್ಕಾರದ ಸಾರಿಗೆ ಸಚಿವಾಲಯ ಬಸ್ ಪ್ರಯಾಣ ದರ ಹೆಚ್ಚಿಸಿರುವುದನ್ನು ವಿರೋಧಿಸಿ ಸಿಂಧನೂರನಲ್ಲಿ ಅ. 3 ರಂದು ದಡೆಸೂರ ಮುಂದೆ ರಸ್ತೆ ತಡೆ ಮಾಡಿತು.

ಈ ಸಂದಂಭದಲ್ಲಿ ತಾಲ್ಲೂಕ ಸಮಿತಿಯ ಕಾರ್ಯದರ್ಶಿಯಾದ ನರಸಿಂಹಪ್ಪ ನವರು ಮಾತನಾಡಿ ಕರ್ನಾಟಕ ರಾಜ್ಯದಲ್ಲಿ ನೆರೆಹಾವಳಿ ಮತ್ತು ಬರ ಈ ಎರಡು ಅವಳಿ ದಾಳಿಗಳಿಂದ ಜನರು ಕಂಗಾಲಾಗಿದ್ದಾರೆ. ಇಂತಹ ಸಂದಂರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಲೆ ಏರಿಕೆ ಕ್ರಮದಿಂದಾಗಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ನೆರೆಹಾವಳಿಯಲ್ಲಿ ಕೊಚ್ಚಿಹೋಗಿ ಮನೆ ಮಠ ಕಳೆದುಕೊಂಡ ಜನತೆ ಇನ್ನೂ ಚೇತರಿಸಿಕೊಂಡಿಲ್ಲ. ಅದರ ಬೆನ್ನಲ್ಲೇ ಬಂದ 'ಬರ'ದ ಬಿಸಿ ಜನರನ್ನು ಕೆಂಡದಂತೆ ಸುಡುತ್ತಿದೆ. ಈ ಯಾವುದನ್ನೂ ಲೆಕ್ಕಿಸದ ಸರ್ಕಾರಗಳ ಧೋರಣೆಯನ್ನು ವಿರೋಧಿಸಿ ಇಂತಹ ಜನ ವಿರೋಧಿ ಸರ್ಕಾರಗಳ ವಿರೋಧ ಹೋರಾಡಬೇಕಾಗಿದೆ.

ಬೆಲೆಗೆ ತಕ್ಕಂತೆ ಕೂಲಿಯನ್ನು ಮಾತ್ರ ಏರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುತಾರಾಂ ಒಪ್ಪದೇ ಕಡಿಮೆ ಕೂಲಿಯಲ್ಲಿ ಹೆಚ್ಚಿನ ಸಮಯ ದುಡಿಸಿಕೊಳ್ಳಲು ಉದ್ಯಮಪತಿಗಳಿಗೆ ಅನುವು ಮಾಡಿಕೊಡುವುದಲ್ಲದೆ ಸರ್ಕಾರದ ಒಡೆತನದ ಉದ್ದಿಮೆಗಳಲ್ಲಿ ಮತ್ತು ಸೇವಾ ವಲಯಗಳಲ್ಲಿಯೂ ಕೂಡಾ ಕಡಿಮೆ ಕೂಲಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ದುಡಿಸಿಕೊಳ್ಳುತ್ತಿವೆ. ಇದರ ನಡುವೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೈಪೋಟಿಗೆ ಬಿದ್ದು ಬೆಲೆಗಳನ್ನು ಏರಿಸುತ್ತಿವೆ. ರಾಜ್ಯ ಸರ್ಕಾರ ಬಸ್ ಪ್ರಯಾಣ ದರ ಏಕಾಏಕಿ ಶೇ.12 ರಷ್ಟು ಏರಿಸಿರುವುದು ಖಂಡನೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕಿನ ನೂರಾರು ಜನ ಈ ರಸ್ತೆ ತಡೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ ಮನವಿ ಸ್ವೀಕರಿಸಿದರು. ಕಾರ್ಯಕ್ರಮದ ನೇತೃತ್ವವನ್ನು ಯಂಕಪ್ಪ, ದೊಡ ಹುಸೇನ್‌ಬಾಷಾ, ಈರಪ್ಪ ನಾಯರ್, ಪಾರ್ವತೆಮ್ಮ, ಹೊನೆರಮ್ಮ ವಹಿಸಿದ್ದರು.

ಬೆಂಗಳೂರು: ಪೀಣ್ಯ 2 ನೇ ಹಂತದಲ್ಲಿ ಪ್ರತಿಭಟನೆ

ಪೀಣ್ಯ 2 ನೇ ಹಂತದಲ್ಲಿ ಸಿಪಿಐ(ಎಂ) ಪಕ್ಷದ ಶಾಖೆ ಮತ್ತು ಡಿವೈಎಫ್‌ಐ ಜಂಟಿ ನೇತ್ರತ್ವದಲ್ಲಿ ಬೆಂಗಳೂರಿನ ಪೀಣ್ಯ ಬಸ್ ನಿಲ್ದಾಣದ ಬಳಿ, ಬಸ್ ದರ ಹೆಚ್ಚಳ ವಿರೋಧಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಸಿಪಿಐ(ಎಂ)ಪಕ್ಷದ ಉತ್ತರ ವಲಯ ಸಮಿತಿ ಸದಸ್ಯರಾದ ಕಾ. ಟಿ.ಎಂ. ರಾಮಕೃಷ್ಣರವರು ಮಾತನಾಡುತ್ತ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಜನತೆಯು ಸಂಘಟಿತರಾಗುವ ಮೂಲಕ ತಮ್ಮ ಮೇಲಾಗುವ ಶೋಷಣೆಯಿಂದ ವಿಮುಕ್ತಿ ಹೊಂದುವಂತಾಗಬೇಕೆಂದು ಕರೆ ನೀಡಿದರು.

ಡಿವೈಎಫ್‌ಐ ಉತ್ತರ ಜಿಲ್ಲಾ ಸಮಿತಿ ಸಂಚಾಲಕರಾದ ಕಾ. ಪ್ರಸಾದ್ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಭ್ರಷ್ಟಾಚಾರದಲ್ಲಿ ಮುಳುಗಿ, ಅಧಿಕಾರದ ಆಸೆಗಾಗಿ ಒಂದನ್ನೊಂದು ದೂರುತ್ತಾ ಜನರಿಗೆ ನಿರಂತರವಾಗಿ ವಂಚಿಸುತ್ತಿವೆ. ಮುಖ್ಯವಾಗಿ ಇಂದು ಯುವ ಜನತೆ ನಿರುದ್ಯೋಗ ಸಮಸ್ಯೆಯಿಂದ ಸಾಕಷ್ಟು ಬಳಲುತ್ತಿದೆ. ಆದರೆ ಸರ್ಕಾರಗಳು ದುಡಿಯುವ ಕೈಗಳಿಗೆ ಸರಿಯಾಗಿ ಕೆಲಸ ನೀಡದೆ ಕೇವಲ ಬಂಡವಾಳಿಗರಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಿ ಅವರ ಖಜಾನೆ ತುಂಬಿಸಲು ಸಹಾಯ ಮಾಡುತ್ತಿವೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ನರಸಿಂಹಯ್ಯ, ಪಿ.ಸಿ.ನರಸಿಂಹಮೂರ್ತಿ, ಮಹಿಳಾ ಮುಖಂಡರಾದ ರೇಣುಕಾ ಹಾಗೂ 100 ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು.

– ಐ.ಎಂ.ಕರಿಯಪ್ಪ



ಕಾನೂನು ಜಾರಿ–ಪಿ.ಎಫ್ ಬಾಕಿ ಜಮಾ–ಖಾಯಂಯಾತಿ ಒತ್ತಾಯ - ಗುತ್ತಿಗೆ ಪೌರ ಕಾರ್ಮಿಕರದಿಂದ ಧರಣಿ

ಕಾರ್ಮಿಕ ಕಾನೂನು ಅನ್ವಯ ಕಾರ್ಮಿಕರಿಗೆ ನೀಡಬೇಕಾದ ಗುರುತಿನ ಚೀಟಿ, ಇ.ಎಸ್.ಐ–ಪಿಎಫ್ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ಕೂಲಿ ಹಾಗೂ ಕಾರ್ಮಿಕರ ಸಂಬಳದಲ್ಲಿ ಕಟಾಯಿಸಲಾದ ಪಿ.ಎಫ್. ಬಾಬ್ತು ಹಣ–ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಗೆ ಜಮಾ ಮಾಡದೆ ಇರುವವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಬಾಕಿ ಸಮೇತ ಪಿ.ಎಫ್.ಹಣ ಕಾರ್ಮಿಕರ ಖಾತೆಗಳಿಗೆ ಜಮಾ ಮಾಡಿಸಬೇಕೆಂದು ಒತ್ತಾಯಿಸಿ ಹಾಗೂ ನಗರಸಭೆಯಲ್ಲಿ ಹಾಲಿ ಖಾಲಿ ಇರುವ 195ಕ್ಕೂ ಹೆಚ್ಚು ಪೌರಕಾರ್ಮಿಕರ ಹುದ್ದೆಗಳನ್ನು ಹಲವು ವರ್ಷಗಳಿಂದ ದುಡಿಯುತ್ತಿದ್ದವರಿಗೆ ಸೇವಾ ಹಿರಿತನದ ಮೇಲೆ ಖಾಯಂಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘದ ಕರೆ ಮೇಲೆ ತುಮಕೂರು ಜಿಲ್ಲಾ ಪೌರಕಾರ್ಮಿಕರ ಸಂಘ [ರಿ] ನೇತೃತ್ವದಲ್ಲಿ ನೂರಾರು ಕಾರ್ಮಿಕರು ತುಮಕೂರು ನಗರಸಭೆ ಮುಂದೆ ದಿ:4–10–2012 ರಂದು ಧರಣಿ ನಡೆಸಿ ಪ್ರತಿಭಟನೆ ನಡೆಸಿತು.

ಪ್ರತಿಭಟನಾಕಾರರು ಸಮಸ್ಯೆಗಳ ಪರಿಹಾರಕ್ಕಾಗಿ ಹಲವು ಮನವಿ ಪತ್ರಗಳನ್ನು ನೀಡಿದ್ದರೂ ನಗರಸಭೆ ಯಾವುದೇ ಸಭೆ ಕರೆಯದೆ ತಮ್ಮ ವ್ಯಾಪ್ತಿಯಲ್ಲಿನ ಸಮಸ್ಯೆಗಳನ್ನು ಬಗೆಹರಿಸದೆ ಇರುವ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಬಾರದ ಆಯುಕ್ತರು ಸಿಟ್ಟಿಗೆದ್ದ ಪ್ರತಿಭಟನಾಕಾರರು

ಕಛೇರಿಯಲ್ಲಿ ಇದ್ದರೂ ಮನವಿ ಸ್ವೀಕರಿಸಲು ತಾವು ಬರುವುದಿಲ್ಲ ಎಂಬ ನಗರಸಭೆ ಆಯುಕ್ತರ ಧೋರಣೆಗೆ ಸಿಟ್ಟಿಗೆದ್ದು ಪ್ರತಿಭಟನಾಕಾರರು ದಲಿತರನ್ನು ತಾರತಮ್ಯದಿಂದ ಕಾಣಲಾಗುತ್ತಿದೆ. ಮನವಿ ಸ್ವೀಕರಿಸದ ಅಧಿಕಾರಿಗಳಿಗೆ ಧಿಕ್ಕಾರ ಎಂಬ ಘೋಷಣೆಗಳನ್ನು ಮೊಳಗಿಸಿದರು. ಇದಕ್ಕೆ ಪ್ರತಿಯಾಗಿ ಆಯುಕ್ತರು ಪೋಲೀಸರನ್ನು ಕರೆಯಿಸಿ ಎಲ್ಲರನ್ನು ಆರೆಸ್ಟ್ ಮಾಡಿಸುವುದಾಗಿ ಪ್ರತಿಭಟನಾಕಾರರನ್ನು ಬೆದರಿಸಿದರು. ಸಮಸ್ಯೆ ಬಗ್ಗೆ ಗಮನ ಹರಿಸದೆ ಬೆದರಿಸುವ ಕ್ರಮ ಪ್ರಜಾ ಪ್ರಭುತ್ವ ಹಾಗೂ ಸಂವಿಧಾನ ವಿರೋಧಿ ಎಂದು ಪ್ರತಿಭಟನಾಕಾರರು ಖಂಡಿಸಿದರು.

ಜಂಟಿ ಸಭೆ ಪತ್ರ–ಹೋರಾಟ ಹಿಂಪಡೆದ ಪೌರಕಾರ್ಮಿಕರು.

ಈ ಮಧ್ಯೆ ಪೋಲೀಸರು ಮಧ್ಯ ಪ್ರವೇಶದಿಂದಾಗಿ ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಲು ದಿನಾಂಕ 6–10–2012ರ ಬೆಳಿಗ್ಗೆ 11–00 ಗಂಟೆಗೆ ಸಭೆ ಕರೆದಿರುವುದಾಗಿ ನಗರಸಭೆಯ ಅಧಿಕಾರಿಗಳು ಲಿಖಿತ ಪತ್ರ ನೀಡಿದ ನಂತರ ಧರಣಿ ನಿರತರು ಧರಣಿಯನ್ನು ಹಿಂದಕ್ಕೆ ಪಡೆದರು.

ಈ ಪ್ರತಿಭಟನಾ ಧರಣಿಯಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯ, ಖಜಾಂಚಿ. ಕೆ.ಮಂಜುನಾಥ್. ಸಂಘಟನಾ ಕಾರ್ಯದರ್ಶಿ ದೇವರಾಜು, ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ಸೈಯದ್ ಅಲ್ತಾಫ್ ಮಾತನಾಡಿದರು. ಸಹಕಾರ್ಯದರ್ಶಿ ನರಸಿಂಹಮೂರ್ತಿ, ನರಸಿಂಹರಾಜು, ರಾಜ್ಯ ಸಂಘದ ಉಪಾಧ್ಯಕ್ಷರಾದ ಎಸ್.ಹೆಚ್. ಚಂದ್ರಪ್ಪ, ರಾಜ್ಯ ಖಜಾಂಚಿ ಸಿ.ವೆಂಕಟೇಶ್ ನೇತೃತ್ವ ವಹಿಸಿದ್ದರು.

– ರವಿ

ಯುಪಿಎ ದರ್ಬಾರ್ ......

ಪುಟ 13 ರಿಂದ

ಇಲ್ಲದಿದ್ದರೇನಂತೆ, ಅದನ್ನೂ ಹೇಗಾದರೂ ಗಿಟ್ಟಿಸುವ ವಿಶ್ವಾಸ ಅವರಿಗಿದೆಯಂತೆ. ಸಂಸತ್ತಿನ ಚಳಿಗಾಲದ ಅಧಿವೇಶನದ ವೊದಲು ಪ್ರತಿಪಕ್ಷಗಳ, ಮುಖ್ಯವಾಗಿ ಬಿಜೆಪಿಯ ಬೆಂಬಲ ಗಳಿಸುವ ವಿಶ್ವಾಸವನ್ನು ಅವರು ವ್ಯಕ್ತ ಪಡಿಸಿದ್ದಾರೆ. ಹಿಂದೆ ನರಸಿಂಹರಾವ್ ಸರಕಾರ ಹಾಕಿಕೊಟ್ಟ ಮಾರ್ಗ ವಂತೂ ಇದ್ದೇಇದೆ. ಈ ಕಾರಣಕ್ಕಾಗಿಯೇ ಪ್ರೊ. ಪಟ್ನಾಯಕ್ ಇವು ಭಾರತದ ಪ್ರಜಾಪ್ರಭುತ್ವದ ವಿರುದ್ಧ ಯುಪಿಎ-2 ಸರಕಾರ ಮಾಡಿರುವ ಕ್ಷಿಪ್ರಕ್ರಾಂತಿ ಎಂದು ವರ್ಣಿಸಿದ್ದಾರೆ. ಡೀಸೆಲ್ ಬೆಲೆ ಏರಿಕೆ, ಅಡುಗೆ ಅನಿಲ ಸಿಲಿಂಡರ್‌ಗಳ ಮೇಲೆ ಮಿತಿ ಹಾಕಿದ್ದು ಸಾಕಾಗಿಲ್ಲ ಎಂದು ಅವುಗಳ ಬೆಲೆಗಳಲ್ಲೂ 10ರೂ.ಗೂ ಮೀರಿದ ಏರಿಕೆ, ಭಾರತದ ವಿಮಾವಲಯ, ಪೆನ್ಶನ್ ನಿಧಿಗಳನ್ನು ಲೂಟಿ ಹೊಡೆಯಲು ಅವಕಾಶ- ಇವೆಲ್ಲ ಜಾಗತೀಕರಣ ಗೊಂಡ ಹಣಕಾಸು ಬಂಡವಾಳಿಗರನ್ನು ಸಂತುಷ್ಟರಾಗಿಸಲು, ಅವರನ್ನು ತೃಪ್ತಿಪಡಿಸಲು ಅನಿವಾರ್ಯ ಎನ್ನುವ ಪ್ರಭುತ್ವ ಈ ಮೂಲಕ ಪ್ರಜಾಪ್ರಭುತ್ವಕ್ಕೇ ತಿಲಾಂಜಲಿ ಕೊಡುತ್ತಿದೆ. 'ಜಾಗತೀಕರಣದ ಯುಗ'ದಲ್ಲಿ ಈ ರೀತಿ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವುದನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಭಾವಿಸುವ ಸರಕಾರ ಆಮೂಲಕ ಯಾವ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುವ ಪ್ರತಿಜ್ಞೆಯನ್ನು ಅದು ಸ್ವೀಕರಿಸಿದೆಯೋ ಆ ಸಂವಿಧಾನವನ್ನೇ ತಿರಸ್ಕರಿಸಿದಂತೆ. ಅಂತಹ ಸರ್ಕಾರ ಅಧಿಕಾರದಲ್ಲಿ ಮುಂದುವರೆಯಬಾರದು ಎಂದು ಪ್ರೊ. ಪಟ್ನಾಯಕ್ ತೀವ್ರವಾಗಿ ಟೀಕಿಸಿದ್ದಾರೆ.

★

ಹಣ ಮರಗಳಲ್ಲಿ ಬೆಳೆಯುವುದಿಲ್ಲ ಎಂಬ 'ಸತ್ಯ'ವನ್ನು ಅರಿಯದ ಯುಪಿಎ-2 ಮಂತ್ರಿಗಳ ಪೇಚಾಟವೋ ಅಥವಾ ....

ಯುಪಿಎ-2 ಸರಕಾರದ ಆರ್ಥಿಕ ವ್ಯವಹಾರಗಳ ಇಲಾಖೆ ಒಂದು 'ರಾಷ್ಟ್ರೀಯ ಹೂಡಿಕೆ ಮಂಡಳಿ'ಯನ್ನು ರಚಿಸಿ ಎಂದು ಸೂಚಿಸಿದೆಯಂತೆ. ಇದು ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇರುವ 'ಅಧಿಕಾರಸಂಪನ್ನ ಸಂಪುಟ ಸಮಿತಿ'ಯಾಗಿರುತ್ತದೆ, ಹಣಕಾಸು ಮಂತ್ರಿಗಳು ಮತ್ತು ಕಾನೂನು ಮಂತ್ರಿಗಳು ಮತ್ತು ಇತರ ಕೆಲವರು ಇದರ ಸದಸ್ಯರಾಗಿರುತ್ತಾರೆ. ಇದರ ಉದ್ದೇಶ ಪರಿಸರದ ಕಾರಣಗಳಿಂದಾಗಿ ತಡೆಗೊಂಡಿರುವ ಬೃಹತ್ ಪ್ರಾಜೆಕ್ಟುಗಳ ಬಗ್ಗೆ ಸಂಬಂಧಪಟ್ಟ ಕಂಪನಿಗಳ ಅಪೀಲುಗಳನ್ನು 'ಶರವೇಗ'ದಲ್ಲಿ(ಫಾಸ್ಟ್ ಟ್ರೇಕ್) ಬಗೆಹರಿಸುವುದು, ಅಂದರೆ ಮಂಜೂರಾತಿ ನೀಡುವುದು.

ಈ ಸೂಚನೆ ಜಾರಿಗೆ ಬಂದಲ್ಲಿ ಸರಕಾರದ ವ್ಯವಹಾರಗಳ ವಿಧಾನಗಳು ತಲೆಕೆಳಗಾಗುತ್ತವೆ, ನಾಗರಿಕರ ಹಿತಗಳಿಗಿಂತ ಕಾರ್ಪೊರೇಟ್ ಹಿತಗಳೇ ಮುಖ್ಯವಾಗುತ್ತವೆ, ಅಲ್ಲದೆ ಇದು ಸುಪ್ರಿಂ ಕೋರ್ಟ್ ಹೇಳಿರುವ ಪರಿಸರ ಕುರಿತ ಆದೇಶಗಳ ಉಲ್ಲಂಘನೆಯಾಗುತ್ತದೆ ಎಂದು ಆತಂಕ ವ್ಯಕ್ತ ಪಡಿಸುತ್ತ ಯುಪಿಎ-2 ಸರಕಾರದ ಪರಿಸರ ಮತ್ತು ಅರಣ್ಯ ಮಂತ್ರಿಗಳೇ ಪ್ರಧಾನ ಮಂತ್ರಿಗಳಿಗೆ ಐದು ಪುಟಗಳ ಪತ್ರ ಬರೆದಿರುವುದಾಗಿ ವರದಿಯಾಗಿದೆ. ತಮ್ಮ ಈ ಸರಕಾರ ಇರುವುದೇ ಕಾರ್ಪೊರೇಟ್ ಹಿತಗಳ ರಕ್ಷಣೆ, ಉತ್ತೇಜನಕ್ಕಾಗಿ ಎಂದು ಇನ್ನೂ ಈ ಪರಮ ಜಾಣೆಯೆನಿಸಿಕೊಂಡ ಮಂತ್ರಿಗಳಿಗೆ ಅರಿವಾಗಿಲ್ಲವೇ ಎಂದು ದೇಶದ ಅತ್ಯಂತ ಸಭ್ಯ ಪ್ರಧಾನಿಗಳೊಂದಿಗೆ ನೀವೂ ಆಶ್ಚರ್ಯಪಡಬಹುದು.

ಈ ವಾರ ಇನ್ನೊಬ್ಬ ಯುಪಿಎ-2 ಮಂತ್ರಿಯೂ ಇಂತಹ ಪೇಚನ್ನು ಅನುಭವಿಸ ಬೇಕಾಗಿ ಬಂದಿದೆ. ಗ್ರಾಮೀಣಾಭಿವೃದ್ಧಿ ಮಂತ್ರಿ ದೇಶಕ್ಕೆ ಈಗ ದೇವಾಲಯಗಳಿಗಿಂತ ಹೆಚ್ಚಾಗಿ ಬೇಕಾಗಿರುವುದು ಶೌಚಾಲಯಗಳು ಎಂದು ಹೇಳುವ ಮೂಲಕ ಇನ್ನೊಂದು ಪ್ರಮುಖ ಸಾಮಾಜಿಕ ವಲಯದಲ್ಲಿ ದೇಶದ ನಿಜ ಸ್ಥಿತಿಯನ್ನು (ತಮಗರಿವಿಲ್ಲದೇ?) ತೆರೆದಿಟ್ಟು ಟೀಕೆಗೆ ಒಳಗಾಗಿದ್ದಾರೆ. ಟೀಕೆ, ಅವರ ಮಾಹಿತಿ ಸರಿಯಿಲ್ಲ ಎಂದಲ್ಲ, ಬದಲಿಗೆ, ಅವರು ಶೌಚಾಲಯ ಮತ್ತು ದೇವಾಲಯಗಳನ್ನು ಒಂದೇ ತಟ್ಟೆಯಲ್ಲಿ(ಅಥವ ವಾಕ್ಯದಲ್ಲಿ) ಇಟ್ಟು ಮೈಲಿಗೆ ಎಸಗಿದ್ದಾರೆ ಎಂದು. ಇಂತಹ ಟೀಕೆ ಬಿಜೆಪಿಯಿಂದ, ಅಥವ ಬೇರೆ ಯಾವುದೇ ಕೋಮುವಾದಿ, ಮೂಲಭೂತವಾದಿಗಳಿಂದ ಬಂದಿದ್ದರೆ ಯಾರೂ ಆಶ್ಚರ್ಯ ಪಡುತ್ತಿರಲಿಲ್ಲ. ಆದರೆ ಈ ಮಂತ್ರಿಗಳು ಸ್ವಂತ ಪಕ್ಷದಿಂದಲೇ, ಯುಪಿಎ-2 ಸರಕಾರದ ನೇತೃತ್ವದಲ್ಲಿರುವ ಪಕ್ಷದಿಂದಲೇ ಟೀಕೆಗೆ ಒಳಗಾಗಿದ್ದಾರೆ. ಯುಪಿಎ ಅಧ್ಯಕ್ಷರ ಅಳಿಯನ ಮೇಲೆ ವಿಪರೀತ ಆಸ್ತಿ ಮಾಡಿಕೊಂಡ ಆಪಾದನೆ ಬಂದಾಗ ಆತನ ಸಮರ್ಥನೆಗೆ ಕಾಂಗ್ರೆಸ್ ಮುಖಂಡರೆಲ್ಲ ಧಾವಿಸಿದಂತೆ ಒಬ್ಬ ಜವಾಬ್ದಾರಿಯುತ ಮಂತ್ರಿಯಾದ ತಮ್ಮ ಸಮರ್ಥನೆಗೆ ಬರಲೇ ಇಲ್ಲ, ಬದಲಿಗೆ ತಮ್ಮ ಪಕ್ಷವೇ ಟೀಕಾಕಾರರೊಂದಿಗೆ ಸೇರಿಕೊಂಡದ್ದನ್ನು ಕಂಡು ಈ ಯುಪಿಎ ಅನುಭವೀ ಮಂತ್ರಿಗಳಿಗೆ ಆಶ್ಚರ್ಯವಾಗಿದೆಯೋ ಇಲ್ಲವೋ ಗೊತ್ತಾಗಿಲ್ಲ.

ಕೆಲವು ದಿನಗಳ ಹಿಂದೆ ಕೇಳ್ಕರ್ ಸಮಿತಿಯ ವರದಿ ನೋಡಿ ಯುಪಿಎ-2 ಸರಕಾರದ ಆಹಾರ ಮಂತ್ರಾಲಯಕ್ಕೂ ಇದೇ ತರಹ ಪೇಚು ಉಂಟಾಗಿತ್ತಂತೆ. ಆ ಸಮಿತಿ ಕೊರತೆ ಹಣಕಾಸಿನ 'ಆತಂಕಕಾರಿ' ಪ್ರಮಾಣವನ್ನು ತಡೆಯಬೇಕಾದರೆ ಆಹಾರ-ಸಬ್ಸಿಡಿಯಲ್ಲಿ ತೀವ್ರ ಕಡಿತ ತರಬೇಕು, ಆಹಾರ ಗ್ಯಾರಂಟಿ ಯೋಜನೆಯನ್ನು ಒಮ್ಮೆಗೇ ಜಾರಿಗೆ ತರದೆ ಹಂತ-ಹಂತವಾಗಿ ಜಾರಿಗೆ ತರಬೇಕು ಎಂಬ ಶಿಫಾರಸಿನ ಬಗ್ಗೆ ಆತಂಕ ವ್ಯಕ್ತಪಡಿಸಿದೆಯಂತೆ. ಈ ಬಗ್ಗೆ ಇಲಾಖೆಯ ವಿರೋಧವನ್ನು ಹಣಕಾಸು ಮಂತ್ರಾಲಯಕ್ಕೆ ತಿಳಿಸುವುದಾಗಿಯೂ ಆಹಾರ ಮಂತ್ರಾಲಯದ ಅಧಿಕಾರಿಗಳು ಹೇಳಿದ್ದರು ಎಂದು ವರದಿಯಾಗಿತ್ತು. ಅವರು ಪರಿಸರ ಮಂತ್ರಿಯಂತೆ ಪತ್ರ ಬರೆದಿದ್ದಾರೋ, ಬರೆದಿದ್ದರೆ ಎಷ್ಟು ಪುಟಗಳ ಪತ್ರ ಎಂದು ತಿಳಿದು ಬಂದಿಲ್ಲ. ಅದರೆ ಈ ಇಲಾಖೆಯ ವಿರೋಧದಿಂದಾಗಿ ಇತ್ತೀಚೆಗೆ ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆಯ ಬೆಲೆಯನ್ನು ದುಪ್ಪಟ್ಟುಗೊಳಿಸುವ(13.50 ರೂ.ನಿಂದ 24 ರೂ.ಗೆ ಏರಿಸುವ) ಸೂಚನೆಯನ್ನು ಸರಕಾರ ಕೈಬಿಟ್ಟಿದೆಯೆಂದು ಬೆನ್ನು ತಟ್ಟಿಕೊಳ್ಳಲಾಗುತ್ತಿದೆ.

ಏಕೆ ಈ ಎಲ್ಲ ಪೇಚಾಟ? 'ಹಣ ಮರಗಳಲ್ಲಿ ಬೆಳೆಯುವುದಿಲ್ಲ' ಎಂಬ ನವ-ಉದಾರವಾದಿಗಳ ಹೊಸ ಮಂತ್ರವನ್ನು ಈ ಯುಪಿಎ ಮಂತ್ರಿಗಳು, ಮಂತ್ರಾಲಯಗಳು ಇನ್ನೂ ಅರಗಿಸಿಕೊಂಡಿಲ್ಲವೇ?

○

..ಹೊಸ ಕ್ರಿಯಾಶೀಲತೆಯ ಅರ್ಥ ನೀಡಿದ ಮಾವೋ

ಪುಟ 16 ರಿಂದ

ಶೈಲಿ, ವಿಧಾನಗಳನ್ನು ರೂಢಿಸಿಕೊಳ್ಳುವುದಕ್ಕೆ ಸಹಾಯಕವಾಯಿತು. ಹೀಗೆ ಅವರು ತಮ್ಮ ಸ್ವಂತ ಜೀವನದ ಅನುಭವ , ಹುನಾನ್‌ನಲ್ಲಿ ನಡೆಯುತ್ತಿದ್ದ ದಂಗೆಗಳು, ಹೋರಾಟಗಳು, ಅವುಗಳಿಗೆ ಮೂಲಕಾರಣಗಳು, ಅದರಿಂದಾಗಿ ಅವರು ಪಡೆದ ಸ್ಫೂರ್ತಿ, ಮೂಡಿದ ಸಾಮಾಜಿಕ ಕಳಕಳಿ ಅವರನ್ನು ದುಡಿವ ಜನರ ಜೀವನವನ್ನು ಪ್ರೀತಿಸುವಂತೆ ಮಾಡಿತು.ಈ ಸಾಮಾಜಿಕ ಅಧ್ಯಯನವನ್ನು ಮಾಡಲು, ಅದಕ್ಕೆ ಅಗತ್ಯವಾದ ಅರ್ಥಶಾಸ್ತ್ರದ, ಇತರ ಸಾಮಾಜಿಕ ವಿಜ್ಞಾನಗಳ,ತತ್ವಜ್ಞಾನದ ಆಳವಾದ ಅಧ್ಯಯನ ಮಾಡಲು ಪ್ರೇರೆಪಿಸಿತು. ಇದರಿಂದ ಪಡೆದ ಸಾಮಾಜಿಕ ಅರಿವು ಸಾಮಾಜಿಕ ಕ್ರಿಯೆಯಲ್ಲಿ ತೊಡಗಿಸಿತು.

ಹೀಗೆ ಮಾವೊರವರಿಗೆ ಮಾರ್ಕ್ಸ್‌ವಾದದ ಪರಿಚಯವಾಗುವ ವೊದಲೇ ಅವರು ಮಾರ್ಕ್ಸ್‌ವಾದವನ್ನು ಅರ್ಥ ಮಾಡಿಕೊಳ್ಳುವ, ಅರಗಿಸಿಕೊಳ್ಳುವ, ಕಾರ್ಯಾಚರಣೆಗಿಳಿಸುವ ಸಿದ್ಧತೆಯನ್ನು ಪಡೆದುಕೊಂಡಿದ್ದರು. ಇದು ಎಷ್ಟೊಂದು ಪ್ರಮುಖವಾದ ಸಂಗತಿ ಎಂಬುದನ್ನು ಚೀನಾದ ಮುಂದಿನ ಬೆಳವಣಿಗೆಗಳು ನಿರೂಪಿಸುತ್ತವೆ.

ವಿದ್ಯಾರ್ಥಿ ಸಂಘಟನೆಯ ಬೆಳವಣಿಗೆ

ತಮ್ಮ ಕಾಲೇಜಿನ ವಿದ್ಯಾರ್ಥಿ ಸಂಘದ ನಾಯಕರಾಗಿ ಆಯ್ಕೆಯಾದ ಮಾವೋರವರು ಮುಖ್ಯಸ್ಥರ ನಿರ್ಬಂಧಗಳನ್ನು ಮೀರಿ ವಿದೇಶಿ ದಬ್ಬಾಳಿಕೆಯ ವಿರುದ್ಧ ಅನೇಕ ಹೋರಾಟಗಳನ್ನು ಸಂಘಟಿಸಿದರು. ಜೊತೆ ಜೊತೆಗೇ ತಮ್ಮ ರಾಜ್ಯದ ಇತರ ಶಾಲೆಗಳ ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಬೆಳೆಸಿದರು. ಅವರನ್ನೆಲ್ಲಾ ಒಂದು ಸಂಘಟನೆಯೊಳಕ್ಕೆ ತರಲು ಪ್ರಯತ್ನಿಸಿದರು. ಆ ಮೂಲಕ ಅಖಿಲ ಚೀನಾ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಲು ಬುನಾದಿ ಹಾಕಿದರು. ಮುಂದಿನ ದಿನಗಳಲ್ಲಿ ಹುನಾನ್‌ನ ವಿದ್ಯಾರ್ಥಿ ಚಳುವಳಿ ಗರಿಗೆದರಲು ಈ ನಾಂದಿಯಾಯಿತು.

ಹೊಸ ಚೀನಾ ಅಧ್ಯಯನ ಸಂಘದ ಸ್ಥಾಪನೆ

1915ರಲ್ಲಿ ಚೀನಾದಲ್ಲಿ ಆರಂಭವಾದ ಒಂದು ಹೊಸ ಪತ್ರಿಕೆ 'ನವ ಯುವಜನತೆ ' ಒಂದು ಸಾಂಸ್ಕೃತಿಕ ಅಲೆಯನ್ನೇ ಸೃಷ್ಟಿಸಿತು. ಮುಂದೆ ಮಾರ್ಕ್ಸ್‌ವಾದದಕ ಕಡೆಗೆ ಆಕರ್ಷಿತರಾದ ಚೆನ್‌ಡುಷಿಯು ಅವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ ಈ ಪತ್ರಿಕೆ 'ಯುವಜನತೆಗೊಂದು ಕರೆ' ನೀಡಿತು. ಗುಲಾಮೀ ಮನೋಭಾವನೆಗೆ ಬದಲಾಗಿ ಸ್ವತಂತ್ರ ಮನೋಭಾವ, ಸಂಪ್ರದಾಯ ಶರಣತೆಗೆ ಬದಲಾಗಿ ಪ್ರಗತಿಪರತೆ, ಹಗಲುಗನಸುಗಳಿಗೆ ಬದಲಾಗಿ ವೈಜ್ಞಾನಿಕ ಚಿಂತನೆ ಹೊಸ ಯುವಜನರ ಕರೆಯಾಗಿತ್ತು. "ಕನ್‌ಫ್ಯೂಷಿಯಸನ ಚಿಂತನೆಯ ಅಡಿಯನ್ನು ಪುಡಿಗುಟ್ಟಿ, ಶ್ರೀಮಾನ್ ಪ್ರಜಾಪ್ರಭುತ್ವ, ಶ್ರೀಮಾನ್ ವಿಜ್ಞಾನವೆಂಬ ಪಶ್ಚಿಮದ ಮಿತ್ರರ ಸಲಹೆ ಪಡೆಯಿರಿ" ಇವರ ಘೋಷಣೆ. ಹು ಷಿ ಎಂಬ ಬುದ್ಧಿಜೀವಿ ಮೇಲೆ ಉಲ್ಲೇಖಿಸಲಾದ ಲೂ ಷೂನ್ ಎಂಬ ಪ್ರಗತಿಪರ ಸಾಹಿತಿ ಕೂಡ ಅಂದಿನ ಯುವಕರ ಆರಾಧ್ಯ ಪುರುಷರಾದರು. ಕರಪತ್ರಗಳು, ಕಿರು ಪುಸ್ತಕಗಳು, ಭಿತ್ತಿಪತ್ರಗಳು ಜನಸಾಮಾನ್ಯರ ಭಾಷೆಯಲ್ಲಿ ಎಂಬುದವರ ಮತ್ತೊಂದು ಪ್ರಮುಖ ಘೋಷಣೆಯಾಗಿತ್ತು.

ಮಾವೋರವರು ಹಾಗೂ ಅವರ ಸಮಕಾಲೀನ ಯುವಕರು ಸಾವಿರ ಸಾವಿರ ಸಂಖ್ಯೆಯಲ್ಲಿ ಈ ಪತ್ರಿಕೆಯಿಂದ ಪ್ರಭಾವಿತರಾದರು. ಮಾವೋ ಅದಕ್ಕೆ ಹಲವು ಲೇಖನಗಳನ್ನೂ ಬರೆದರು. ಅದರಲ್ಲಿ ಈ ಲೇಖನ ಮಾಲೆಯ ಎರಡನೇ ಭಾಗದಲ್ಲಿ ವಿವರಿಸಲ್ಪಟ್ಟ ದೈಹಿಕ ಶಿಕ್ಷಣದ ಬಗೆಗಿನ ಲೇಖನವೂ ಒಂದು.ಈ ಪ್ರಭಾವ ಚೀನಾದ ಅನೇಕನಗರಗಳಲ್ಲಿ ವಿವಿಧ ರೀತಿಯ ಪ್ರಗತಿಪರ ಚಿಂತನೆಯ ಸಂಘಗಳ ಹುಟ್ಟಿಗೆ ನಾಂದಿಯಾಯಿತು.

ಹುನಾನ್‌ನಲ್ಲಿ ಮಾವೋರವರು ಶಿನ್ ಮಿನ್ ಶ್ಯು ಹುಯಿ (ಹೊಸ ಜನರ ಅಧ್ಯಯನ ಸಂಘ)ಎಂಬ ಸಂಘವನ್ನು ಸ್ಥಾಪಿಸಿದರು. ಹದಿಮೂರು ಸದಸ್ಯರಿಂದ ಆರಂಭವಾದ ಈ ಸಂಘ ಎಂಬತ್ತು ಜನರನ್ನು ಒಳಗೊಂಡಿತು. ಮುಂದೆ ಹುನಾನ್‌ನಲ್ಲಿ ಅನೇಕ ಪ್ರಗತಿಪರ ಹೋರಾಟಗಳನ್ನು ಹುಟ್ಟು ಹಾಕಿದ ಈ ಸಂಘ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿತು ಎಂಬುದನ್ನು ಮುಂದಿನ ಲೇಖನದಲ್ಲಿ ಪರಿಶೀಲಿಸೋಣ.

●



ಜಿ.ಎನ್.ನಾಗರಾಜ್ 10

ವಿದ್ಯಾರ್ಥಿ ಚಳುವಳಿಗೊಂದು ಹೊಸ ಕ್ರಿಯಾಶೀಲತೆಯ ಅರ್ಥ ನೀಡಿದ ಮಾವೋ

ವಿದ್ಯಾರ್ಥಿಗಳ ಸಂಶೋಧನೆ

ವಿದ್ಯಾರ್ಥಿಗಳದ್ದೇ ಆದ ಒಂದು ಸಂಶೋಧನ ತಂಡಗಳನ್ನು ಮಾವೋ ರಚಿಸಿದರು. ಸಾಮಾಜಿಕ ವಿಷಯಗಳ ಬಗ್ಗೆ ಶೋಧ ನಡೆಸುವುದಕ್ಕಾಗಿ ರಚಿಸಿದ ಈ ತಂಡಗಳು ವಿವಿಧ ಕಾರಖಾನೆಗಳಿಗೆ ಭೇಟಿ ನೀಡಿ ಅಲ್ಲಿಯ ಪರಿಸ್ಥಿತಿಗಳ ಅಧ್ಯಯನ ನಡೆಸಿದುವು.

ಹುನಾನ್‌ನ ಹಳ್ಳಿಗಳಲ್ಲಿ ಕಾಲ್ನಡಿಗೆ ಮೂಲಕ ಅಧ್ಯಯನ:

ಪತ್ರಿಕೆಯೊಂದರಲ್ಲಿ ಇಬ್ಬರು ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿಯೇ ಇಡೀ ಚೀನಾ ಪ್ರವಾಸ ಮಾಡುತ್ತಾ ಟಿಬೆಟನ್ನು ತಲುಪಿದರೆಂಬುದನ್ನು ಓದಿದ ಮಾವೋ ಕಾಲೇಜಿನ ರಜಾ ದಿನಗಳಲ್ಲಿ ಗೆಳೆಯನೊಬ್ಬನನ್ನು ಜೊತೆಗೆ ಹುಡುಕಿಕೊಂಡು ಹುನಾನ್‌ನ ಹಳ್ಳಿಗಳನ್ನು ಕಾಲ್ನಡಿಗೆಯಲ್ಲಿಯೇ ಸುತ್ತಲು ಹೊರಟರು. ರೈತರ ಮನೆಗಳಲ್ಲಿಯೇ ವಾಸ, ಊಟ ಮಾಡುತ್ತ ನಾಲ್ಕು ನೂರ ಎಂಬತ್ತು ಕಿ.ಮೀ. ನಡೆದಾಡಿದರು. ಪ್ರತಿಹಳ್ಳಿಯಲ್ಲಿಯೂ ರೈತರ ಜೀವನ ಪರಿಸ್ಥಿತಿ, ಮಳೆ ಬೆಳೆ, ಜಮೀನುದಾರರಿಗೆ ನೀಡಬೇಕಾದ ಗೇಣಿ ಅಥವಾ ಪಾಲಿನ ಪ್ರಮಾಣ ಇತ್ಯಾದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಮಾಡಿಕೊಂಡರು. ಹೀಗೆ ಯಾವ ತರಬೇತಿ, ಮಾರ್ಗದರ್ಶನಗಳೂ ಇಲ್ಲದೆ ಸಂಶೋಧಕರಾದರು.

ಶಿಕ್ಷಣ, ಅಧ್ಯಯನ, ಅರಿವು ತಂತಾನೆ ಕ್ರಮವಾಗಿದ್ದ ಪರಿಸ್ಥಿತಿ ಇದ್ದ ಚೀನಾದಲ್ಲಿ ಮಾವೋ ಕೈಗೊಂಡ ಅಧ್ಯಯನದ ಕ್ರಮವು ವಿಶ್ವದ ಕಮ್ಯುನಿಸ್ಟರೆಲ್ಲರಿಗೂ ಮಾದರಿಯಾಗಬಲ್ಲಂತಹುದು.

ಕಾರ್ಮಿಕರ, ರೈತರ ಜೀವನ ಪರಿಸ್ಥಿತಿಗಳ ಅಧ್ಯಯನದಿಂದ ಪಡೆದ ಅರಿವು ಮಾವೋರವರನ್ನು ಕ್ರಿಯೆಗೆ ಇಳಿಸಿತು. ವಿದ್ಯಾರ್ಥಿಯಾಗಿಯೇ ನೂರಾರು ಕಷ್ಟ ಕೋಟಲೆಗಳನ್ನು ಎದುರಿಸುತ್ತಿದ್ದ ಈ ಜನರಿಗೆ ವಿದ್ಯಾರ್ಥಿಯಾದ ತಾನೇನು ಸಹಾಯ ಮಾಡಬಹುದು ಎಂಬುದು ಅವರನ್ನು ಕಾಡಿತು. ಇವರ ಈ ಯೋಚನೆಯಲ್ಲಿ ಅವರ ಶಿಕ್ಷಕರಾದ ಶು ತೆ-ಲಿ ಯವರೂ ಕೂಡ ಭಾಗಿಯಾದರು. ಇಬ್ಬರೂ ಜೊತೆಗೂಡಿ ಕಾರ್ಮಿಕರಿಗೆ ಹಾಗೂ ಅಂಗಡಿಗಳ ಕೆಲಸಗಾರರಿಗೆ ಒಂದು ರಾತ್ರಿ ಶಾಲೆಯನ್ನು ತೆರೆಯುವ,-ಅವರಿಗೆ ಕೇವಲ ಅಕ್ಷರಾಭ್ಯಾಸ ಮಾತ್ರವೇ ಅಲ್ಲದೆ ಪ್ರಾಥಮಿಕ ತಿಳುವಳಿಕೆಯನ್ನು ನೀಡಲು ಯೋಜಿಸಿದರು.

ಇಂದಿಗೂ ಅವರು ಅಂದು ರಾತ್ರಿ ಶಾಲೆಗೆ ಸೇರಲು ಕಾರ್ಮಿಕರನ್ನು ಆಕರ್ಷಿಸಲೆಂದು ಬರೆದ ಅವರದ್ದೇ ಕೈ ಬರಹದ ಭಿತ್ತಿಪತ್ರವೊಂದು (ಪೋಸ್ಟರ್) ಲಭ್ಯವಿದೆ. ಅದರಲ್ಲಿ ಮಾವೋರವರು :

"ನಮ್ಮದೇಶದಲ್ಲಿ ಬಹಳ ಜನಕ್ಕೆ ಶಿಕ್ಷಣ ಪಡೆಯುವ ಅವಕಾಶವಿಲ್ಲ........ ಸಾಹಿತ್ಯಿಕ ಭಾಷೆಯಲ್ಲಿ ಲೆಕ್ಚರ್ ಹೊಡೆದರೆ ಯಾರಿಗೂ ಅರ್ಥವಾಗುವುದಿಲ್ಲ ....ಆ ಭಾಷೆಯಲ್ಲಿ ಬರೆದರೆ ಓದಲಾಗುವುದಿಲ್ಲ. ಸರಳ ಭಾಷೆಯಲ್ಲಿ ಕಲಿಯಲು ಬನ್ನಿ.......ನೀವು ಯಾವ ಬಟ್ಟೆಯನ್ನಾದರೂ ತೊಟ್ಟು ಶಾಲೆಗೆ ಬರಬಹುದು. ನಾವು ಮರವಲ್ಲ, ಕಲ್ಲಲ್ಲ. ನಾವು ಮನುಷ್ಯರು........ಬೇಗ ಬನ್ನಿ ರಾತ್ರಿ ಶಾಲೆಗೆ ಸೇರಿಕೊಳ್ಳಿ.....ಓದಲು. ಬರೆಯಲು, ಲೆಕ್ಕ ಮಾಡಲು ಕಲಿಸುತ್ತೇವೆ....ಯಾವುದೇ ಫೀಸಿಲ್ಲ. ನೋಟ್ ಪುಸ್ತಕಗಳು. ಮತ್ತಿತರ ವಸ್ತುಗಳನ್ನೂ ಉಚಿತವಾಗಿಕೊಡಲಾಗುತ್ತದೆ"

ಈ ಭಿತ್ತಿಪತ್ರದಲ್ಲಿ ಗಮನಿಸಬೇಕಾದ ಹಲವು ಅಂಶಗಳಿವೆ. ಬಟ್ಟೆಗೆ ಹಾಗೂ ಭಾಷೆಗೆ ಸಂಬಂಧಿಸಿ .ಅಂದು ಕಾರ್ಮಿಕರಿಗೆ ಇದ್ದ ಕಲಿಯುವ ಹಂಬಲವನ್ನು ದುರುಪಯೋಗಿಸಿಕೊಂಡು ಇಂತಹ ಬಟ್ಟೆಯಲ್ಲಿಯೇ ಬರಬೇಕೆಂದು ವಿಧಿಸುವ ,ಕಾರ್ಮಿಕರಿಗೆ ತಿಳಿಯದ ಶಾಸ್ತ್ರೀಯ ಭಾಷೆಯಲ್ಲಿ ' ಉಪನ್ಯಾಸ ' ಮಾಡುವ , ಫೀಸುಗಳನ್ನು ವಸೂಲು ಮಾಡುವ, ನಿರ್ದಿಷ್ಟ ರೀತಿಯ ಉಡುಪನ್ನು ಧರಿಸಬೇಕೆಂದು ವಿಧಿಸುವ ಶಾಲೆಗಳಿದ್ದವೆಂಬುದು ತಿಳಿದುಬರುತ್ತದೆ.

ಮಾವೋರವರು ಜನ ಸಾಮಾನ್ಯರು ಬಳಸುವ ಭಾಷೆಯಲ್ಲಿಯೇ ಅವರ ಕಲಿಕೆ ಸಾಧ್ಯವೆಂಬ ತೀರ್ಮಾನಕ್ಕೆ ಬಂದಿದ್ದರು ಎಂಬುದು ಒಂದು ಕಡೆ ಅವರ ಜನರೊಡನಾಟದ ಫಲ. ಮತ್ತೊಂದು ಕಡೆ



ಮಾವೋರವರನ್ನು ಪ್ರಭಾವಿಸಿದ ಹುನಾನ್ ನಾರ್ಮಲ್ ಕಾಲೇಜ್

ಅಂದು ಚೀನಾದಲ್ಲಿ ಎದ್ದು ಬಂದಚರ್ಚೆಯೂ ಕಾರಣ.ಚೀನಾದ ಪ್ರಸಿದ್ಧ ಸಾಹಿತಿ ಲೂ ಷೂನ್‌ರವರ ನೇತೃತ್ವದಲಿ್ಲ ಅಲ್ಲಿನ ಸಾಹಿತಿಗಳು, ಬುದ್ಧಿ ಜೀವಿಗಳು ಜನಸಾಮಾನ್ಯರ ಭಾಷೆಯನ್ನು ಬಳಸುವ ಬಗ್ಗೆ, ಹಾಗೂ ಚೀನಾಕ್ಕೆ ಎಂತಹ ಸಾಹಿತ್ಯ ಬೇಕು. ಸಾಹಿತ್ಯ ಯಾರಿಗಾಗಿ ಎಂಬ ಬಗ್ಗೆ ಒಂದು ದೊಡ್ಡ ಚರ್ಚೆಯನ್ನು ಆರಂಭಿಸಿದರು. "ದಮನಕಾರಿ ಆಡಳಿತದ ವಿರುದ್ಧ ಜನರನ್ನು ಒಗ್ಗೂಡಿಸುವ ರಾಜಕೀಯ, ಸಾಮಾಜಿಕ ವಿಚಾರಗಳು ಸಾಹಿತ್ಯದಲ್ಲಿ ಮೂಡಬೇಕು. ಮೇಲ್‌ವರ್ಗದವರಿಗಲ್ಲ ಜನ ಸಮೂಹಗಳಿಗಾಗಿ ಸಾಹಿತ್ಯ. "ಇದು ಆಗ ಸಾಂಸ್ಕೃತಿಕ ರಂಗದಲ್ಲಿ ಎದ್ದ ಚಳುವಳಿಯ ಅಲೆ. ಅಂದಿನಿಂದ ಸಾಹಿತ್ಯ, ಸಾಂಸ್ಕೃತಿಕ ರಂಗವೂ ಚೀನಾದ ಕ್ರಾಂತಿಕಾರಿ ಪ್ರಕ್ರಿಯೆಯ ಭಾಗವಾಯಿತು. ಮಾವೋರವರೂ ಈ ಸಾಂಸ್ಕೃತಿಕ ಚಳುವಳಿಯ ಭಾಗವಾದರು.

ಉಚಿತ ಶಾಲೆ, ಉಚಿತ ಪುಸ್ತಕಗಳನ್ನು ಒದಗಿಸುವುದಕ್ಕಾಗಿ ಅವರು ಎಷ್ಟೆಲ್ಲಾ ರೀತಿ ಶ್ರಮಿಸಿರಬಹುದೆಂಬುದನ್ನೂ ಊಹಿಸಿಕೊಳ್ಳಬಹುದು.

ಈ ಶಾಲೆಯಲ್ಲಿ ಮಾವೋರವರು ಇತಿಹಾಸ ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕಲಿಸುತ್ತಿದ್ದರು. ಅದರ ಭಾಗವಾಗಿ ಅವರು ತಾವು ಕಲಿತ ರೀತಿಯಲ್ಲಿಯೇ ಕಾರ್ಮಿಕರಿಗೆ ದಿನ ಪತ್ರಿಕೆ, ವಾರಪತ್ರಿಕೆಗಳನ್ನು ಓದಿ ಹೇಳುತ್ತಿದ್ದರು. ಅವುಗಳ ಬಗ್ಗೆ ಚರ್ಚೆ ಮಾಡ ಹಚ್ಚುತ್ತಿದ್ದರು. ಇದು ಎಂತಹ ಸ್ಫೋಟಕವಾದ ಕಲಿಕೆ ಎಂಬುದನ್ನು ಸಾಮಾಜಿಕ ಚಳುವಳಿಗಳಲ್ಲಿ ತೊಡಗಿದ ಯಾರಿಗಾದರೂ ಅರ್ಥವಾಗುವ ವಿಷಯ.

ಇದನ್ನೆಲ್ಲ ಮಾಡುವಾಗ ಅವರಿಗಾಗಲೀ , ಅಂದಿನ ಹುನಾನ್ ವಾತಾವರಣಕ್ಕಾಗಲೀ ಮಾರ್ಕ್ಸ್‌ವಾದ ಪ್ರವೇಶ ಮಾಡಿರಲೇ ಇಲ್ಲವೆಂಬುದನ್ನು ನೆನೆದರೆ ಈ ಸಾಮಾಜಿಕ ಕಳಕಳಿ ಮತ್ತಷ್ಟು ಅರ್ಥ ಪಡೆದುಕೊಳ್ಳುತ್ತದೆ. ಅದೇ ಸಮಯದಲ್ಲಿಯೇ ಕಾರ್ಮಿಕರಿಗೆ ರಾಜಕೀಯ ಶಿಕ್ಷಣ ನೀಡಿದ ಈ ಅನುಭವಅವರಿಗೆ

ಇಡೀ ಚೀನಾದ ಜನತೆಗೆ ರಾಜಕೀಯ ಶಿಕ್ಷಣ ನೀಡುವುದಕ್ಕೆ, ಅದಕ್ಕೆ ಸೂಕ್ತವಾದ ಭಾಷೆ

ಪುಟ 15ಕ್ಕೆ

ಶುಭಾಶಯಗಳು



ಸಿಪಿಐ(ಎಂ) ಬೆಂಗಳೂರು ಪೂರ್ವ ವಲಯ ಸಮಿತಿ ಸದಸ್ಯರು ಹಾಗೂ ಸಿಐಟಿಯು ಮುಖಂಡರೂ ಆದ ಕಾಂ.ಸಿ.ರಾಮಚಂದ್ರ ಅವರ ಮಗ ಆರ್.ಪ್ರಸಾದ್ ಅವರು ಎನ್.ಮಾಲಾ ಅವರೊಂದಿಗೆ ಮದುವೆ ಆದ ಸಂಭ್ರಮದಲ್ಲಿ "ಜನಶಕ್ತಿ"ಗೆ 2 ಸಾವಿರ ರೂಗಳ ಕೊಡುಗೆ ನೀಡಿರುತ್ತಾರೆ. ಅದೇ ರೀತಿ ಸಿಪಿಐ(ಎಂ) ರಾಜ್ಯ ಸಮಿತಿ, ಬೆಂಗಳೂರು ಉತ್ತರ ಮತ್ತು ಪೂರ್ವ ಸಮಿತಿಗಳಿಗೆ ತಲಾ 2 ಸಾವಿರ ರೂ ಕೊಡುಗೆ ನೀಡಿರುತ್ತಾರೆ.

ಸೆ.28.2012 ರಂದು ಹೊಸ ಬದುಕಿಗೆ ಅಡಿ ಇಟ್ಟ ಈ ನವ ವಿವಾಹಿತರಿಗೆ "ಜನಶಕ್ತಿ"ಯ ಶುಭಾಶಯಗಳು

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH